ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 28 ಜುಲೈ 10, 2005 ಬೆಲೆ ರೂ. 3.00





ಬ್ಯಾಂಕುಗಳ ವಿಲೀನವೆಂಬ ವಿನಾಶದ ಹೆಜ್ಜೆ



ಜೆಡಿ(ಎಸ್) ನಾಯಕರ ಆಯ್ಕೆ ಯಾವುದು?




ತುರ್ತುಪರಿಸ್ಥಿತಿ

ಕರಾಳ ರಾಣಿಯ ಕಾಲು ಹಿಡಿದ ಸಂಘಪರಿವಾರ

ಮಂಗಳೂರು ಗಲಭೆ :



ಬೆಂಕಿ ಹಚ್ಚಿದ ಭಜರಂಗದಳ ತಿದಿಯೂದಿದ ಪೊಲೀಸರು



ದುಡಿವ ಜನತೆಯ ಧ್ವನಿ
'ಪೀಪಲ್ಸ್ ಡೆಮಾಕ್ರಸಿ'
ಪತ್ರಿಕೆಗೆ 40 ವರ್ಷ

- ಕಿರ್ಜಿಗಿಸ್ತಾನ್ : ಬಂತು 'ಡಾಲರ್ ಡೆಮೋಕ್ರಸಿ'
- ಕಾಮ್ರೇಡ್ ಸೂರಿ ಸ್ಮರಣೆ



ಯಾರಾದರೂ ಮೂವತ್ತು ನಲವತ್ತು ವರ್ಷಗಳ ಕೆಳಗೆ ಜಿನ್ನಾ ಅವರನ್ನು 'ಇಸ್ಲಾಂ ಧರ್ಮೋದ್ಧಾರಕ' ಎಂದು ಕರೆದಿದ್ದರೆ ಬೇರೆಲ್ಲರಿಗಿಂತ ಸ್ವತಃ ಜಿನ್ನಾಗೇ ಹೆಚ್ಚು ಅಚ್ಚರಿಯಾಗುತ್ತಿತ್ತೇನೊ? ಆ ದಿನಗಳಲ್ಲಿ ಯಾರಾದರೂ ಧರ್ಮದ ಬಗ್ಗೆ ಮಾತಾಡಿದರೆ ಜಿನ್ನಾ ಸಿನಿಕತನದ ನಗೆ ನಕ್ಕು ಸುಮ್ಮನಾಗುತ್ತಿದ್ದರು. ಧಾರ್ಮಿಕ ವಿದ್ವೇಷದ ಮಾತುಗಳನ್ನು ಅವರು ಖಂಡಿಸುತ್ತಿದ್ದರು. ಆದರೆ ಇಂತಹ ಜಿನ್ನಾರವರು ಮುಂದೆ ಏನಾದರು? ಪಾಕಿಸ್ತಾನದ ಜನಕ ಜಿನ್ನಾರವರನ್ನು ಹತ್ತಿರದಿಂದ ಕಂಡ ಖ್ಯಾತ ಪತ್ರಕರ್ತ ಬರ್ಕ್‌ವೈಟ್ 1948 ರ ಸುಮಾರಿನಲ್ಲಿ ಕಂಡ ವ್ಯಕ್ತಿತ್ವದ ಎಳೆಗಳ ಹಲವು. ಜಿನ್ನಾ ಕುರಿತ ಚರ್ಚೆ ನಡೆದಿರುವ ಈ ಸಂದರ್ಭದಲ್ಲಿ ನಿಮಗಾಗಿ.....

ಪಾಕಿಸ್ತಾನದ ಸೃಷ್ಟಿಕರ್ತ

ಜಿನ್ನಾ: ಬಹಿರಂಗ-ಅಂತರಂಗ

ಜಿನ್ನಾ ತಾವು ಹೇಳಿಕೊಂಡಂತೆ ಮುಸ್ಲಿಂ ಜನಸಾಮಾನ್ಯರ ಉದ್ಧಾರಕ್ಕೆ ಹೋರಾಡುವ ಬದಲಾಗಿ ಮುಸ್ಲಿಂ ಶ್ರೀಮಂತ ವರ್ಗದ ಹಿತಾಸಕ್ತಿಗಳಿಗೆ ಹೋರಾಡಿದರು ಎಂಬುದನ್ನು ಕಂಡುಕೊಳ್ಳಬಹುದು. ಹೀಗೆ ಮಾಡುವಲ್ಲಿ ಅವರು ಯಾವುದೇ ಐಹಿಕ ಲಾಭವನ್ನು ನಿರೀಕ್ಷಿಸಿರಲಿಲ್ಲ.

ವೈಯಕ್ತಿಕವಾಗಿ ಜಿನ್ನಾ ಶುದ್ಧ ಹಸ್ತದ ಮನುಷ್ಯ ಎಂದು ಪ್ರಸಿದ್ಧರಾಗಿದ್ದರು. ಈ ಕಾರಣಕ್ಕಾಗಿಯೇ ಶ್ರೀಮಂತರಂತೆಯೇ ಬಡವರೂ ಕೂಡ ಅವರನ್ನು ಆದರಿಸುತ್ತಿದ್ದರು. ಅವರು ವೈಯಕ್ತಿಕವಾಗಿ ಸಂಪತ್ತನ್ನು ಗಳಿಸಿಕೊಳ್ಳುವ ಉದ್ದೇಶವನ್ನು ಯಾವಾಗಲೂ ಹೊಂದಿರಲಿಲ್ಲ. ಈಗ ಅಧಿಕಾರ ಹಿಡಿಯುವುದೊಂದು ಅವರಿಗೆ ಮುಖ್ಯವಾಗಿತ್ತು. ಇಷ್ಟೆಲ್ಲ ಯಶಸ್ಸು, ಪ್ರಭಾವ, ಗೌರವ ಹೊಂದಿದ್ದ ವ್ಯಕ್ತಿ ಯಾಕೆ ಇದ್ದಕ್ಕಿದ್ದಂತೆ ತಮ್ಮ ಈ ಹಿಂದಿನ ರಾಜಕೀಯ ಗುರಿಗಳಿಂದ ಹಾಗೂ ಜೊತೆಗಾರರಿಂದ ಮುಖ ತಿರುವಿ ಬೇರೆದಾರಿ ಹಿಡಿದರು? ಅವರನ್ನು ಚೆನ್ನಾಗಿ ಅರಿತಿದ್ದ ಕೆಲವರ ಅಭಿಪ್ರಾಯದಲ್ಲಿ ಜಿನ್ನಾರ ಪ್ರಿಯ ಪತ್ನಿಯ ಸಾವು ಈ ಬದಲಾವಣೆಗೆ ಮುಖ್ಯ ಕಾರಣ.



ವಾಸ್ತವವಾಗಿ ಜಿನ್ನಾರಿಗೆ ಇಬ್ಬರು ಪತ್ನಿಯರು. ಅವರ ಬದುಕಿನ ಕಥೆಯಲ್ಲಿ ಮೊದಲ ಪತ್ನಿಯ ಉಲ್ಲೇಖವೇ ಬರುವುದಿಲ್ಲ. ಆಕೆ ನವವಧುವಾಗಿದ್ದಾಗಲೇ ತೀರಿಕೊಂಡಳು. ಜಿನ್ನಾ ಅವಳನ್ನು ನೋಡಲೇ ಇಲ್ಲ. ಈ ಮದುವೆಯಾದಾಗ ಜಿನ್ನಾ ಇನ್ನೂ ವಿದ್ಯಾರ್ಥಿ. ಮುಸ್ಲಿಮರ ಮಡಿವಂತ ಸಂಪ್ರದಾಯದ ಪ್ರಕಾರ ಮದುವೆಯಲ್ಲಿ ಆ ಹುಡುಗಿಯ ಪುರುಷ ಪ್ರತಿನಿಧಿಗಳು ಮಾತ್ರ ಇದ್ದರು. ಆಮೇಲೆ ಈ ನವವಿವಾಹಿತ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಹೋದ. ಆತ ಹಿಂದಿರುಗಿ ಬರುವಷ್ಟರಲ್ಲಿ ಹೆಂಡತಿ ತೀರಿಕೊಂಡಿದ್ದಳು.

ಜಿನ್ನಾರ ಎರಡನೇ ಮದುವೆ ಈ ಕಟ್ಟಾ ಸಂಪ್ರದಾಯದ ಮದುವೆಗೆ ತದ್ವಿರುದ್ಧವಾಗಿತ್ತು. ಜಿನ್ನಾರ ಹೊಸ ಹೆಂಡತಿ ಮುಸ್ಲಿಮಳಲ್ಲ, ಪಾರ್ಸಿ. ಈ ಮದುವೆಯನ್ನು ತಂದೆತಾಯಿಗಳು ಏರ್ಪಡಿಸಲಿಲ್ಲ. ಬದಲಿಗೆ ಇದು ಪ್ರೇಮವಿವಾಹವಾಗಿತ್ತು. ಈಕೆ ಹುಟ್ಟಿದ ದಿನವೇ ಜಿನ್ನಾ ಅವಳನ್ನು ನೋಡಿದ್ದರು. ಬಾಂಬೆಯ ಶ್ರೀಮಂತ ವ್ಯಾಪಾರಿಯಾಗಿದ್ದ ದಿನ್‌ಶಾ ಪೆಟಿಟ್ ಜಿನ್ನಾರ ಆಪ್ತಮಿತ್ರ. ಜಿನ್ನಾ ಆಗಾಗ ಈ ಮಿತ್ರನ ಮನೆಗೆ ಬರುತ್ತಿದ್ದರು.

ಒಂದು ಸಲ ಎಂದಿನಂತೆ ಮಿತ್ರನ ಮನೆಗೆ ಜಿನ್ನಾ ಬಂದರು. ಆಗಷ್ಟೇ ಹುಟ್ಟಿದ್ದ ತಮ್ಮ ಮಗುವನ್ನು ಎತ್ತಿಕೊಂಡು ಬಂದ ದಿನ್ ಶಾ ಮಿತ್ರನ ಕೈಗೆ ಮಗುವನ್ನು ಕೊಟ್ಟು ಈ ಮಗುವನ್ನು ಹಿಡಿದ ಮೊದಲ ವ್ಯಕ್ತಿ ನೀನೇ ಎಂದರು. ಈ ಮಗು 18 ವರ್ಷದ ಹುಡುಗಿಯಾದಾಗ ನಲವತ್ತು ವರ್ಷ ವಯಸ್ಸಾಗಿದ್ದ ಜಿನ್ನಾ ಮದುವೆಯ ಪ್ರಸ್ತಾಪ ಮಾಡಿದರು. ಅವಳೋ ಉತ್ಸಾಹ ತುಂಬಿದ ರೂಪಸಿ. ಅವಳು ಮಾಡಿದ್ದೆಲ್ಲವೂ ಸಂಪ್ರದಾಯಕ್ಕೆ ವಿರುದ್ಧವಾಗೇ ಇರುತ್ತಿತ್ತು. ಆಗ ವೃತ್ತಿಪರ ನಟಿಯರಲ್ಲದೆ ಬೇರೆ ಯಾರೂ ಕೂಡ ಮೇಕಪ್ ಮಾಡಿಕೊಳ್ಳುತ್ತಿರಲಿಲ್ಲ. ಇವಳು ಮಾತ್ರ ಸದಾ ಪೌಡರ್ ಪಫ್ ಹಿಡಿದುಕೊಂಡೇ ಇರುತ್ತಿದ್ದಳು ಕುಲೀನ ಮುಸ್ಲಿಂ ಹೆಂಗಸರು ಮುಖಕ್ಕೆ ಪರದೆ ಹಾಕಿಕೊಂಡು ದಪ್ಪದಪ್ಪ ತುಂಬು ಉಡುಗೆಗಳಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡರೆ ಜಿನ್ನಾ ಪತ್ನಿ ಅತ್ಯಂತ ನವಿರಾದ ತೆಳುವಾದ ಪೊರೆಯಂತಿದ್ದ ಪಾರದರ್ಶಕ ಸೀರೆಗಳನ್ನು ಉಡುತ್ತಿದ್ದಳು. ಅವಳ ನಡೆನುಡಿ ಎಲ್ಲರೂ ಆಡಿಕೊಳ್ಳುವ ವಿಷಯವಾಗಿಬಿಟ್ಟಿತ್ತು. ಜಿನ್ನಾ ಮತ್ತು ಅವರ ಕಿರಿಯ ಪತ್ನಿಯ ಮನೋಭಾವ, ಪ್ರೇಮನಿಷ್ಠೆ ಕುರಿತು ಅನೇಕ ಕಥೆಗಳಿವೆ. ಪ್ರೇಮಪತ್ರಗಳಲ್ಲಿ ಜಿನ್ನಾ ಎಂ.ಎ. ಜಿನ್ನಾ ಎಂದು ಸಹಿಮಾಡುತ್ತಾರೆ ಎಂದು ಆಕೆ ಗೆಳತಿಯರ ಬಗ್ಗೆ ದೂರಿನಂತೆ ಹೇಳಿಕೊಂಡಿದ್ದಳು. ಪ್ರತಿದಿನ ಬೆಳಿಗ್ಗೆ ಜಿನ್ನಾ ಅವಳ ತಲೆದಿಂಬಿನ ಮೇಲೆ ನೂರು ರೂಪಾಯಿಯ ನೋಟನ್ನು ಇರಿಸುವುದು ಅವಳಿಗೆ ಪ್ರಿಯವಾದ ವಿಷಯವಾಗಿತ್ತು.

ಒಂದು ಸಲ ಜಿನ್ನಾ, ಬ್ರಿಟೀಷರ ಮಿಲಿಟರಿ ಬಜೆಟ್ಟನ್ನು ವಿರೋಧಿಸಿ ಬಹುಮುಖ್ಯವಾದ ಭಾಷಣ ಮಾಡುತ್ತಿದ್ದರು. ಅವರ ಮಾತಿನ ವೈಖರಿಯನ್ನು ಕೇಳುವುದಕ್ಕಾಗಿಯೇ ಅವರ ಅನುಯಾಯಿಗಳು ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದರು. ಜಿನ್ನಾ ತಮ್ಮ ಮಾತನ್ನು ಸೊಗಸಾಗಿ ಆರಂಭಿಸಿದ್ದರು. ಎಲ್ಲರ ದೃಷ್ಟಿಯೂ ಅವರ ಮೇಲೆ ಕೇಂದ್ರಿಕೃತವಾಗಿತ್ತು. ಆಗ ಶ್ರೀಮತಿ ಜಿನ್ನಾ ಪ್ರತಿಷ್ಠಿತರಿಗೆ ಮೀಸಲಾದ ಗ್ಯಾಲರಿಗೆ ಬಂದು ಮುಂದಿನ ಸಾಲಿನಲ್ಲಿ ಕೂತವಳೇ ಹ್ಯಾಂಡ್‌ಬ್ಯಾಗಿನಿಂದ ಲಿಪ್‌ಸ್ಟಿಕ್‌ನ್ನು ಹೊರಗೆಳೆದು, ಮುಂದಿದ್ದ ಕಂಬಿಯ ಮೇಲೆ ಬಾಗಿಕೊಂಡು ತುಟಿಗೆ ಲಿಪ್‌ಸ್ಟಿಕ್ ಉಜ್ಜತೊಡಗಿದಳು. ಜಿನ್ನಾ ಸ್ನೇಹಿತರೆಲ್ಲ ಜಿನ್ನಾ ಅವರು ಮುಸ್ಲಿಂ ಮೌಲಾನಾಗಳ ಜೊತೆ ಏನೋ ಗಂಭೀರವಾಗಿ ಚರ್ಚಿಸುತ್ತಿದ್ದರು. ಆಗ ಎಂದಿನಂತೆ ಪಾರದರ್ಶಕ ಉಡುಪಿನಲ್ಲಿದ್ದ ಶ್ರೀಮತಿ ಜಿನ್ನಾ ಅವರ ಮಧ್ಯೆ ಬಂದು ಕೂತು ತಾನೂ ಮಾತಿನಲ್ಲಿ ಸೇರಿದಳು. ಆಗ ಆ ಗುಂಪಿನಲ್ಲಿ ಕುಳಿತಿದ್ದ ಶ್ರೀಮತಿ ನಾಯ್ಡು ಅವರು ಒಂದು ದಪ್ಪನೆಯ ವುಲನ್ ಶಾಲು ತಂದು ಅವಳ ಮೇಲೆ ಹೊದಿಸಿದರಂತೆ.

ಜಿನ್ನಾರ ವೈವಾಹಿಕ ಬದುಕಿನಲ್ಲಿ ಇದ್ದಕ್ಕಿದ್ದಂತೆ ಒಂದು ದೊಡ್ಡ ದುರಂತ ಎರಗಿತು. ಶ್ರೀಮತಿ ಜಿನ್ನಾ ಒಂದು ಮಗುವಿಗೆ ಜನ್ಮಕೊಟ್ಟು ಸ್ವಲ್ಪ ಕಾಲದಲ್ಲಿಯೇ ಜಿನ್ನಾ ಅವರನ್ನು ತೊರೆದು ಹೋದಳು. ಸಂಧಾನ ಮಾಡಿಕೊಳ್ಳಬೇಕು ಎನ್ನುವಷ್ಟರಲ್ಲಿಯೇ ಪೆರಿಟೋನೈಟಿಸ್‌ನಿಂದ ತೀರಿಕೊಂಡಳು. ಆಕೆ ತ್ಯಜಿಸಿ ಹೋದಾಗ ಉಂಟಾದ ಸಾರ್ವಜನಿಕ ಲೇವಡಿ ಹಾಗೂ ಅನಂತರ ಆಕೆಯ ಹಠಾತ್ ಸಾವಿನಿಂದ ಜಿನ್ನಾ ತೀರ ಅಂತರ್ಮುಖಿಯಾದರು. ಅವರು ಉಂಡ ಕಹಿ ಒಳಗೊಳಗೇ ಮಡುಗಟ್ಟಿಕೊಂಡಿತು. ವೈಯಕ್ತಿಕವಾಗಿಯೂ ರಾಜಕೀಯವಾಗಿಯೂ ಅವರು ತುಂಬ ಒಂಟಿಯಾದರು.

ಜಿನ್ನಾ ತಮ್ಮ ಹಿಂದಿನ ಬದುಕಿನಿಂದ ಸಂಪೂರ್ಣ ವಿಮುಖರಾಗಲು ಬಹುಶಃ ಅವರ ವೈಯಕ್ತಿಕ ನೋವೇ ಮುಖ್ಯಕಾರಣ ಎಂದು ನನಗನ್ನಿಸುತ್ತದೆ. ತಮ್ಮ ಸ್ಥಿತಿಗಾಗಿ ಅಯ್ಯೋಪಾಪ ಎಂದು ಮರುಗಿದ ಸ್ನೇಹಿತರಿಗೆ ಅವರು ತಮ್ಮ ಮುಖ ತೋರಿಸಲು ಬಯಸಲಿಲ್ಲ. ಪ್ರತಿಷ್ಠೆ ಹಾಗೂ ಕಹಿಯ ಭಾವನೆಯಿಂದ ಅವರು ಒಂಟಿದಾರಿ ಹಿಡಿದರು. ಒಂದು ವೇಳೆ ಅವರೂ ಕೂಡ ಎಲ್ಲ ಮುಸ್ಲಿಂ ರಾಷ್ಟ್ರೀಯತವಾದಿಗಳಂತೆ ಇದ್ದಿದ್ದರೆ ಹಳೇಕಾಂಗ್ರೆಸ್ ಗುಂಪಿನ ಹಲವರಲ್ಲಿ ಒಬ್ಬರಾಗಿಬಿಡುತ್ತಿದ್ದರು. ಅದಕ್ಕೆ ಬದಲು ಮುಸ್ಲಿಮರ ನಾಯಕನಾದರೆ, ಮುಂದೆ ಏನೇನು ಆಗಬಹುದು, ಎಷ್ಟೆಷ್ಟು ಎತ್ತರಕ್ಕೆ ಏರಬಹುದು?

ಜಿನ್ನಾ ಈ ಮೊದಲು ಎಂದೂ ಅನುಸರಿಸದಿದ್ದ ಇಸ್ಲಾಮೀ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಅನುಸರಿಸುವುದಕ್ಕೆ ಅವರ ಮಗಳು ಕಾರಣಳಾದಳು. ಮುಸ್ಲಿಮೇತರ ವ್ಯಕ್ತಿಯನ್ನು ಮದುವೆಯಾದ ತಂದೆಯ ಮೇಲ್ಪಂಕ್ತಿಯನ್ನು ಅನುಸರಿಸಿದ ಅವರ ಮುದ್ದಿನ ಮಗಳು ದೀನಾ ಪಾರ್ಸಿಯುವನೊಂದಿಗೆ ಓಡಿಹೋದಳು. ಆತ ಅನಂತರ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ. ಜಿನ್ನಾ ಅವಳನ್ನು ಮನೆಗೆ ಸೇರಿಸಲಿಲ್ಲ. ಈಗ ಜಿನ್ನಾರ ಜೊತೆಯಲ್ಲಿ ಏಕೈಕ ವ್ಯಕ್ತಿ ಮಾತ್ರ ಉಳಿದಿದ್ದಳು. ಆಕೆ ಫಾತಿಮಾ. ಜಿನ್ನಾ ತಂಗಿ, ಡೆಂಟಿಸ್ಟ್ ಆಗಿದ್ದ ಫಾತಿಮಾ ಅಣ್ಣನನ್ನು ನೋಡಿಕೊಳ್ಳುವುದಕ್ಕಾಗಿಯೇ ವೃತ್ತಿಯನ್ನು ತೊರೆದು ಬಂದಳು. ಆಕೆ ಅವಿವಾಹಿತೆ ಮತ್ತು ಅಣ್ಣನಂತೆಯೇ ಬಹಳ ಅಂತರ್ಮುಖಿ. ಆಕೆ ಬೇರೆ ಯಾವ ಹೆಂಗಸರನ್ನೂ ಸೇರುತ್ತಿರಲಿಲ್ಲ. ಒಂದೇ ಒಂದು ಸಲ ಮಾತ್ರ ಮಗಳು ದೀನಾ ಈ ತಡೆಯನ್ನು ಭೇದಿಸಿ ಬಂದಿದ್ದಳು. ಮುಸ್ಲಿಂ ಯುವಕನೊಬ್ಬ ಜಿನ್ನಾರ ಹತ್ಯೆಗೆ ಪ್ರಯತ್ನಿಸಿದಾಗ ಪಾರಾಗಿ ಬದುಕಿ ಉಳಿದ ಅವರನ್ನು ನೋಡಲು ಅವಳು ಬಂದಿದ್ದಳು. ಜಿನ್ನಾಗೆ ಹೆಚ್ಚಿನ ಹಾನಿಯೇನೂ ಆಗಿರಲಿಲ್ಲ. ಆದರೆ ದೀನಾಗೆ ಸ್ವಾಗತವಿರಲಿಲ್ಲ. ಇದಾದ ನಂತರ ಅವಳನ್ನು ಮತ್ತೆ ಎಂದೂ ಮನೆಗೆ ಬರಗೊಡಲಿಲ್ಲ. ಈ ಮಧ್ಯಂತರದ ನಂತರ ಅಣ್ಣತಂಗಿಯರು ತಮ್ಮ ಎಂದಿನ ಉತ್ಸಾಹಶೂನ್ಯ, ಯಾರನ್ನೂ ಸೇರದ ಬದುಕಿಗೆ ಮರಳಿದರು. ಆಮೇಲಿನ ಬೆಳವಣಿಗೆಗಳು ಅವರನ್ನು ಕರಾಚಿಯ ಭವ್ಯ ಬಂಗಲೆಗೆ ತಂದಿರಿಸಿದವು. ನಾನು ಈ ಅಣ್ಣತಂಗಿಯರನ್ನು ಭೇಟಿಯಾಗಿದ್ದು ಸ್ವಾತಂತ್ರ್ಯ ದಿನಾಚರಣೆಯ ನಂತರ.

ಪಾಕಿಸ್ತಾನ ಸೃಷ್ಟಿಯಾಗುವುದಕ್ಕೆ ಮೊದಲಿನಿಂದಲೂ ಫಾತಿಮಾ ಬಗ್ಗೆ ನನಗೆ ಗೊತ್ತಿತ್ತು. ಆಕೆ ತುಂಬ ಸಂಕೋಚ ಸ್ವಭಾವದ ಮಿತಭಾಷೆಯ ಹೆಣ್ಣಾಗಿದ್ದಳು. ಪಾಕಿಸ್ತಾನದ 'ಫಸ್ಟ್‌ಲೇಡಿ' ಸ್ಥಾನಕ್ಕೆ ಏರಿದ ನಂತರ ಆಕೆ ವಿಸ್ಮಯಕಾರಿಯಾಗಿ ಬದಲಾದಳು. ಸಭೆಗಳಲ್ಲಿ ಆಕೆಯ ಭಾಷಣಗಳಾಗುತ್ತಿದ್ದವು. ಶಂಕುಸ್ಥಾಪನೆಗೆ ಆಕೆಯೇ ಬರಬೇಕಿತ್ತು. ಲೊಮೋಸಿನ್ ಕಾರಿನಲ್ಲಿ ಕುಳಿತು ಪಾಕಿಸ್ತಾನೀ ಹಸಿರು ಸಮವಸ್ತ್ರದ ಬೆಂಗಾವಲಿನವರೊಂದಿಗೆ ಸುತ್ತುತ್ತಿದ್ದಳು. ಲಾಹೋರಿನ ಗುಲಾಬಿ ತೋಟಗಳಿಗೆ ಅವಳ ಗೌರವಾರ್ಥ ಗುಲಿಸ್ತಾನಿ-ಇ-ಫಾತಿಮಾ ಮೊದಲಾಗಿ ಹೆಸರಿಡಲಾಯಿತು. ಸಿಂಧ್ ಪ್ರಾಂತದ ಸಾರ್ವಜನಿಕ ಚೌಕದಲ್ಲಿ ಬ್ರಿಟಿಷ್ ಆಳ್ವಿಕೆಯ ಕಾಲದಿಂದ ರಾರಾಜಿಸುತ್ತಿದ್ದ ಕ್ವೀನ್ ವಿಕ್ಟೋರಿಯಾಳ ಭಾರೀ ಗಾತ್ರದ ಪ್ರತಿಮೆಯನ್ನು ತೆಗೆದು ಅದರ ಸ್ಥಳದಲ್ಲಿ ತೆಳ್ಳಗಿನ ಜಿನ್ನಾ ಪ್ರತಿಮೆ ಸ್ಥಾಪಿಸಲಾಯಿತು. ಅಣ್ಣನಿಗಿಂತ 15-20 ವರ್ಷ ಚಿಕ್ಕವಳಾಗಿದ್ದ ಫಾತಿಮಾ ತಲೆಗೂದಲೂ ಕೂಡ ಅಣ್ಣನಂತೆಯೇ ಸಂಪೂರ್ಣ ಬೆಳ್ಳಗಾಗಿದ್ದವು. ಅಣ್ಣನಂತೆಯೇ ತಲೆಗೂದಲ ಬಣ್ಣಕ್ಕೆ ಹೊಂದುವಂಥ ಉಡುಪನ್ನು ಧರಿಸುವ ತಂತ್ರವನ್ನು ಅವಳೂ ಅಳವಡಿಸಿಕೊಂಡಿದ್ದಳು. ಆಕೆಯ ಮುಖವೊಂದನ್ನು ಬಿಟ್ಟು ತಲೆಯ ಮೇಲಿನಿಂದ ಪಾದದವರೆಗೂ ತಿಳಿಗೆಂಪು, ಬೂದು, ಕಂದು, ಬಿಳಿಛಾಯೆಯ ಸ್ಕಾರ್ಫ್‌ಗಳು, ದುಪಟ್ಟಾ, ಪದರುಗಳು ಇಳಿಬಿದ್ದಿರುತ್ತಿದ್ದವು. ಮುಖವನ್ನು ತೆರೆದು ತೋರಿಸುವ ವಿಷಯದಲ್ಲಿ ಮಾತ್ರ ಆಕೆ ಆಧುನಿಕ ಪದ್ಧತಿ ಹಿಡಿದಿದ್ದಳು.

ಪಾಕಿಸ್ತಾನದಲ್ಲಿ ಅಣ್ಣತಂಗಿ ಜಿನ್ನಾಗಳ ಬಗೆಗಿನ ಗೌರವವು ಪೂಜೆ ಆರಾಧನೆಯ ಮಟ್ಟ ತಲುಪಿತ್ತು ಎನ್ನಬಹುದು. ಪತ್ರಿಕೆಗಳೂ, ರೇಡಿಯೋಗಳೂ ಇದೇ ಭಾವನೆಯನ್ನು ಪೋಷಿಸಿಕೊಂಡು ಬಂದವು. ಇಷ್ಟಾದರೂ ಜಿನ್ನಾರ ಆಧುನಿಕ ವಿಚಾರಗಳನ್ನು ಸಂಪ್ರದಾಯನಿಷ್ಠ ಮುಸ್ಲಿಮರು ಪೂರ್ತಿಯಾಗಿ ಒಪ್ಪಿರಲಿಲ್ಲ. ಜಿನ್ನಾ, ಮಕ್ಕಾ ಯಾತ್ರೆಯ ಬಗ್ಗೆ ಯೋಚಿಸುವ ತೊಂದರೆಯನ್ನೂ ತೆಗೆದುಕೊಳ್ಳಲಿಲ್ಲ. ಮದ್ಯಪಾನದ ಬಗ್ಗೆ ಇಸ್ಲಾಮಿಕ್ ನಿಷೇಧವನ್ನು ಉಲ್ಲಂಘಿಸಿ ಅವರು ಯಾವಾಗಾದರೊಮ್ಮೆ ವೈನ್ ಕುಡಿಯುತ್ತಿದ್ದರು. ಸಿಗಾರುಗಳಿಗಂತೂ ಲೆಕ್ಕವಿಲ್ಲ. ಮುಖಕ್ಕೆ ಪರದೆ ಹಾಕದ ಅವರ ಸೋದರಿಯ ದಿಟ್ಟತನದ ಬಗೆಗೂ ಮಡಿವಂತರಿಂದ ಬಹಳ ಟೀಕೆಗಳು ಬರುತ್ತಿದ್ದವು.

ಪಾಕಿಸ್ತಾನ ಉದ್ಭವಿಸಿದ ಹೊಸದರಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಜನರಿಂದ ಗೌರವಗಳನ್ನು ಸ್ವೀಕರಿಸುತ್ತ ಅಣ್ಣತಂಗಿಯರ ಜೋಡಿ ವೇದಿಕೆಯ ಮೇಲೆ ವಿರಾಜಮಾನವಾಗಿತ್ತು. ಸ್ವಾಗತ ಭಾಷಣ ಮಾಡಿದವರು ಒಬ್ಬ ಮೌಲಾನಾ. ಆತ ಜನರ ಭಾಷೆಯಾದ ಉರ್ದುವಿನಲ್ಲಿ ಮಾತಾಡಿದರು. ಪಾಶ್ಚಾತ್ಯ ಜೀವನ ಶೈಲಿಯ ಜಿನ್ನಾಗಳು ಉರ್ದುಭಾಷೆಯ ಪಾಂಡಿತ್ಯಕ್ಕಾಗಿ ಎಂದೂ ಪ್ರಯತ್ನಿಸಿದವರಲ್ಲ. ಮೌಲಾನಾ ತಮ್ಮ ಭಾಷಣದಲ್ಲಿ ಮುಖಕ್ಕೆ ಪರದೆ ಹಾಕದ ಹೆಂಗಸರ ಬಗ್ಗೆ ಕಟುಟೀಕೆ ಮಾಡುತ್ತಿದ್ದಾಗ ಅದು ಅರ್ಥವಾಗದ ಅಣ್ಣತಂಗಿ ನಸುನಗುತ್ತಾ ತಲೆದೂಗುತ್ತಾ ಕೂತಿದ್ದರು.

ಪಾಕಿಸ್ತಾನ ಒಂದು ಪ್ರತ್ಯೇಕ ರಾಷ್ಟ್ರವಾಗಿ ರೂಪುಗೊಂಡು ಇನ್ನೂ ಮೂರು ತಿಂಗಳು ಪೂರ್ಣವಾಗುವುದಕ್ಕೆ ಮೊದಲೇ ಜಿನ್ನಾ ಆರೋಗ್ಯ ತೀವ್ರ ಹದಗೆಟ್ಟಿತು. ಅವರ ಅನಾರೋಗ್ಯವನ್ನು ಬಹಿರಂಗಪಡಿಸಲಿಲ್ಲ. ಯಾರಾದರೂ ಕೇಳಿದರೆ ಅವರಿಗೆ ನೆಗಡಿಯಾಗಿದೆ ಎಂಬ ಉತ್ತರ ಮಾತ್ರ ಸಿಗುತ್ತಿತ್ತು. ಆದರೆ ಅವರಿಗೆ ನಿಕಟರಾಗಿದ್ದವರಿಗೆ ಮಾತ್ರ ಅವರ ವಿಷಣ್ಣ ಮೌನ, ನಿರುತ್ಸಾಹ, ಯಾವುದೋ ಭಯವನ್ನು ಮುಚ್ಚಿಡುವಂತಿದ್ದ ಜಡತೆ, ಒಂದು ಸಣ್ಣ ನಿರ್ಧಾರವನ್ನೂ ಕೈಗೊಳ್ಳಲಾರದಂತಹ ಅಶಕ್ತತೆ, ಇದ್ದಕ್ಕಿದ್ದಂತೆ ಕೆರಳುವ ಸ್ವಭಾವಗಳು ಗೊತ್ತಾಗಿದ್ದವು.

ಮುಂದುವರಿಯುವುದು

ಜೆಡಿ(ಎಸ್)ನಲ್ಲೀಗ ತಳಮಳ

ಅಂತಃಕಲಹದ ತುಮುಲದಲ್ಲಿರುವ ಜಾತ್ಯಾತೀತ ಜನತಾದಳದ ಮುಂದಿನ ಆಯ್ಕೆ ಯಾವುದು? ಭಿನ್ನಾಭಿಪ್ರಾಯ, ವಾಗ್ವಾದಗಳಲ್ಲಿ ತೊಡಗಿ ದುರ್ಬಲವಾಗುತ್ತಾ ಹೋಗುವುದೋ ಅಥವಾ ಒಗ್ಗಟ್ಟಿನಿಂದ ಒಂದುಗೂಡಿ ಜಾತ್ಯತೀತ ಶಕ್ತಿಗಳ ಕ್ರೋಢೀಕರಣದತ್ತ ಹಾಗೂ ಜನರ ಬದುಕಿನ ನೈಜ ಸಮಸ್ಯೆಗಳತ್ತ ಗಮನ ನೀಡುವುದೋ ಎಂಬುದನ್ನು ಪಕ್ಷ ಇತ್ಯರ್ಥಪಡಿಸಿಕೊಳ್ಳಬೇಕಿದೆ.

ಕಳೆದ ಕೆಲವು ತಿಂಗಳಿನಿಂದ ಕರ್ನಾಟಕ ಮೈತ್ರಿಕೂಟದ ಸರ್ಕಾರದ ಭಾಗಿದಾರ ಪಕ್ಷಗಳಾದ ಜಾತ್ಯಾತೀತ ಜನತಾದಳ ಮತ್ತು ಕಾಂಗ್ರೆಸ್ ಪಕ್ಷಗಳ ನಾಯಕರ ನಡುವೆ ಬಿರುಸಿನ ವಾಗ್ವಾದಗಳು ನಡೆದಿದ್ದವು. ಈ ಸರ್ಕಾರ ವರುಷವೊಂದನ್ನು ಪೂರೈಸಿದ ಸಂಭ್ರಮದ ಸ್ಥಿತಿಯಲ್ಲಿರುವಾಗಲೇ ಹಂತಹಂತವಾಗಿ ಈ ವಾಗ್ವಾದ-ವಾಗ್ಸಮರಗಳು ತಾರಕಕ್ಕೇರುತ್ತಲೇ ಬಿಸಿ ವಾತಾವರಣ ನಿರ್ಮಿಸಿದ್ದವು. ಮೆಟ್ರೊ ಅಥವಾ ಮೊನೋ ರೈಲು ಬೆಂಗಳೂರು ನಗರಕ್ಕೆ ಆಯ್ಕೆ ಯಾವುದು ಸೂಕ್ತ ಎಂಬುದು ವಾಗ್ವಾದದ ಇತ್ತೀಚಿನ ಕಥಾವಸ್ತು.

ಆದರೆ ಮಳೆಗಾಲದ ಈ ಬಿಸಿಯನ್ನು ಹಿಂದಕ್ಕೆ ತಳ್ಳಿದ್ದು ಹೊಸ ವಿದ್ಯಾಮಾನ..... ಈ ವಾರದ ಸ್ಫೋಟಕ ಸುದ್ದಿಯೆಂದರೆ ಉಪಮುಖ್ಯಮಂತ್ರಿ, ಜೆಡಿ(ಎಸ್)ನ ಹಿರಿಯ ನಾಯಕ ಸಿದ್ಧರಾಮಯ್ಯನವರು ಕಾಂಗ್ರೆಸ್ ಪಕ್ಷವನ್ನು ಸೇರಲಿದ್ದಾರೆ ಎಂಬುದು.

ಇದು ಊಹಾಪೋಹವೋ? ಜೆಡಿ(ಎಸ್)ನ ಬೆಳೆಯುತ್ತಿರುವ ಪ್ರಭಾವವನ್ನು ಕುಂದಿಸಲು ಮಾಡಿದ ತಂತ್ರವೋ? ಅಥವಾ ಬಹಳವಾಗಿ ಹೇಳಿದಂತೆ ಜೆಡಿ(ಎಸ್) ರಾಷ್ಟ್ರನಾಯಕ ದೇವೇಗೌಡ ಮತ್ತು ಸಿದ್ಧರಾಮಯ್ಯನವರ ನಡುವೆ ಮುಚ್ಚಿಟ್ಟ ಕೆಂಡದ ಹಾಗಿದ್ದ ಭಿನ್ನಾಭಿಪ್ರಾಯಗಳೋ?

ಇವುಗಳನ್ನು ಯಾರೂ ಬಲವಾಗಿ ತಳ್ಳಿಹಾಕುತ್ತಿಲ್ಲ. ಹಾಗೆಂದು ಹೌದು ಎಂದು ನಿಖರವಾಗಿ ಹೇಳುತ್ತಲೂ ಇಲ್ಲ. ಆದರೆ ಒಳಾರ್ಥದ ಮಾತುಗಳು, ಬಿರುಸಿನ ಮಾತುಕತೆ, ಬೆಂಗಳೂರಿನಿಂದ ದೆಹಲಿಗೆ ಓಡಾಟ ನಿಂತಿಲ್ಲ.

ಸಿದ್ಧರಾಮಯ್ಯನವರು ಜೆಡಿ(ಎಸ್) ಬಿಡಲಿದ್ದಾರೆ. ಕಾಂಗ್ರೆಸ್ ಸೇರಬಹುದು ಎಂಬ ಊಹಾಪೋಹಗಳು ಬಹಳ ಹಿಂದಿನಿಂದಲೇ ಇವೆ. ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಬರುವಾಗ ಮುಖ್ಯಮಂತ್ರಿಸ್ಥಾನವನ್ನು ತಮಗೆ ತಪ್ಪಿಸಿದ್ದಾರೆ. ದೇವೇಗೌಡರು ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಬಿಗಿಪಟ್ಟು ಹಿಡಿದಿದ್ದರೆ ಅದು ಸಾಧ್ಯವಿತ್ತು ಎಂಬುದು ಸಿದ್ಧರಾಮಯ್ಯ ಹಾಗೂ ಅವರ ಬೆಂಬಲಿಗರ ಅನಿಸಿಕೆಯಂತೆ. ಶಾಸಕಾಂಗ ಪಕ್ಷದ ನಾಯಕನಾಗಿ ಸಿದ್ಧರಾಮಯ್ಯನವರು ಆಯ್ಕೆಯಾದುದೇ ಅತ್ಯಂತ ಒತ್ತಡದ ನಂತರ. ಇಲ್ಲವಾದರೆ ಅದೂ ತಪ್ಪುತ್ತಿತ್ತು ಎಂಬ ಆಕ್ರೋಶ ಕೆಲವರಲ್ಲಿ. ನಂತರ ಉಪ ಮುಖ್ಯಮಂತ್ರಿಯಾದ ಬಳಿಕ ಸರ್ಕಾರದ, ಶಾಸಕಾಂಗ ಪಕ್ಷದ ಕೆಲಸ ಕಾರ್ಯಗಳ ಹಸ್ತಕ್ಷೇಪದ ಆಕ್ಷೇಪ ಇನ್ನೊಂದು. ಮಾಜಿ ಪ್ರಧಾನಿಗಳು ತಮ್ಮ ಮಕ್ಕಳಿಗೆ ಹೆಚ್ಚಿನ ಪ್ರಾಧಾನ್ಯತೆ, ಹಸ್ತಕ್ಷೇಪಕ್ಕೆ ಅವಕಾಶ ಮಾಡಿದ್ದಾರೆ. ಹಿರಿಯ ನಾಯಕರಿಗೂ ಬೆಲೆಯಿಲ್ಲ ಎಂಬುದು ಮತ್ತೊಂದು ಆರೋಪ. ಇವುಗಳಲ್ಲಿ ಸತ್ಯಾಸತ್ಯತೆ ಎಷ್ಟು, ಏನಲ್ಲಾ ಎಂಬುದು ಬೇರೆ ವಿಷಯ. ಆದರೆ ಇವು ಜೆಡಿ(ಎಸ್) ಒಳಗೆ ಎದ್ದಿರುವ ವಿವಾದ-ಅಂತಃಕಲಹಕ್ಕೆ ಕಾರಣವಾದ ಸಂಗತಿಗಳು ಎಂಬುದು ಜನಜನಿತ.

ಇವುಗಳ ಅರಿವು ಜೆಡಿ(ಎಸ್)ನ ನಾಯಕರಿಗೂ ಇದೆ. ಆದರೆ ಮುಕ್ತ ಸಂವಾದ ಸಾಧ್ಯವೇ? ಅನುಮಾನಗಳ ಹುತ್ತ ಬೆಳೆಯುತ್ತಿರುವಂತೆ ಮಾಡಿದ್ದೆಲ್ಲವೂ ಅವರ ವ್ಯಾಖ್ಯಾನದ ವಸ್ತುವಾಗಬಲ್ಲದು. ಅಂತೆಯೇ ಕೆಲವು ಪ್ರಮುಖ ನಾಯಕರು ಹಿಂದುಳಿದ, ಅಲ್ಪಸಂಖ್ಯಾತರು ಕೆಳವರ್ಗದ ಜನರ ಶೋಷಿತರ ರ್‍ಯಾಲಿಯನ್ನು ಮೈಸೂರಿನಲ್ಲಿ ನಡೆಸಿದರು. ಆ ರ್‍ಯಾಲಿಗೆ ದೇವೇಗೌಡರನ್ನು ಆಹ್ವಾನಿಸಿರಲಿಲ್ಲ, ಸಿದ್ಧರಾಮಯ್ಯನವರು ಮಾತ್ರ ಭಾಗವಹಿಸಿದ್ದರು. ಇದು ಅವರ ಆಪ್ತರು ಮಾಡಿದ ರ್‍ಯಾಲಿ ನಾನು ಆಹ್ವಾನಿತ ಎಂದೆನೇ ಹೇಳಿದರೂ ಅದನ್ನು ಪೂರ್ಣವಾಗಿ ನಂಬಿದವರು ಕಡಿಮೆ. ಈಗಲೂ ಅಂತಹ ಸಮಾವೇಶವನ್ನು ಹುಬ್ಬಳ್ಳಿಯಲ್ಲಿ ನಡೆಸಲು ನಿರ್ಧರಿಸಿ ತಯಾರಿಗಳು ಆರಂಭಗೊಂಡಿವೆ. ಕಾಂಗ್ರೆಸ್ ಸೇರುವ ಜೆಡಿ(ಎಸ್) ಬಿಡುವ ಸುದ್ದಿ ಆರಂಭಗೊಂಡಿವೆ. ಈ ಘಟನೆ ಸ್ಫೋಟಗೊಂಡ ಬಳಿಕವೂ ಅದು ನಡೆದೇ ನಡೆಯುವುದಾಗಿ ಹೇಳಲಾಗಿದೆ.

ಕೆಳಜಾತಿಗಳು, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತ ಸಮುದಾಯಗಳ ಜಾತಿ ನೆಲೆಯ ಕ್ರೋಢೀಕರಣಕ್ಕೆ ಇಂತಹ ಯತ್ನಗಳು ನಡೆದಿವೆ, ಇದರ ಆಧಾರದಲ್ಲೇ ರಾಜಕೀಯ ನಡೆಸುವ ವಿಚಾರವೂ ಇದೆಯೆಂಬುದು ಗಮನಾರ್ಹ.

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಈಗಾಗಲೇ ಸರ್ಕಾರದ ಭಾಗೀಧಾರರಾಗಿದ್ದು ಸರ್ಕಾರದ ವಿರುದ್ಧ ಬೆಳೆಯುತ್ತಿರುವ ಅತೃಪ್ತಿಯನ್ನು ತನ್ನ ವಿರುದ್ಧ ತಿರುಗದಂತೆ, ವಿರೋಧ ಪಕ್ಷದ ಸ್ಥಾನವನ್ನು ತಾನೇ ಆಕ್ರಮಿಸುವಂತಹ ಯಶಸ್ವಿ ಪ್ರಯತ್ನಗಳು ಮತ್ತು ಶಿವಮೊಗ್ಗ, ಚಾಮರಾಜಪೇಟೆ ಉಪ ಚುನಾವಣಾ ಫಲಿತಾಂಶದಿಂದ ಉತ್ತೇಜಿತರಾಗಿ ಒಂದು ಆಶಾದೀಪ ಗೋಚರಿಸುತ್ತಿರುವ ದಳ(ಎಸ್)ನ ನಾಯಕರಲ್ಲಿ, ಸಂಘಟನಾ ಶಕ್ತಿಯ ಕ್ರೋಢೀಕರಣದ ಮುನ್ನಡೆ ಗಮನಾರ್ಹ ಬೆಳವಣಿಗೆಗಳು, ಒಂದೆಡೆ ಬಿಜೆಪಿಯನ್ನು ಜನ ಸತತ ತಿರಸ್ಕರಿಸುತ್ತಿರುವುದು, ಇನ್ನೊಂದೆಡೆ ಕಾಂಗ್ರೆಸ್ ಗುಂಪುಗಾರಿಕೆ-ಕಲಹಗಳಿಂದ ರಾಜಕೀಯವಾಗಿ ಸಂಘಟನಾತ್ಮಕವಾಗಿ ನಿಷ್ಕ್ರಿಯವಾಗಿರುವುದು ಜೆಡಿ(ಎಸ್)ಗೆ ಉತ್ತಮ



ಅವಕಾಶಗಳನ್ನು ಕಲ್ಪಿಸಿದೆ. ಇಂತಹ ಸ್ಥಿತಿಯಲ್ಲಿ ಕಾಂಗ್ರೆಸ್ ಮುಖಂಡತ್ವ ಜೆಡಿ(ಎಸ್)ನ ಮುನ್ನಡೆಗೆ ಬ್ರೇಕ್ ಹಾಕಲು ಜೆಡಿ(ಎಸ್) ಒಳಗಿನ ಭಿನ್ನಾಭಿಪ್ರಾಯವನ್ನು ಬಳಸುತ್ತಿದೆ ಎಂಬುದು. ಇದನ್ನು ಸುಲಭವಾಗಿ ತಳ್ಳಿ ಹಾಕಲಾಗದು, ಆದರೆ ಜೆಡಿ(ಎಸ್) ಒಳಗಿನ ಸಮಸ್ಯೆ ವಿದ್ಯಮಾನಗಳನ್ನು ನಿರಾಕರಿಸಲಾಗದು.

ಇವೆಲ್ಲದರ ನಡುವೆ ದೇವೇಗೌಡ ಹಾಗೂ ಅವರ ಬಣ ಬಿಗಿಯಾದ ನಿಲುಮೆ ತಳೆದಂತೆ ಕಾಣುತ್ತಿದೆ. ಕೋಲಾರದ ರ್‍ಯಾಲಿಯಲ್ಲಿ, ಆಪ್ತ ಚೆನ್ನಿಗಪ್ಪನವರು ದೇವೇಗೌಡರೇ ಅಂತಿಮ ಎಂದು ಹೇಳುವಲ್ಲಿ ವ್ಯಕ್ತವಾಗಿದೆ. ಇಂತಹ ಭಿನ್ನಾಭಿಪ್ರಾಯಗಳು ಬಹಿರಂಗ ಊಹಾಪೋಹ, ಕಾಂಗ್ರೆಸ್‌ನವರ ಯತ್ನಗಳ ಹಿನ್ನೆಲೆಯಲ್ಲಿ ಸಿದ್ಧರಾಮಯ್ಯನವರಿಗೆ ಇರುವ ಭಿನ್ನಾಭಿಪ್ರಾಯಗಳನ್ನು ಅರಿತು ಚರ್ಚಿಸಿ ಒಂದು ಇತ್ಯರ್ಥಕ್ಕೆ ಬರಲೆಂದು ಪ್ರಮುಖರ ಸಭೆ ಜೂನ್ 29ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಸಭೆಗೆ ಸಿದ್ಧರಾಮಯ್ಯ ಹಾಜರಾಗುವರು ಎಂದು ಮೊದಲು ಪ್ರಕಟವಾಗಿತ್ತಾದರೂ, ಬರಲಿಲ್ಲ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆ ಪ್ರಯುಕ್ತ ಬಂದಿಲ್ಲ ಎಂದೇನೋ ಸಮಜಾಯಿಸಿ ನೀಡಲಾಗಿದೆ. ಈ ಬಗ್ಗೆ ಚರ್ಚಿಸಲು ಹಿರಿಯ ಸಚಿವರಾದ ಎಂ.ಪಿ.ಪ್ರಕಾಶ್, ಸಿಂಧ್ಯಾರವರು ಸಂಧಾನಕಾರರಾಗಿ ಸಿದ್ಧರಾಮಯ್ಯನವರೊಂದಿಗೆ ಮಾತನಾಡಿದ್ದಾರೆ. 29ರ ಸಭೆಗೆ ಸಿದ್ಧರಾಮಯ್ಯ ಹಾಜರಾಗದಿದ್ದರೂ ಅವರ ಆಪ್ತರು ಹಾಜರಾಗಿ ಇಂಗಿತ- ಸಮಸ್ಯೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಇದು ಅಪೂರ್ಣವಾಗಿದ್ದು ಮುಂದಿನ ಸಭೆಯೊಂದನ್ನು ನಿಗದಿಗೊಳಿಸಲಾಗಿದೆ. ಅದಕ್ಕೆ ದೇವೇಗೌಡರು ಗೈರು ಹಾಜರಾಗುವುದಾಗಿ ಹೇಳಿರುವುದು, ಸಿದ್ಧರಾಮಯ್ಯನವರು ಹಿರಿಯ ಗೆಳೆಯರೊಂದಿಗೆ ಮುಕ್ತವಾಗಿ ಮಾತನಾಡಲು ದಾರಿಯಾಗಬಹುದು ಎಂಬ ನಿರೀಕ್ಷೆಯಿದೆ.

ಮುಖ್ಯ ಪ್ರಶ್ನೆ- ಜೆಡಿ(ಎಸ್)ನ ಅಂತಃಕಲಹ, ಬಿನ್ನಾಭಿಪ್ರಾಯಗಳು ಬೀದಿ ರಂಪಾಟವಾಗುವುದರಿಂದ ಯಾರಿಗೆ ಲಾಭ ಹಾಗೂ ರಾಜ್ಯದಲ್ಲಿ ಕೋಮುವಾದಿ ಬಿಜೆಪಿಯನ್ನು ಎದುರಿಸುವ ಗುರುತರ ಕರ್ತವ್ಯವಿರುವಾಗ ಆದಷ್ಟು ಬೇಗ ಇವುಗಳನ್ನು ಬಗೆಹರಿಸಿಕೊಂಡು ಹೆಚ್ಚಿನ ಒಗ್ಗಟ್ಟು, ಬಲದೊಂದಿಗೆ ಮುನ್ನಡೆಯಬೇಕು. ಜಾತ್ಯಾತೀತ ಮೌಲ್ಯಗಳ ಉಳಿವು, ಬೆಳವಣಿಗೆ ಇಂದು ಕರ್ನಾಟಕದ ಅಗತ್ಯ.

ಜನತಾದಳ ಹಲವು ಹೋಳುಗಳಾಗಿವೆ. ಇದಕ್ಕೆ ಅನೇಕ ವಿವಾದಗಳು ಕಾರಣ ಇವೆ. ಈಗ ಎತ್ತಿರುವ ದೇವೇಗೌಡರ-ಮಕ್ಕಳ ಮಮತೆ, ಅತೀ ಪ್ರಧಾನ್ಯತೆಯಂತಹ ಪ್ರಶ್ನೆಗಳು ತೀರಾ ಹೊಸತೇನಲ್ಲ. ಆದ್ದರಿಂದ ಸ್ವವಿಮರ್ಶೆಗೆ ಒಳಪಡುವ, ಸರಿಪಡಿಸಿಕೊಂಡು ಹೋಗುವ ಕಳಕಳಿ-ಇಚ್ಛಾಶಕ್ತಿ ಅಗತ್ಯವಿದೆ. ಎಲ್ಲರೂ ಸೇರಿದರೆ ಬಲ ಎಂಬುದು ಬಾಯಿಮಾತಿನ ಹೇಳಿಕೆಯಾಗಬೇಕಿಲ್ಲ.

ಸಾವು ಮತ್ತು ಜನರ ಬದುಕಿನ ಸಮಸ್ಯೆಗಳು - **ಪುಟ 9 ನೋಡಿ**

ಮಳೆಗಾಳಿಗೆ ಜೀವಹಾನಿ : ಮತ್ತು ಉದಾರೀಕರಣದ ಪರಿಣಾಮ

ಮಳೆಗಾಲ ಪ್ರಾರಂಭವಾಗಿದೆ. ಮಳೆ-ಗಾಳಿಗೆ ಎಲ್ಲೆಂದರಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ ಉರುಳುತ್ತಿವೆ. ವಿದ್ಯುತ್ ಹರಿವ ಕಂಬಗಳೇ ನೆಲಕಚ್ಚಿದಾಗ ಅನೇಕ ಜೀವಗಳನ್ನು ಬಲಿತೆಗೆದುಕೊಳ್ಳುತ್ತಿವೆ. ತೀರಾ ಇತ್ತೀಚೆಗೆ ಹುಣಸೂರು ತಾಲೂಕಿನ ಬಸರೀಕಟ್ಟೆಯಲ್ಲಿ ವಿವಾಹಕ್ಕೆಂದು ಹೊರಟ ಏಳು ಜನ (ಜಾನುವಾರುಸಹಿತ) ಉರುಳಿದ ವಿದ್ಯುತ್ ಕಂಬದ ತಂತಿಗಳ ಸ್ಪರ್ಶದಿಂದ ಸಾವನ್ನಪ್ಪಿದ್ದಾರೆ. ಇದೇ ವಾರದಲ್ಲೇ ಮಂಡ್ಯ ಜಿಲ್ಲೆಯ ಹೊಸಗಾನಹಳ್ಳಿ ಕೀಲಾರ ಪ್ರಾಥಮಿಕ ಶಾಲೆಯ ಶಿಕ್ಷಕ ರಾಜು ಮಳೆಗಾಳಿಗೆ ಬಿದ್ದ ವಿದ್ಯುತ್ ತಂತಿ ಗಮನಿಸದೇ ಹೆಜ್ಜೆ ಇಟ್ಟು ಸಾವನ್ನಪ್ಪಿದ್ದಾರೆ. ಇಂತಹ ವರದಿಗಳು ಇನ್ನೂ ಹಲವು ಇವೆ. ಬೆಂಗಳೂರು ನಗರದಲ್ಲಿ ಇದೇ ರೀತಿ ವಿದ್ಯುತ್ ಸ್ಪರ್ಶದಿಂದ ಇಬ್ಬರು ಮುಗ್ಧ ಶಾಲಾ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ.



ಮಳೆಗಾಳಿಗೆ ಉರುಳಿ ಬೀಳುವಂತಹ ಸ್ಥಿತಿಯಲ್ಲಿ ಈ ಕಂಬಗಳು ಇದ್ದರೂ ವಿದ್ಯುತ್ ಇಲಾಖೆಯವರಾರೂ ನೋಡಲಿಲ್ಲವೇಕೆ? ಮಳೆ ಸೂಚನೆ ಇರುವಾಗ ವಿದ್ಯುತ್ ಕಡಿತ ಮಾಡಬಾರದೇ? ಕಂಬಗಳು ಉರುಳಿ ಜೀವಗಳೂ ಹೋದರೂ ಈ ಕಡೆ ಇಲಾಖೆಯ ಸಿಬ್ಬಂದಿ ಕಾಲುಹಾಕಿದ್ದು ಎಷ್ಟು ಗಂಟೆಗಳ ನಂತರ, ಕೀಲಾರದಲ್ಲಿ ಎರಡು ದಿನಗಳ ನಂತರವೇ. ಹೀಗಾಗಿ ಜನರ ಆಕ್ರೋಶ ಹೆಚ್ಚಿದೆ. ಈ ಲೈನಿನ ಉಸ್ತುವಾರಿಯತ್ತ ಸಿಬ್ಬಂದಿ ಬರುವುದೇ ಇಲ್ಲ ಎಂದು ದೂರಿದ್ದಾರೆ.

ಮುಖ್ಯವಾಗಿ ವಿದ್ಯುತ್‌ಲೈನ್ ಗಳನ್ನು ಸೂಕ್ತವಾಗಿ ಪರಿಶೀಲಿಸಿ, ಲೋಪ-ದೋಷಗಳನ್ನು ಸರಿಪಡಿಸಲು ಗಮನವೇ ಇಲ್ಲದಿರುವುದು ಎಲ್ಲೆಡೆ ಕಾಣುವ ಅಂಶ. ಇಲಾಖೆಯ ನಿರ್ಲಕ್ಷ್ಯ ಒಂದು ಕಡೆ ಇದೆಯಾದರೂ ಪ್ರಮುಖವಾಗಿ ವಿದ್ಯುತ್ ಖಾಸಗೀಕರಣ ಪ್ರಕ್ರಿಯೆ, ವಿಶ್ವಬ್ಯಾಂಕ್ ನಿರ್ದೇಶನದಂತೆ ಸರ್ಕಾರಿ ಆಡಳಿತಾತ್ಮಕ ವೆಚ್ಚ ಕಡಿತ, ಮೂಲ ಸಂರಚನಾ ಹೊಂದಾಣಿಕೆಯ ಪರಿಣಾಮವಾಗಿ ನೌಕರರ ಸಂಖ್ಯೆ ಕಡಿತಗೊಳಿಸಲಾಗುತ್ತಿದೆ. ಖಾಯಂ ನೌಕರರಿಲ್ಲ. ಕೆಲಸವಿರುವಾಗ ದಿನಗೂಲಿ ಕೂಲಿಕಾರರನ್ನು ಮಾತ್ರ ಬಳಸಲಾಗುತ್ತಿದೆ. ಹೀಗಾಗಿ ಉಸ್ತುವಾರಿ, ಅದರ ನಿರ್ವಹಣೆಗೆ ನೌಕರರಿಲ್ಲದೇ ಇಂತಹ ಅವಘಡಗಳು ಸಂಭವಿಸುತ್ತಿವೆ. ಇದರಿಂದಲಾದರೂ ಸರ್ಕಾರ ಎಚ್ಚೆತ್ತುಕೊಂಡು ಸಿಬ್ಬಂದಿ ಕಡಿತ ನಿಲ್ಲಿಸಬೇಕು, ಹೊಸ ನೇಮಕಾತಿಗೆ ಸರ್ಕಾರ ಗಮನ ನೀಡೀತೇ? ಉದಾರೀಕರಣದ ಆರಾಧಕರು ಮಾನವೀಯ ಮುಖವಿರಬೇಕೆಂದು ಹೇಳಿಕೆ ನೀಡಿ ಮರೆತುಬಿಟ್ಟಿರುವಾಗ ಅದು ಸಾಧ್ಯವೇ? ಪ್ರಬಲ ಜನ ಒತ್ತಡ ಅಗತ್ಯವಿದೆ.

ಮಳೆಗಾಳಿಗೆ ಉರುಳಿದ ವಿದ್ಯುತ್ ಕಂಬಗಳಿಂದ ಅಪಾರ ಜೀವಹಾನಿಯಾದರೂ ಸರ್ಕಾರ ಕೊಂಚವೂ ಅಲುಕಿಲ್ಲ. ಉದಾರೀಕರಣ, ಖಾಸಗೀಕರಣದ ಧಾಳಿ ಈ ಜೀವ ಬಲಿಗಳಲ್ಲಿ ಎದ್ದು ಕಾಣುತ್ತಿವೆ. ಸರ್ಕಾರ ಎಚ್ಚೆತ್ತುಕೊಳ್ಳದಿದ್ದಲ್ಲಿ ಜನರೇನು ಮಾಡಬೇಕು?

ಪೆಟ್ರೋಲ್-ಡೀಸೆಲ್-ಬಸ್ ದರಗಳ ಏರಿಕೆ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ

ಕಾಂಗ್ರೆಸ್ ನೇತೃತ್ವದ ಯುಪಿಎ ಕೇಂದ್ರ ಸರ್ಕಾರ ಇತ್ತೀಚಿಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಏರಿಸಿದೆ. ಅಂತರ ರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಏರಿಕೆ ಆಗಿರುವುದರಿಂದ ಈ ಏರಿಕೆ ಅನಿವಾರ್ಯ ಎಂದು ಸರ್ಕಾರ ಹೇಳುತ್ತಿದೆ. ಸರ್ಕಾರದ ನೀತಿಯನ್ನು ಖಂಡಿಸಿ ಪರ್ಯಾಯ ಸೂಚನೆ ಜಾರಿಗಾಗಿ ಎಡಪಕ್ಷಗಳು ಜೂನ್ 28ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕರೆ ನೀಡಿದ್ದವು, ಈ ಹಿನ್ನಲೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯೂ ಪ್ರತಿಭಟನೆ ನಡೆಸಲು ಕರೆ ನೀಡಿತ್ತು. ಇದರ ಭಾಗವಾಗಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಪ್ರತಿಭಟನೆಗಳು ನಡೆದಿವೆ.

ಬೆಂಗಳೂರು : ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ, ಬಸ್ ದರ ಏರಿಕೆ ಹಾಗೂ ಅಗತ್ಯವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ವಿನೂತನವಾಗಿ ಎರಡೂ ಎತ್ತಿನ ಬಂಡಿಗಳಲ್ಲಿ ದ್ವಿಚಕ್ರ ವಾಹನವನ್ನು ಹೊತ್ತು ಹಾಗೂ ಅದರ ಹಿಂದೆ ಆಟೋಗಳನ್ನು ತಳ್ಳಿಕೊಂಡು ಹೋಗುತ್ತಿರುವ ಚಾಲಕರು ಮತ್ತು ದ್ವಿಚಕ್ರ ವಾಹನಗಳನ್ನು ತಳ್ಳಿಕೊಂಡುಸುಮಾರು 500ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಕೊನೆಯಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿದರು ಬೆಂಗಳೂರಿನ ಜಿಲ್ಲಾ ಕಾರ್ಯದರ್ಶಿ ಕಾ|| ಕೆ.ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕಾಂ. ಬಯ್ಯಾರೆಡ್ಡಿ, ಪ್ರಕಾಶ್ ನೇತೃತ್ವದ ನಿಯೋಗ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು. ಅಲ್ಲದೆ ಬೆಂಗಳೂರಿನ ದೊಡ್ಡಬಳ್ಳಾಪುರ, ಆನೇಕಲ್ಲು ಪ್ರದೇಶಗಳಲ್ಲಿ ಹಾಗೂ ಎಸ್‌ಎಫ್‌ಐ ನಿಂದ ಹೊಸಕೋಟೆಯಲ್ಲಿ ರಸ್ತೆ ತಡೆ, ಭೂತದಹನ ನಡೆಸಿ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಮಂಗಳೂರು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ

ಕೇಂದ್ರದ ಯುಪಿಎ ಸರಕಾರವು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಂತಹ ಜನವಿರೋಧಿ ಕ್ರಮಗಳನ್ನು ಮುಂದುವರಿಸಿದರೆ ಎಡ ಪಕ್ಷಗಳು ಪ್ರಬಲ ಹೋರಾಟಗಳ ಮೂಲಕ ಸರಕಾರದ ಉಸಿರುಕಟ್ಟಿಸುವ ವಾತಾವರಣ ನಿರ್ಮಿಸಲಿವೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವ ಅವರು ಹೇಳಿದ್ದಾರೆ. ಬಿ.ಜೆ.ಪಿ.ಯಂತಹ ಪಕ್ಷಗಳು ಸರಕಾರ ಉರುಳುವುದೆಂದು ಆಸೆಪಡಬೇಕಾಗಿಲ್ಲ. ಕೋಮುವಾದಿಗಳನ್ನು ಅಧಿಕಾರದಿಂದ ದೂರವಿಡುವ ಜನಾದೇಶವನ್ನು ಪಾಲಿಸುವ ಜತೆಗೇ ಯುಪಿಎ ಸರಕಾರವು ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ನಿಷ್ಠವಾಗಿರುವಂತೆ ಮಾಡಲು ಎಡಪಕ್ಷಗಳ ಹೋರಾಟ ಮುಂದುವರಿಯಲಿದೆ ಎಂದು ಅವರು ಹೇಳಿದರು. ಶೇರು ಮಾರುಕಟ್ಟೆಯ ಏರಿಳಿತವು ದೇಶದ ಸಮೃದ್ಧಿಯನ್ನು ಪ್ರತಿಬಿಂಬಿಸುವುದೋ ಎಂಬಂತಹ ಪ್ರಚಾರಗಳನ್ನು ಗೇಲಿ ಮಾಡಿದ ಅವರು ಬೆಲೆ ಏರಿಕೆ, ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಹೂಡಿಕೆ ಹಿಂತೆಗೆತದಂತಹ ಅಪಾಯಕಾರಿ ಕ್ರಮಗಳ ವಿರುದ್ಧ ಹೋರಾಡಿ ಜನಸಾಮಾನ್ಯರ ಹಿತಾಸಕ್ತಿಗಳನ್ನು ರಕ್ಷಿಸಲು ಎಡಪಕ್ಷಗಳು ಬದ್ಧವಾಗಿವೆ ಎಂದು ಹೇಳಿದರು.

ಅವರು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯ ವಿರುದ್ಧ ಎಡಪಕ್ಷಗಳ ಕರೆಯ ಮೇರೆಗೆ ಜೂನ್ 28 ರಂದು ಮಂಗಳೂರಲ್ಲಿ ದ.ಕ.ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನದ ಬಳಿಕ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಕರ್ನಾಟಕ ಸರಕಾರವು ಜನಸಾಮಾನ್ಯರ ಕಷ್ಟಗಳ ಕುರಿತು ಎಳ್ಳಷ್ಟು ಕಾಳಜಿ ಇಲ್ಲದೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಪ್ರಯಾಣ ದರವನ್ನು ಒಮ್ಮಿಂದೊಮ್ಮೆಗೆ ಏರಿಸಿರುವುದನ್ನು ಅವರು ಖಂಡಿಸಿದರು.

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್‌ರವರು ಮಾತನಾಡುತ್ತಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆದ ತೈಲ ಬೆಲೆ ಏರಿಕೆಯನ್ನು ತಾಳಿಕೊಳ್ಳಲು ಪರ್ಯಾಯ ಸೂಚನೆಗಳನ್ನು ಎಡ ಪಕ್ಷಗಳು ಮುಂದಿಟ್ಟಿವೆ. ಆದರೆ ಎಡಪಕ್ಷಗಳ ಬಾಹ್ಯ ಬೆಂಬಲವನ್ನು ಅವಲಂಬಿಸಿರುವ ಯು.ಪಿ.ಎ. ಸರಕಾರ ಈ ಸೂಚನೆಗಳನ್ನು ನಿರ್ಲಕ್ಷಿಸಿ ಬೆಲೆಗಳನ್ನು ಏರಿಸುವ ಮುಖಾಂತರ ಜನರ ಸಮಸ್ಯೆಗಳ ಕುರಿತು ತನಗೆ ಇರುವ ತಾತ್ಸಾರ ಭಾವನೆಯನ್ನು ಪ್ರದರ್ಶಿಸಿದೆ. ಈ ಜನವಿರೋಧಿ ಕ್ರಮಗಳನ್ನು ತಕ್ಷಣ ಹಿಂತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ದೇಶವ್ಯಾಪಿ ಉಗ್ರಹೋರಾಟಗಳನ್ನು ನಡೆಸಬೇಕಾದೀತು ಎಂದು ಎಚ್ಚರಿಸಿದರು.




ಸಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ಪಿ.ಸಂಜೀವರವರು ಮಾತನಾಡುತ್ತಾ ಜನಪರವಾದ ಆಡಳಿತ ನಡೆಸುವ ಸಲುವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಎಡಪಕ್ಷಗಳು ಯುಪಿಎ ಸರಕಾರಕ್ಕೆ ಬೆಂಬಲ ನೀಡಿವೆಯಾದರೂ ಸರಕಾರವು ಜನತೆಯ ಮೇಲೆ ಬೆಲೆ ಏರಿಕೆಯಂತಹ ಕ್ರಮಗಳನ್ನು ಹೇರುವುದನ್ನು ಎಡಪಕ್ಷಗಳು ಸಹಿಸುವುದಿಲ್ಲವೆಂದು ಹೇಳಿದರು.

ಸಿಪಿಐ(ಎಂ)ನ ಜೆ.ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿ, ಸಿಪಿಐನ ಚಂದ್ರಪ್ಪ ಅಂಚನ್ ವಂದಿಸಿದರು.

ಸಿಪಿಐ(ಎಂ) ಮತ್ತು ಸಿಪಿಐ ಪಕ್ಷದ ಕಾರ್ಯಕರ್ತರು ಮೈದಾನ್ ರಸ್ತೆಯ ತಮ್ಮ ಕಛೇರಿಗಳ ಮುಂದಿನಿಂದ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಸಾಗಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರದರ್ಶನ ನಡೆಸಿದರು.

ಗುಲ್ಬರ್ಗ : ಬೆಲೆ ಏರಿಕೆ ಖಂಡಿಸಿ ನಗರದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಮೆರವಣಿಗೆ ಮೂಲಕ ಪಟೇಲ್ ಚೌಕದಿಂದ ಸಾಗಿ ಜಿಲ್ಲಾಧಿಕಾರಿ ಕಛೇರಿ ಎದುರು ಬಹಿರಂಗ ಸಭೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಶಹಾಪುರ ತಾಲೂಕಿನಲ್ಲಿ ದರ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಕೋಲಾರ : ಕೋಲಾರ ಹಾಗೂ ಚಿಂತಾಮಣಿ ತಾಲೂಕಿನಲ್ಲಿ ಪ್ರತಿಭಟನೆಗಳು ನಡೆದಿವೆ. ಬರಗಾಲದ ಬೇಗೆಗೆ ಸಿಕ್ಕಿ ಕಂಗೆಟ್ಟಿರುವ ಜನರಿಗೆ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಿರುವುದು ಖಂಡನೀಯ ಎಂದು ಸಿಪಿಐ(ಎಂ)



ತಾಲೂಕು ಕಾರ್ಯದರ್ಶಿ ಸಿ.ಗೋಪಿನಾಥ ತಿಳಿಸಿದ್ದಾರೆ. ರೈತರು ಉಪಯೋಗಿಸುವ ರಸಗೊಬ್ಬರ ಮತ್ತಿತರ ವಸ್ತುಗಳು ರೈತರ ಕೈಗೆಟುಕದೆ ತುಟ್ಟಿಯಾಗುವುದರಿಂದ ಉಳುಮೆಗಾಗಿ ಟ್ರಾಕ್ಟರ್ ಅವಲಂಭಿಸಿರುವ ರೈತರ ಜೀವನ ಮತ್ತಷ್ಟು ಗೊಂದಲಕಾರಿಯಾಗುತ್ತಿದೆ, ಅಲ್ಲದೆ ಪೆಟ್ರೋಲ್ ದರಗಳನ್ನು ಇಳಿಸದಿದ್ದಲ್ಲಿ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಉಡುಪಿ: ಉಡುಪಿ ಮತ್ತು ಕುಂದಾಪುರಗಳಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ. ಕುಂದಾಪುರದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಶಂಕರ ರವರ ನೇತೃತ್ವವಹಿಸಿದ್ದರು.

ತುಮಕೂರು: ಸಿಪಿಐ(ಎಂ) ಮತ್ತು ಸಿಪಿಐಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದ್ದು, ಹಲವಾರು ಕಾರ್ಯಕರ್ತರನ್ನು ಬಂಧಿಸಯಿತು. ಸಿಪಿಐ ನ ಮುಖಂಡರಾದ ಎನ್.ಶಿವಣ್ಣ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್ ಮತ್ತಿತರರು 300ಕ್ಕೂ ಹೆಚ್ಚಿನ ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು: ಮೈಸೂರು ನಗರದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ನೇತೃತ್ವದಲ್ಲಿ 500ಕ್ಕೂ ಹೆಚ್ಚು ಪ್ರತಿಭಟನಕಾರರು ಧರಣಿಯಲ್ಲಿ ಭಾಗವಹಿಸಿದ್ದರು, ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಪ್ರಭಾಕರ ಅವರು ವಹಿಸಿದ್ದರು.

ಬಳ್ಳಾರಿ : ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಶಿರುಗುಪ್ಪ ನಗರಗಳಲ್ಲಿ ರಸ್ತೆ ತಡೆ ಹಾಗೂ ಪ್ರತಿಭಟನಾ ಮೆರವಣಿಗೆಗಳು ನಡೆಸಲಾಯಿತು. ಹೊಸಪೇಟೆಯಲ್ಲಿ ಜಿಲ್ಲಾ ಮಟ್ಟದ ಸಭೆ ಬಳಿಕ ಸಿಪಿಐ(ಎಂ)ನ ಕಾರ್ಯಕರ್ತರು, ನಾಗರೀಕರು ಬಸ್ ಸ್ಟ್ಯಾಂಡ್ ಎದುರು ರಸ್ತೆ ತಡೆ ಮಾಡಿ, ಸಭೆ ನಡೆಸಿದರು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಪ್ರಸನ್ನಕುಮಾರ್, ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜು, ಮುಖಂಡರಾದ ವೆಂಕಟರಮಣ, ಕರುಣಾನಿಧಿ, ಶಿವಶಂಕರ, ಮುಂತಾದವರು ಭಾಗವಹಿಸಿದ್ದರು.

ರಾಯಚೂರು, ದೇವದುರ್ಗ, ಹಟ್ಟಿಯಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ, ಅಲ್ಲದೆ ಸಿಂಧನೂರು, ಮಾನ್ವಿಯಲ್ಲಿ ಸಹ ಪ್ರತಿಭಟನೆಗಳು ನಡೆದಿವೆ.. ದಾವಣಗೆರೆ, ಜಗಳೂರು, ಹರಪನಹಳ್ಳಿಯಲ್ಲಿ, ಬಿಜಾಪುರ ನಗರದಲ್ಲಿ ನೂರಾರು ಜನ ಪ್ರತಿಭಟನೆ ನಡೆಸಿದರು. ಉತ್ತರ ಕನ್ನಡ, ಹೊನ್ನಾವರ, ಕಾರವಾರಗಳಲ್ಲಿ ರಸ್ತೆ ತಡೆ, ಬಹಿರಂಗ ಸಭೆ ನಡೆಸಿದರು ಉತ್ತರ ಕನ್ನಡ ಜಿಲ್ಲಾ ಕಾರ್ಯದರ್ಶಿ ಶಾಂತರಾಮ ನಾಯಕ್ ಇತರೆ ಸಿಪಿಐ(ಎಂ) ಕಾರ್ಯಕರ್ತರು ಭಾಗವಹಿಸಿದ್ದರು. ಹಾವೇರಿ, ಹಾನಗಲ್ ನಲ್ಲಿ ಕೂಡ ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಹಮಾಲರಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ಇದಲ್ಲದೇ ಇನ್ನೂಹಲವೆಡೆ ವ್ಯಾಪಕವಾದ ಪ್ರತಿಭಟನೆಗಳು ನಡೆದಿವೆ.

ಕುಂದಾಪುರದಲ್ಲಿ ಪ್ರತಿಭಟನಾ ಮತ ಪ್ರದರ್ಶನ

ಜೂನ್ 28ರಂದು ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿಯು ನೇತೃತ್ವದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ವಿರುದ್ಧ ಹಾಗೂ ಬಸ್ ಪ್ರಯಾಣದ ಏರಿಕೆಯ ವಿರುದ್ಧ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಹಾಗೂ ಸಾಮೂಹಿಕ ಸಂಘಟನೆಗಳ ಸದಸ್ಯರು ಮತ್ತು ಆಟೋರಿಕ್ಷಾ ಚಾಲಕರು, ಶಾಸ್ತ್ರೀ ಸರ್ಕಲ್‌ನಿಂದ ಮೆರವಣಿಗೆ ಹೊರಟು ತಹಶೀಲ್ದಾರ್ ಕಛೇರಿ ಎದುರು ಸಂಜೆ ಬೃಹತ್ ಪ್ರತಿಭಟನಾ ಮತ ಪ್ರದರ್ಶನ ನಡೆಸಿದರು.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಬಸ್ ಪ್ರಯಾಣ ದರವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಕಾರ್ಯದರ್ಶಿಯವರಾದ ಮಹಾಬಲ ವಡೇರಹೋಬಳಿ ಸ್ವಾಗತಿಸಿ, ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು. ಸಭೆಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ತೀವ್ರವಾದ ವಿರೋಧವನ್ನು ಲೆಕ್ಕಿಸದೇ ಕೇಂದ್ರ ಯುಪಿಎ ಸರಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಏರಿಸಿದ್ದನ್ನು ಖಂಡಿಸಿದರು. ರಾಜ್ಯ ಸರಕಾರವು ಕೂಡಲೇ ಬಸ್ ಪ್ರಯಾಣ ದರವನ್ನು ಏರಿಸಿ, ಜನ ಸಾಮಾನ್ಯರನ್ನು ಸಂಕಷ್ಟಕ್ಕೆ ಒಳಪಡಿಸಿದೆ ಎಂದರು. ಕೂಡಲೇ ಬೆಲೆ ಏರಿಕೆಯನ್ನು ಕೈ ಬಿಡುವಂತೆ ಆಗ್ರಹಿಸಿದರು.

ಪ್ರತಿಭಟನಾ ಕಾರ್ಯಕ್ರಮದ ನೇತೃತ್ವವನ್ನು ಕೆ.ಶಂಕರ್, ಮಹಾಬಲ ವಡೇರ ಹೋಬಳಿ, ಸಿ.ನಾರಾಯಣ, ಯು.ದಾಸ ಭಂಡಾರಿ, ಎಚ್.ನರಸಿಂಹ, ಅಶ್ವತ್ ಕುಮಾರ್ ಮತ್ತು ಚಂದ್ರ ವಿ. ವಹಿಸಿದ್ದರು.

ರಾಯಚೂರಿನಲ್ಲಿ ರಸ್ತಾ ರೋಕೋ

ಕೇಂದ್ರದ ಯುಪಿಎ ಸರಕಾರವು ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಏರಿಕೆ ನೀತಿಯನ್ನು ವಿರೋಧಿಸಿ, ಹಾಗೂ ಬೆಲೆ ಏರಿಕೆ ವಾಪಸ್ಸು ಪಡೆಯುವಂತೆ ಆಗ್ರಹಿಸಿ ಸಿಪಿಐ(ಎಂ) ರಾಯಚೂರು ಸ್ಥಳೀಯ ಸಮಿತಿ ನೇತೃತ್ವದಲ್ಲಿ ಜೂನ್ 28ರ ಬೆಳಿಗ್ಗೆ ಬಸ್ ಸ್ಟ್ಯಾಂಡ್ ಮುಂದುಗಡೆ ಅರ್ಧ ಗಂಟೆಗಳ ಕಾಲ ರಸ್ತೆ ರೋಕೋ ಮಾಡಿ ಕೇಂದ್ರ ಸರ್ಕಾರದ ಭೂತವನ್ನು ದಹಿಸುವುದರ ಮುಖಾಂತರ, ರಾಷ್ಟ್ರವ್ಯಾಪಿ ಮುಷ್ಕರದ ಭಾಗವಾಗಿ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಬಸ್ ಪ್ರಯಾಣದ

ಪುಟ 11 ಕ್ಕೆ



ತುರ್ತು ಪರಿಸ್ಥಿತಿ

ಕರಾಳ ರಾಣಿಯ ಕಾಲು ಹಿಡಿದ ಸಂಘ ಪರಿವಾರ

ಪ್ರಜಾಪ್ರಭುತ್ವ ತತ್ವಗಳ ಬಗ್ಗೆ ಎಳ್ಳುಕಾಳಿನಷ್ಟು ಗೌರವ-ಬದ್ಧತೆಗಳು ಇಲ್ಲದಿದ್ದರೂ ಹಲವಾರು ಪ್ರಶ್ನೆಗಳಲ್ಲಿ ಸ್ವತಃ ಹಿಟ್ಲರನೇ ಇಲ್ಲಿಂದ ಕಲಿಯಬೇಕಾದಂತಹ ಹಲವು ಹೀನ ಫ್ಯಾಸಿಸ್ಟ್ ತಂತ್ರಗಳನ್ನು ಮತ್ತು ಯೋಜನೆಗಳನ್ನು ದೇಶದ ಮೇಲೆ ಬಲಾತ್ಕಾರವಾಗಿ ಹೇರುತ್ತಿರುವ ಸಂಘ ಪರಿವಾರ ಈಗ ತುರ್ತು ಪರಿಸ್ಥಿತಿಯನ್ನು ಹೇರಿದ 30ನೇ ವರ್ಷದ ಸಂದರ್ಭದಲ್ಲಿ ತಾನೇ ಈ ದೇಶದ 'ಪ್ರಜಾಪ್ರಭುತ್ವ'ದ ರಕ್ಷಕ, ತಾನೇ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಹಿಮ್ಮೆಟ್ಟಿಸಿದ್ದು ಎಂಬಂತೆ ಪ್ರಚಾರದ ಕೋಲಾಹಲವೆಬ್ಬಿಸಲು ಪ್ರಯತ್ನಿಸುತ್ತಿದೆ. ಆದರೆ ಇಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳುವುದು ಮಾಧ್ಯಮಗಳಲ್ಲಿ ತಪ್ಪಿಹೋಗುತ್ತಿದೆ.

ಅಮಾನವೀಯ ಪಾಳೇಗಾರಿ ಭೂಮಾಲಕ ವ್ಯವಸ್ಥೆಯನ್ನು ಆ ಮೂಲಕ ಭಾರತೀಯ ಸಮಾಜದ ಆರ್ಥಿಕ-ಸಾಮಾಜಿಕ ಅಸಮಾನತೆಯನ್ನು ಕ್ರೋಢೀಕರಿಸಿ ಬಲಗೊಳಿಸಿದ ಬ್ರಿಟೀಷರೊಂದಿಗೆ ಶಾಮೀಲಾಗಿ ದೇಶದ ಸ್ವಾತಂತ್ರ್ಯ ಚಳುವಳಿಗೆ ಬೆನ್ನು ತಿರುಗಿಸಿ ಬ್ರಿಟೀಷರ ಏಜೆಂಟರಂತೆ ವರ್ತಿಸಿದ ಸಂಘ ಪರಿವಾರ, ಸ್ವಾತಂತ್ರ್ಯಾ ನಂತರದಲ್ಲಿ ದೇಶಪ್ರೇಮವನ್ನು ಸಾರಾಸಗಟು ಗುತ್ತಿಗೆಗೆ ತೆಗೆದುಕೊಂಡಿರುವ ಗುತ್ತಿಗೆದಾರರಂತೆ ವರ್ತಿಸುತ್ತಿರುವುದು ಮತ್ತು ಅದರ ದಬಾವಣೆ ಸಂಸ್ಕೃತಿ ದೇಶದ ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಸಾಕಷ್ಟು ಪರಿಚಿತವಾದದ್ದೇ.

ಪ್ರಜಾಪ್ರಭುತ್ವ ತತ್ವಗಳ ಬಗ್ಗೆ ಎಳ್ಳುಕಾಳಿನಷ್ಟು ಗೌರವ-ಬದ್ಧತೆಗಳು ಇಲ್ಲದಿದ್ದರೂ ಹಲವಾರು ಪ್ರಶ್ನೆಗಳಲ್ಲಿ ಸ್ವತಃ ಹಿಟ್ಲರನೇ ಇಲ್ಲಿಂದ ಕಲಿಯಬೇಕಾದಂತಹ ಹಲವು ಹೀನ ಫ್ಯಾಸಿಸ್ಟ್ ತಂತ್ರಗಳನ್ನು ಮತ್ತು ಯೋಜನೆಗಳನ್ನು ದೇಶದ ಮೇಲೆ ಬಲಾತ್ಕಾರವಾಗಿ ಹೇರುತ್ತಿರುವ ಸಂಘ ಪರಿವಾರ ಈಗ ತುರ್ತು ಪರಿಸ್ಥಿತಿಯನ್ನು ಹೇರಿದ 30ನೇ ವರ್ಷದ ಸಂದರ್ಭದಲ್ಲಿ ತಾನೇ ಈ ದೇಶದ 'ಪ್ರಜಾಪ್ರಭುತ್ವ'ದ ರಕ್ಷಕ, ತಾನೇ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಹಿಮ್ಮೆಟ್ಟಿಸಿದ್ದು ಎಂಬಂತೆ ಪ್ರಚಾರದ ಕೋಲಾಹಲವೆಬ್ಬಿಸಲು ಪ್ರಯತ್ನಿಸುತ್ತಿದೆ. ಆದರೆ ಇಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳುವುದು ಮಾಧ್ಯಮಗಳಲ್ಲಿ ತಪ್ಪಿಹೋಗುತ್ತಿದೆ.

ಆರೆಸ್ಸೆಸ್‌ನ ಅಂದಿನ ಸರಸಂಘಚಾಲಕ ಬಾಳಸಾಹೇಬ ದೇವರಸ್ ಮೊದಲಾಗಿ ಸಂಘ ಪರಿವಾರದ ಮುಖಂಡರು ತಾವು ಜೈಲಿನಿಂದ ಹೊರಬರಲು, ಆರೆಸ್ಸೆಸ್ ಮೇಲಿನ ನಿಷೇಧವನ್ನು ತೆಗೆದು 'ಹಾಕಿಸಿ'ಕೊಳ್ಳಲು ಮಾಡಿದ ಪ್ರಯತ್ನಗಳು, ಅವರ ಮನಸ್ಸಿನ ಕ್ಷಮಾಪಣೆ ಬೇಡುವ ತುಡಿತವನ್ನು, ತುರ್ತುಪರಿಸ್ಥಿತಿಯ ಕರಾಳ ರಾಣಿ ಇಂದಿರಾ ಗಾಂಧಿಯನ್ನು ಹೊಗಳುವ ಅವರ ಅಂತರಂಗದ ಮಿಡಿತವನ್ನು ಸಾರುವ ಪತ್ರಗಳು, ಅಂತಿಮವಾಗಿ ಅವರು ಅಂದಿನ ಸರ್ಕಾರಕ್ಕೆ ಬರೆದು ಸಹಿ ಮಾಡಿಕೊಟ್ಟಿರುವ ಮುಚ್ಚಳಿಕೆ ಎಲ್ಲವೂ ಮಾಧ್ಯಮಗಳ ವರದಿಗಳಲ್ಲಿ ಕಾಣೆಯಾಗಿವೆ.

ಸಂಘ ಪರಿವಾರದ ಹೇಡಿತನ ಮತ್ತು ಗೋಸುಂಬೆತನವನ್ನು ಬಯಲು ಮಾಡುವ ಈ ದೇವರಸರ ಪತ್ರವನ್ನು ಗಮನಿಸಿ -

ಆಚಾರ್ಯ ವಿನೋಬಾರವರ ಪಾದಚರಣಗಳಿಗೆ

ಈಕ್ರಾ ಜೈಲಿನಿಂದ 12.1.1976 ರಂದು ನಾನು ನಿಮಗೊಂದು ಪತ್ರ ಬರೆದಿದ್ದೆ. ಆಚಾರ್ಯರ ಸಮ್ಮೇಳನಕ್ಕೆ ಮುಂಚಿತವಾಗಿ ನಿಮಗೆ ಅದು ಸಿಕ್ಕಿರಬಹುದು ಎಂದು ನಾನು ಭಾವಿಸುತ್ತೇನೆ. ಆ ಪತ್ರದಲ್ಲಿ ಸಂಘ ಪರಿವಾರದ ಮೇಲೆ ಇತ್ತೀಚಿಗೆ ಹೊರಿಸಿರುವ ಆರೋಪಗಳಿಗೆ ಸಂಘವು ಏನೆಂದು ಉತ್ತರಿಸಬೇಕೆಂಬ ಬಗ್ಗೆ ಬರೆದಿದ್ದೆ. ಹಾಗೂ ತಾವು ಸಂಘದ ಮೇಲೆ ಹೇರಿರುವ ನಿಷೇಧವನ್ನು ತೆಗೆಯಲು ಸಹಾಯ ಮಾಡಬೇಕೆಂದು ಪ್ರಾರ್ಥಿಸಿದ್ದೆ.

ಆಚಾರ್ಯರ ಸಮ್ಮೇಳನದಲ್ಲಿ ತಮ್ಮ ಮಾರ್ಗದರ್ಶನದಿಂದಾಗಿ ನಮ್ಮ ಮಿತ್ರರೆಲ್ಲಾ ಭವಿಷ್ಯದ ಬಗೆಗೆ ವಿಶ್ವಾಸ ಮತ್ತು ಆಶಾಭಾವ ತಾಳಿದ್ದಾರೆ. ಸಮ್ಮೇಳನದ ಚರ್ಚೆ ಹಾಗೂ ಸರ್ವಾನುಮತದ ನಿರ್ಣಯಗಳ ಬಗೆಗೆ ನಾವು ಪತ್ರಿಕೆಗಳಲ್ಲಿ ಓದಿದೆವು.

ನೀವು ಭೂದಾನ ಚಳುವಳಿಯ ಪಾದಯಾತ್ರೆಯಲ್ಲಿದ್ದಾಗ ಬಿಹಾರ, ಉತ್ತರಪ್ರದೇಶ ಮುಂತಾದ ರಾಜ್ಯಗಳಲ್ಲಿ ಆರೆಸ್ಸೆಸ್ ಸ್ವಯಂ ಸೇವಕರು ತಮ್ಮನ್ನು ಭೇಟಿ ಮಾಡಿದ್ದಾರೆ ಮತ್ತು ತಮ್ಮೊಂದಿಗೆ ಪಾಲ್ಗೊಂಡಿದ್ದಾರೆ.

ಗೌರವಾನ್ವಿತ ಪ್ರಧಾನಮಂತ್ರಿಗಳು ಇದೇ 24ರಂದು ಪಾವನರ್‌ನಲ್ಲಿ ತಮ್ಮನ್ನು ಭೇಟಿಯಾಗಲಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ದೇಶದ ಪ್ರಸ್ತುತ ಪರಿಸ್ಥಿತಿಯ ಬಗೆಗೆ ಅಲ್ಲಿ ಚರ್ಚೆಯಾಗಲಿದೆ. ಈ ಸಂದರ್ಭದಲ್ಲಿ ಸಂಘದ ಬಗೆಗೆ ಪ್ರಧಾನ ಮಂತ್ರಿಯವರಿಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ -ಸಂಘ ಪರಿವಾರದ ಸ್ವಯಂ ಸೇವಕರು ಪ್ರಧಾನಿಯವರ ನಾಯಕತ್ವದಲ್ಲಿ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಮತ್ತು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಮತ್ತು ಬಂಧನದಿಂದ ಬಿಡುಗಡೆಯಾಗುವಂತೆ, ಸಂಘದ ಮೇಲಿರುವ ನಿಷೇದ ತೆಗೆಯುವಂತೆ ಮಾಡಲು ಪ್ರಯತ್ನಿಸಬೇಕಾಗಿ ಪಾರ್ಥಿಸುತ್ತೇನೆ.

ನಿಮ್ಮ ಆಶೀರ್ವಾದಕ್ಕಾಗಿ ಪ್ರಾರ್ಥಿಸುತ್ತಾ
ನಿಮ್ಮ ವಿದೇಯ
ಮಧುಕರ್ ದತ್ತಾತ್ರೇಯ ದೇವರಸ್
ರಾಷ್ಟ್ರೀಯ ಸ್ವಯಂ ಸೇವಕ ಸಂಘ

ಇದು ಸಂಘದ ಮುಖ್ಯಸ್ಥ ಬಾಳಸಾಹೇಬ್ ದೇವರಸರು ಅಂದು 'ಭೂದಾನ' ಚಳುವಳಿಯನ್ನು ನಡೆಸುತ್ತಿದ್ದ ವಿನೋಬಾರವರಿಗೆ ಬರೆದ ಪತ್ರ. ರಾಷ್ಟ್ರವ್ಯಾಪಿ ಭುಗಿಲೇಳುತ್ತಿದ್ದ ಭೂ ಆಕ್ರಮಣ ಚಳುವಳಿಯು ಇನ್ನಷ್ಟು ವ್ಯಾಪಕಗೊಂಡು ಮತ್ತೂ ಕ್ರಾಂತಿಕಾರಕ ಸ್ವರೂಪ ತಳೆಯುವುದನ್ನು ತಡೆಯುವುದು ಈ ಭೂದಾನ ಚಳುವಳಿಯ ಒಂದು ಪ್ರಮುಖ ಉದ್ದೇಶವಾಗಿತ್ತು ಎಂಬುದು ಹಲವರಿಗೆ ಗೊತ್ತಿದ್ದದ್ದೇ. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಲು ಕಾರಣವಾದದ್ದರಲ್ಲಿ ಕಮ್ಯುನಿಸ್ಟರ ನೇತೃತ್ವದ ಭೂ ಆಕ್ರಮಣ ಚಳುವಳಿ - ಈ ಭೂಮಿಯ ಪ್ರಶ್ನೆಯೂ ನಿರ್ಣಾಯಕ ಎಂಬುದನ್ನು ಇಲ್ಲಿ ನೆನಸಿಕೊಳ್ಳಬೇಕು.

ಹೀಗೆ ಉಳುವವನಿಗೆ - ಭೂಮಿಯ ನಿಜವಾದ ವಾರಸುದಾರನಿಗೆ ಭೂಮಿ ದಕ್ಕದಂತೆ ಮಾಡುವ ನಿಟ್ಟಿನಲ್ಲಿ ಬೇರೆ ಬೇರೆ ರೂಪಗಳಲ್ಲಿ ಶ್ರಮಿಸುತ್ತಿದ್ದವರೆಲ್ಲಾ ಹೇಗೆ ತುರ್ತುಪರಿಸ್ಥಿತಿಯಲ್ಲಿ 'ಸಂಘ ಪರಿವಾರ'ದ ಮೇಲಿನ ನಿಷೇಧ ತೆಗೆಯುವ ಸಂಬಂಧ ಒಂದಾಗಿದ್ದಾರೆ ಗಮನಿಸಿ.

ವಿನೋಬಾ ಭಾವೆಯವರಿಗೆ ಈ ಪತ್ರ ಬರೆದ ಸ್ವಲ್ಪವೇ ಸಮಯದಲ್ಲಿ ಅಂದರೆ ಫೆಬ್ರವರಿ 1976 ರಲ್ಲಿ ಸ್ವತಃ ಬಾಳಸಾಹೇಬ ದೇವರಸ್ ಇಂದಿರಾ ಗಾಂಧಿಯವರನ್ನು ಭೇಟಿ ಮಾಡುವ ಪ್ರಯತ್ನವನ್ನು ನೋಡಿ.

ಫೆಬ್ರವರಿ 1976 ರಲ್ಲಿ ಇಂದಿರಾ ಗಾಂಧಿಯವರು 'ಬಾಂಬೆಗೆ ಭೇಟಿ ನೀಡುವಾಗ' ಅವರನ್ನು ಮುಖತಃ ಭೇಟಿಯಾಗುವ ಸಲುವಾಗಿ ಬಾಳಸಾಹೇಬ ದೇವರಸರು 'ಜೈಲಿನಿಂದ ಬಾಂಬೆಯ ಸೇಂಟ್ ಜಾರ್ಜ್ ಆಸ್ಪತ್ರೆಗೆ ದಾಖಲಾದರು'. ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿ ಶಂಕರ್‌ರಾವ್ ಚವ್ಹಾಣ್ ಅವರ ಮೂಲಕ ಸಹ ಇಂದಿರಾ ಗಾಂಧಿಯವರ ಭೇಟಿಗೆ ಪ್ರಯತ್ನಿಸಲಾಗಿತ್ತು.

ಇಷ್ಟು ಮಾತ್ರವಲ್ಲ ಸರ್ಕಾರ ಮತ್ತು



ಸಂಘಪರಿವಾರ ಈ ಎರಡೂ ಫ್ಯಾಸಿಸ್ಟಿಕ್ ಪ್ರವೃತ್ತಿಗಳನ್ನು ಪ್ರತಿನಿಧಿಸುವ ಈ ಮುಖಂಡರ ನಡುವೆ ಇರುವ ಸಂಬಂಧವನ್ನು ಸಾರುವ ಈ ಪತ್ರಗಳನ್ನು ಗಮನಿಸಿ. ದೇವರಸರು ಇಂದಿರಾ ಗಾಂಧಿಯವರಿಗೆ ಎರಡು ಪತ್ರಗಳನ್ನು ಬರೆದಿದ್ದಾರೆ.

ಇವುಗಳಲ್ಲಿ ಒಂದು ಪತ್ರ ಇಂದಿರಾ ಗಾಂಧಿಯವರಿಗೆ ಅವರ ಜನ್ಮದಿನದಂದು ಬರೆದದ್ದು. 'ಜನ್ಮದಿನದ ಅಂಗವಾಗಿ ಬರೆದ ಶುಭಾಶಯ ಪತ್ರ' ಅದು. ಇರಲಿ, ಮತ್ತೊಂದು ಪತ್ರ ಇಂದಿರಾ ಗಾಂಧಿಯನ್ನು ಸುಪ್ರಿಂಕೋರ್ಟ್ ದೋಷ ಮುಕ್ತಗೊಳಿಸಿದಾಗ ಬರೆದ 'ಅಭಿನಂದನಾ' ಪತ್ರ. ಚುನಾವಣೆಯಲ್ಲಿನ ತಮ್ಮ ಆಯ್ಕೆಯನ್ನು ಅಕ್ರಮ ಎಂದು ಅಸಿಂಧುಗೊಳಿಸಿದ್ದ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟಿಗೆ ಹೋಗಿ ನಂತರ ಸಂವಿಧಾನಕ್ಕೆ ತಾವೇ ತಂದ ಏಕಪಕ್ಷೀಯ ತಿದ್ದುಪಡಿಯ ಮೂಲಕ ಸುಪ್ರಿಂ ಕೋರ್ಟ್‌ನಲ್ಲಿ ಇಂದಿರಾ 'ದೋಷಮುಕ್ತ'ರಾದರು ಎಂಬುದು ದೇವರಸರಿಗೆ ಗೊತ್ತಿಲ್ಲದ ಸಂಗತಿಯೇನು ಆಗಿರಲಿಲ್ಲ.

ತುರ್ತು ಪರಿಸ್ಥಿತಿಯ ಕಾನೂನಿಗೆ ತೊಡಕುಂಟುಮಾಡುವ ಯಾವುದೇ ಚಟುವಟಿಗೆ ಮುಂದಾಗುವುದಿಲ್ಲ ಎಂದು ಸಹಿ ಮಾಡಿಕೊಟ್ಟು 'ಷರತ್ತಿನ ಬಿಡುಗಡೆ' ಪಡೆದ 'ಸ್ವಯಂಸೇವಕ' ಸಂಘದ ಮುಖಂಡರಿಗೆ ದೇಶವ್ಯಾಪಿ ತುರ್ತು ಪರಿಸ್ಥಿತಿ ಹೇರುವುದಕ್ಕೆ ಮುಂಚೆಯೇ ಅರವತ್ತರ ದಶಕದ ಕೊನೆ -ಎಪ್ಪತ್ತರ ದಶಕದ ಆರಂಭದಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ತುರ್ತು ಪರಿಸ್ಥಿತಿ- ಅರೆ ಫ್ಯಾಸಿಸ್ಟ್ ದಬ್ಬಾಳಿಕೆ ಹೇರಿದ ಕಾಂಗ್ರೆಸ್ ಹಾಗೂ ಇಂದಿರಾ ಅದನ್ನು ರಾಷ್ಟ್ರವ್ಯಾಪಿ ವಿಸ್ತರಿಸುವ ಎಲ್ಲ ಲಕ್ಷಣಗಳು ಕಾಣುತ್ತಿದ್ದಾಗಲೂ ತುರ್ತು ಪರಿಸ್ಥಿತಿಯ ಕರಾಳರಾಣಿಗೆ ಜನ್ಮದಿನದ ಶುಭಾಶಯ ಪತ್ರ ಬರೆಯಬಲ್ಲ, ದೋಷಮುಕ್ತರಾಗಿದ್ದಕ್ಕೆ ಅಭಿನಂದನೆ ಹೇಳಬಲ್ಲ ಸಂಭ್ರಮವನ್ನು ನಾವು ಗಮನಿಸಬೇಕು.

ಮುಂದೆ ದೇವರಸರು ದೆಹಲಿಯ ಪತ್ರಿಕಾಗೋಷ್ಠಿಯೊಂದರಲ್ಲಿ ತಮ್ಮ ಈ ಎರಡೂ ಪತ್ರಗಳ ಬಗೆಗೆ ತಪ್ಪೊಪ್ಪಿಗೆ ನೀಡಿದ್ದಾರೆ. ಆದರೆ ಅದರಿಂದ ತುರ್ತು ಪರಿಸ್ಥಿತಿಯನ್ನು ಜನಪರ ಚಳುವಳಿಯ ಮೇಲೆ ಮಾತ್ರ ಹೇರಿ 'ತಮ್ಮ ಪರಿವಾರ' ಮಾತ್ರ ವನ್ನು ಅದರಿಂದ ಹೊರಗೊಯ್ಯುವ ಹುನ್ನಾರವನ್ನು ಮರೆಮಾಚಲು ಸಾಧ್ಯವೇ.

ಇದೋ ಇಲ್ಲಿದೇ ನೋಡಿ ಸಂಘಪರಿವಾರದ ಘನ ದೇಶಪ್ರೇಮಿಗಳು -ಪ್ರಜಾಪ್ರಭುತ್ವದ ರಕ್ಷಕರು ಮಹಾರಾಷ್ಟ್ರ ಸರ್ಕಾರಕ್ಕೆ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

ಸಂಘಪರಿವಾರದ ಸ್ವಯಂ ಸೇವಕರು ಒಪ್ಪಿ ಸಹಿ ಮಾಡಿರುವ ಸರಕಾರದ ಮುದ್ರಿತ ಮುಚ್ಚಳಿಕೆ ಮಾದರಿ

"ಶ್ರೀ........ಖೈದಿ, ತರಗತಿ 1......


ಆದ ನಾನು ಒಪ್ಪಿ ಮಾಡಿದ ಪ್ರಮಾಣವೇನೆಂದರೆ ಒಂದೊಮ್ಮೆ ನನ್ನನ್ನು ಬಿಡುಗಡೆ ಮಾಡಿದಲ್ಲಿ ಅಂತರಿಕ ಭದ್ರತೆಗೆ ಮತ್ತು ಸಾರ್ವಜನಿಕ ಶಾಂತಿಗೆ ಭಂಗ ತರುವ ಯಾವುದೇ ಕ್ರಮಕ್ಕೆ ನಾನು ಮುಂದಾಗುವುದಿಲ್ಲ. ಅದೇ ರೀತಿ ನಾನು ಅವಶ್ಯಕ ವಸ್ತುಗಳ ವಿತರಣೆಗೆ ತೊಡಕು ಮಾಡುವಂತಹದ್ದೇನು ಮಾಡುವುದಿಲ್ಲ. ನಾನು ಯಾವುದು ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ. ಪ್ರಸಕ್ತ ತುರ್ತು ಪರಿಸ್ಥಿತಿಗೆ ಹಾನಿಯನ್ನುಂಟುಮಾಡುವಂತಹ ಯಾವುದೇ ಚಟುವಟಿಕೆಗಳಲ್ಲಿ ನಾನು ತೊಡಗುವುದಿಲ್ಲ".

ಇಂತಹ ಒಂದು ಮುಚ್ಚಳಿಕೆಗೆ ಸಂಘ ಪರಿವಾರದ ಸ್ವಯಂಸೇವಕರು ಸಹಿ ಮಾಡುವ ವಿಚಾರವು ಅಂದು ಇದೇ ಮಹಾರಾಷ್ಟ್ರದ ಜೈಲುಗಳಲ್ಲಿದ್ದ 'ಜೆಪಿ'ವಾದಿಗಳು ಸಮಾಜವಾದಿಗಳನ್ನು, ಎಡಪಂಥೀಯರನ್ನು ಕೆರಳಿಸಿತು. ಬಾಬುರಾವ್ ಸಾವಂತ್, ದಶರತ್ ಪಾಟಿಲ್, ಭಗತ್ಕರ್ ಮುಂತಾದ ಮುಖಂಡರು ಸಂಘ ಪರಿವಾರದ ಮುಖಂಡರನ್ನು ಭೇಟಿ ಮಾಡಿ ಮುಚ್ಚಳಿಕೆಗೆ ಸಹಿ ಹಾಕುವುದನ್ನು ತಪ್ಪಿಸದಿದ್ದರೆ ಸಂಘದ ಇನ್ನೂ ಬಹಳಷ್ಟು ಸ್ವಯಂ ಸೇವಕರು ಮುಚ್ಚಳಿಕೆಗೆ ಸಹಿ ಹಾಕುತ್ತಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿ ಉಳಿದದ್ದು ಬಿಜೆಪಿಯ ಒಂದು ಸಣ್ಣ ವಿಭಾಗ ಮಾತ್ರ. ತುರ್ತು ಪರಿಸ್ಥಿತಿ ವಿರುದ್ಧ ಸೆಣಸಿ ನಿಜವಾಗಿಯೂ ಸೆರೆವಾಸ ಅನುಭವಿಸಿದವರು ಕಮ್ಯೂನಿಷ್ಟರು, ಸಮಾಜವಾದಿಗಳು, ಜೆಪಿವಾದಿಗಳು ಮತ್ತಿತರೆ ಎಡಪಂಥೀಯರು. ಈ ಬಗ್ಗೆ ಆರೆಸ್ಸೆಸ್ ಹೇಳಿಕೊಳ್ಳುವ ಬಹಳಷ್ಟು ವಿಚಾರಗಳು ವಿವಾದಾಸ್ಪದವಾಗಿದೆ. ಇದರ ಬಗ್ಗೆ ತಜ್ಞರಾದ ಡಾ.ದೇಸರಾಜ್‌ಘೋಷ್‌ರವರು ಅವರ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ-

"ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆರೆಸ್ಸೆಸ್ ತಾನು ಹೇಳಿಕೊಳ್ಳುವಂತಹ ತ್ಯಾಗಮಯ ಧೀರೋದ್ದಾತ್ತ ಹೋರಾಟವನ್ನೇನೂ ಮಾಡಲಿಲ್ಲ. ಈ ಚಳುವಳಿಯ ಮೂಲಕ ಏನನ್ನಾದರೂ ಗಳಿಸಿಕೊಳ್ಳಲು ಸಾಧ್ಯವಿದ್ದ ಮತ್ತು ಅಂತಹ ನಿರೀಕ್ಷೆ ಹೊಂದಿದ್ದ ಕೆಲವರಷ್ಟೇ ಸಕ್ರಿಯವಾಗಿ ಉಳಿದರು. ಸಾಕಷ್ಟು ಹೆಮ್ಮೆಯಿಂದ ಡಂಗುರ ಸಾರಿಕೊಳ್ಳುವ ಆರೆಸ್ಸೆಸ್ ಪೂರ್ಣಾವಧಿ ಪ್ರಚಾರಕರಂತೂ ಬಹಳಷ್ಟು ಹತಾಶೆಗೊಂಡಿದ್ದರು. ಸರ್ಕಾರದ ಬಂಧನದಿಂದ ತಪ್ಪಿಸಿಕೊಳ್ಳುವ ಪ್ರಯತ್ನಕ್ಕೆ ಕೆಲವರು ಮುಂದಾದರೆ, ಬಹಳಷ್ಟು ಮಂದಿ ಆರೆಸ್ಸೆಸ್‌ಗೂ, ಜನಸಂಘಕ್ಕೂ, ತಮಗೂ ಯಾವುದೇ ಸಂಬಂಧವೇ ಇಲ್ಲ ಎಂದು ಲಿಖಿತವಾಗಿ ಘೋಷಿಸಿಬಿಟ್ಟರು...." ○

20 ವರ್ಷಗಳ ಹಿಂದೆ, ದುಂದುವೆಚ್ಚವನ್ನು ತಪ್ಪಿಸಲು ರಾಷ್ಟ್ರೀಕೃತ ಬ್ಯಾಂಕುಗಳನ್ನು ವಿಲೀನಗೊಳಿಸಿ ಎಂದು ನೌಕರ ಸಂಘಟನೆಗಳು ಗೋಗರೆದರೂ, ಕುರುಡಾಗಿದ್ದ ಸರ್ಕಾರ, ಈಗ ಹಠಾತ್ತಾಗಿ ವಿಲೀನಕರಣಕ್ಕೆ ಮುಂದಾಗುತ್ತಿರುವುದು ಏಕೆ? ವಿದೇಶಿ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿಯುತ್ತಿರುವ ಕೇಂದ್ರ ಸರ್ಕಾರ ಲಾಭದಾಯಕ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳ ತೆಕ್ಕೆಗೆ ಒಡ್ಡುತ್ತಿದೆ. ಈ ವಿಲೀನಕರಣ - ವಿಶ್ಲೇಷಣೆಯ ಲೇಖನ...



ಬ್ಯಾಂಕುಗಳ ವಿಲೀನ ಬೇಕೆ?

ಬಾಲಕೃಷ್ಣಶೆಟ್ಟಿ

ಇತ್ತೀಚೆಗೆ ಬೆಂಗಳೂರಿನ ಪುರಭವನದಲ್ಲಿ ಬಿ.ಇ.ಎಫ್.ಐ ನೊಂದಿಗೆ ಸಂಯೋಜಿತಗೊಂಡ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ 'ಬ್ಯಾಂಕುಗಳ ವಿಲೀನ ಮತ್ತು ಅರ್ಜನೆ' (Merger and Acquistion of Banks) ಕುರಿತು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಸಂಸತ್ತಿನಲ್ಲಿ ಸಿಪಿಐ(ಎಂ)ನ ನಾಯಕರಾಗಿರುವ ಬಸುದೇವ್ ಆಚಾರ್ಯ ಈ ವಿಚಾರ ಸಂಕಿರಣವನ್ನು ಉದ್ಘಾಟಿಸಿದ್ದು, ಸಿಐಟಿಯು ಕಾರ್ಯದರ್ಶಿ ಡಬ್ಲ್ಯ.ಆರ್.ವರದರಾಜನ್ ಮುಖ್ಯ ಅತಿಥಿಯಾಗಿದ್ದರು. ಕೆನರಾ ಬ್ಯಾಂಕಿನ ನೌಕರರಲ್ಲದೆ, ವಿವಿಧ ಬ್ಯಾಂಕು, ಉದ್ದಿಮೆಗಳಿಂದ ನೌಕರ ಸಂಘಟನೆಯ ಕಾರ್ಯಕರ್ತರು ಹಾಗೂ ಮುಖಂಡರು ಭಾಗವಹಿಸಿದ್ದ ಈ ಸಭೆಯಲ್ಲಿ ಬ್ಯಾಂಕುಗಳ ವಿಲೀನವನ್ನು ವಿರೋಧಿಸಬೇಕೆಂದು ಒಕ್ಕೊರಲಿನ ನಿರ್ಣಯ ಕೈಗೊಂಡರು.

ವಿದೇಶಿ ಹಣಕಾಸು ಬಂಡವಾಳದ ಮೊಸಳೆ ಬಾಯಿಗೆ ಲಾಭದಾಯಕ ಬ್ಯಾಂಕುಗಳು ?

ಕೆಲವು ವರ್ಷಗಳ ಹಿಂದೆ ಬ್ಯಾಂಕ್ ನೌಕರರ ಸಂಘಟನೆಗಳು ರಾಷ್ಟ್ರೀಕೃತ ಬ್ಯಾಂಕುಗಳು ವಿಲೀನಗೊಳ್ಳಬೇಕೆಂದು ಒತ್ತಾಯಿಸಿದ್ದವು. ಆಗಿನ ಕಾರಣಗಳೇ ಬೇರೆ. ಉದಾರೀಕರಣ ನೀತಿ ಬರುವ ಮೊದಲು, ರಾಷ್ಟ್ರೀಕೃತ ಬ್ಯಾಂಕುಗಳ ನಡುವೆಯೇ ಸ್ಪರ್ಧೆ ಏರ್ಪಟ್ಟಿದ್ದು ದುಂದುವೆಚ್ಚಕ್ಕೆ ಕಾರಣವಾಗಿತ್ತು. ಬೆಂಗಳೂರಿನ ಒಂದೇ ರಸ್ತೆಯಲ್ಲಿ (ಕೆಲವೊಮ್ಮೆ ಒಂದೇ ಕಟ್ಟಡದಲ್ಲಿ) ಹಲವ ರಾಷ್ಟ್ರೀಕೃತ ಬ್ಯಾಂಕುಗಳು ಕಾರ್ಯ ನಿರ್ವಹಿಸುವ ಬದಲಾಗಿ ಬ್ಯಾಂಕುಗಳು ವಿಲೀನಗೊಂಡರೆ, ಕಟ್ಟಡದ ಬಾಡಿಗೆ/ ಖರೀದಿ ಇತ್ಯಾದಿ ಖರ್ಚುಗಳು, ಒಳ ಅಲಂಕಾರ, ಮೇಲಾಧಿಕಾರಿಗಳ ದುಂದುವೆಚ್ಚ ಇವುಗಳನ್ನು ಕಡಿಮೆ ಮಾಡುವುದರ ಮೂಲಕ ಬ್ಯಾಂಕುಗಳ ಲಾಭವನ್ನು ಹೆಚ್ಚಿಸಬಹುದು ಎಂಬ ದೃಷ್ಟಿಕೋನವಿತ್ತು. ಅಲ್ಲದೆ ಕೆಲವು ಉದ್ದಿಮೆದಾರರು, ಭ್ರಷ್ಟ ಮೇಲಾಧಿಕಾರಿಗಳೊಂದಿಗೆ ಸೇರಿಕೊಂಡು ವಿವಿಧ ಬ್ಯಾಂಕುಗಳಲ್ಲಿ ಸಾಲ ಎತ್ತಿ ಮತ್ತೆ ವಾಪಾಸು ತಿರುಗಿಸದೆ ವಂಚಿಸುತ್ತಿದ್ದರು. ಬ್ಯಾಂಕುಗಳು ವಿಲೀನಗೊಂಡರೆ ಇಂತಹ ಭ್ರಷ್ಟ ನೀತಿಯನ್ನು ಕಡಿಮೆ ಮಾಡಬಹುದು ಎಂಬ ಭಾವನೆ ನೌಕರ ಸಂಘಟನೆಗಳಲ್ಲಿ, ಪ್ರಜ್ಞಾವಂತ ಜನರಲ್ಲಿ ಮನೆ ಮಾಡಿತ್ತು. ಆದ್ದರಿಂದ ರಾಷ್ಟ್ರೀಕೃತ ಬ್ಯಾಂಕುಗಳು ವಿಲೀನಗೊಂಡು ವಲಯವಾರು ಬ್ಯಾಂಕುಗಳಾಗಬೇಕು ಎಂಬ ಬೇಡಿಕೆ ಇತ್ತು.



ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಜಾಗತೀಕರಣ, ಉದಾರೀಕರಣ ನೀತಿಯ ಭಾಗವಾಗಿ ಆರ್ಥಿಕ ವಲಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಬ್ಯಾಂಕುಗಳನ್ನು ಖಾಸಗೀಕರಣಕ್ಕೆ ಒಳಪಡಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಜಾರಿಯಲ್ಲಿದೆ. ನರಸಿಂಹ ಸಮಿತಿಯ ಎರಡು ವರದಿಗಳು ಇದಕ್ಕೆ ಪೂರಕವಾಗಿದ್ದವು. ಇದಕ್ಕೆ ಅನುಕೂಲವಾಗಲೆಂದೇ ಸ್ವಯಂ ನಿವೃತ್ತಿಯೋಜನೆ, ಹೊಸ ನೇಮಕಕ್ಕೆ ತಡೆ ಇತ್ಯಾದಿಗಳ ಮೂಲಕ ನೌಕರರ ಸಂಖ್ಯೆಯನ್ನು ಕಡಿತಗೊಳಿಸಲಾಗಿತ್ತು. ನೌಕರರ ಬದಲಾಗಿ ಹೇರಳವಾಗಿ ಕಂಪ್ಯೂಟರ್‌ಗಳು ಬಂದವು. ಆದ್ಯತಾ ವಲಯಕ್ಕೆ ಸಾಲದ ನೀಡಿಕೆಯನ್ನು ಕಡಿತಗೊಳಿಸಿ, ಲಾಭದ ಉದ್ದೇಶಕ್ಕೆ ಹೆಚ್ಚು ಆದ್ಯತೆ ನೀಡಲಾಯಿತು. ಹಿಂದೆ ಯಾವ ಬ್ಯಾಂಕಿನಲ್ಲಿ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ನೀಡಲಾಯಿತು ಎಂದು ಬೆಳವಣಿಗೆಯ ಲೆಕ್ಕಹಾಕಿದರೆ, ಈಗ ಪ್ರತಿಯೊಬ್ಬ ನೌಕರರಿಗೆ 'ಬಿಸಿನೆಸ್' ಎಷ್ಟು ಜಾಸ್ತಿಯಾಗುತ್ತಿದೆ, ಎಷ್ಟು ಲಾಭ ಬರುತ್ತಿದೆ (business per employee, profit per employee) ಎಂದು ಲೆಕ್ಕ ಹಾಕಲಾಗುತ್ತಿದೆ. ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕ್ಷೇತ್ರಕ್ಕೆ ಎಷ್ಟು ಸಾಲ ನೀಡಲಾಗಿದೆ. ಎಷ್ಟೊಂದು ರೈತರು ಲಾಭ ಪಡೆದಿದ್ದರು ಎಂದು ಬೆಳವಣಿಗೆಯನ್ನು ಅಂದಾಜು ಮಾಡಿದರೆ, ಈಗ ಬ್ಯಾಂಕುಗಳ ಲಾಭ ಎಷ್ಟು, ಎಷ್ಟು ಡಿವಿಡೆಂಡ್ ನೀಡಲಾಗುತ್ತಿದೆ ಎಂದು ಲೆಕ್ಕ ಹಾಕಲಾಗುತ್ತಿದೆ. ಅಂದರೆ, ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸಮೂಹ ಬ್ಯಾಂಕ್‌ನಿಂದ ವರ್ಗ ಬ್ಯಾಂಕ್‌ನ ಡೆಗೆ ಕೊಂಡೊಯ್ಯಲಾಗುತ್ತಿದೆ. (from mass bank to class bank)

ಈ ಹಿನ್ನೆಲೆಯಲ್ಲಿ ಬ್ಯಾಂಕುಗಳ ವಿಲೀನವನ್ನು ವಿರೋಧಿಸುವುದು ಇಂದಿನ ಅವಶ್ಯಕತೆಯಾಗಿದೆ.

ಉದಾರೀಕರಣ ನೀತಿ ಜ್ಯಾರಿಗೆ ಬರುವ ಮೊದಲು ಬ್ಯಾಂಕಿಂಗ್ ವ್ಯವಹಾರದ ಶೇಕಡಾ 90ರಿಂದ 95ರಷ್ಟು ಭಾಗ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೇ ನಡೆಯುತ್ತಿತ್ತು. ಶೇಕಡಾ 100ರಷ್ಟು ಬಂಡವಾಳ ಭಾರತ ಸರಕಾರದ್ದೇ ಆಗಿದ್ದುದರಿಂದ ಬಂದ ಲಾಭವೆಲ್ಲ ಸರಕಾರದ ಪಾಲಾಗುತ್ತಿತ್ತು. ಆದ್ಯತಾ ವಲಯಗಳಿಗೆ, ಕೃಷಿ ವಲಯಕ್ಕೆ ಹೆಚ್ಚು ಸಾಲ ದೊರಕುತ್ತಿತ್ತು. ಲಾಭಕ್ಕಿಂತ ಸಮಾಜದ ಒಟ್ಟು ಬೆಳವಣಿಗೆಗೆ ಆದ್ಯತೆ ಸಿಕ್ಕಿತ್ತು. ಆದ್ದರಿಂದಲೇ 1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣವಾಗುವ ಮೊದಲು ಕೆಲವೇ ಕೆಲವು ಉದ್ದಿಮೆದಾರರ ಹಿಡಿತದಲ್ಲಿದ್ದ ಬ್ಯಾಂಕುಗಳು ಜನಸಾಮಾನ್ಯರಿಗೆ ತೆರೆಯಲ್ಪಟ್ಟಿತು.



ಈಗ ಸರಕಾರದ ನೀತಿಗಳು ಬದಲಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಗಿದ್ದ ಆದ್ಯತೆ ಕುಂಠಿತಗೊಳ್ಳುತ್ತಿದೆ. ಬ್ಯಾಂಕುಗಳ ಬಂಡವಾಳ ಹೆಚ್ಚಿಸುವ ನೆಪದಲ್ಲಿ ಶೇರುಗಳನ್ನು ಮಾರಾಟ ಮಾಡಲಾಗುತ್ತಿದ್ದು, ಅವು ಖಾಸಗೀ ವ್ಯಕ್ತಿಗಳ ಪಾಲಾಗುತ್ತಿವೆ. ಬ್ಯಾಂಕಿಂಗ್ ಉದ್ಯಮದ ಒಟ್ಟು ಬೆಳವಣಿಗೆಯಲ್ಲಿ ವಿದೇಶಿ ಬ್ಯಾಂಕುಗಳು ಮತ್ತು ದೇಶೀಯ ಖಾಸಗಿ ಬ್ಯಾಂಕುಗಳ ಪಾಲುಗಳು ಹೆಚ್ಚುತ್ತಿವೆ.

ಈ ಕೆಳಗಿನ ಅಂಕಿ ಅಂಶಗಳಿಂದ ಬ್ಯಾಂಕಿಂಗ್ ಉದ್ದಿಮೆಯಲ್ಲಿ ವಿದೇಶಿ ಬ್ಯಾಂಕುಗಳ ಪಾಲು ಶೇಕಡವಾರು ಎಷ್ಟು ಹೆಚ್ಚಾಗುತ್ತಿದೆ ಎಂದು ತಿಳಿಯುತ್ತದೆ.

ಇನ್ನೊಂದೆಡೆಯಲ್ಲಿ ಬ್ಯಾಂಕುಗಳ ಪಾಲು ಬಂಡವಾಳದಲ್ಲಿ ವಿದೇಶಿ ಹಣಕಾಸು ಬಂಡವಾಳವು ಹೆಚ್ಚುಹೆಚ್ಚಾಗಿ ಹರಿದುಬರುತ್ತಿದೆ. ಹೆಚ್ಚು ಕಡಿಮೆ ಎಲ್ಲಾ ದೇಶೀಯ ಖಾಸಗಿ ಬ್ಯಾಂಕುಗಳ ಶೇರುಗಳಲ್ಲಿ ಶೇಕಡಾ 75ರಷ್ಟು ವಿದೇಶಿ ಬಂಡವಾಳದ ಪಾಲು ಇದೆ ಎಂದು ಅಂದಾಜಿಸಲಾಗಿದೆ. ಸದ್ಯಕ್ಕೆ ಇದು ಶೇರು ಮಾರುಕಟ್ಟೆಗಳ ಮೂಲಕ ವಿದೇಶಿ ಬಂಡವಾಳದ ಕೈಯಲ್ಲಿದ್ದು, ಅದನ್ನು ಕಾನೂನುಬದ್ಧಗೊಳಿಸಲು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರಲಾಗುತ್ತಿದೆ. ಶೇಕಡಾ 10ರಷ್ಟು ಮಾತ್ರ ಮತದಾನಕ್ಕೆ ಇದ್ದ ಮಿತಿಯನ್ನು ಸಹ ತೆಗೆದು ಹಾಕಲಾಗುತ್ತಿದೆ. ಅಂದರೆ ಖಾಸಗಿ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳಿಗೆ, ವ್ಯಕ್ತಿಗಳಿಗೆ ಹಸ್ತಾಂತರಿಸಲು ಈಗಾಗಲೇ ತಯಾರಿ ನಡೆದಿದೆ. ಖಾಸಗಿ ಕ್ಷೇತ್ರದ ವೈಶ್ಯಬ್ಯಾಂಕ್, ಐಎನ್‌ಜಿ ವೈಶ್ಯ ಬ್ಯಾಂಕ್ ಆಗಿದೆ. ವಿದೇಶಿ ಬ್ಯಾಂಕುಗಳಿಗೆ ಅನುಕೂಲವಾಗುವಂತೆ ಕಾರ್ಪೊರೇಟ್ ತೆರಿಗೆಯನ್ನು ಶೇಕಡಾ 48ರಿಂದ 40ಕ್ಕೆ ಇಳಿಸಲಾಗಿದೆ.

ವರ್ಷ	ಸಾಲ ನೀಡಿಕೆ	ಬಂಡವಾಳ ಹೂಡಿಕೆ	ಆಸ್ತಿಯ ಮೊತ್ತ	ಆದಾಯ
1980-81	3.1	3.3	3.9	4.3
2000-01	8.2	10.1	7.9	9.1

ಕಳೆದ ನಾಲ್ಕು ವರ್ಷಗಳಲ್ಲಿ ವಿದೇಶಿ ಬ್ಯಾಂಕುಗಳ ವಹಿವಾಟು ಇನ್ನಷ್ಟು ಜಾಸ್ತಿಯಾಗಿದೆ.

ಇಂತಹ ಸನ್ನಿವೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳೇ ಆಗಲೀ ಅಥವಾ ಖಾಸಗೀ ಬ್ಯಾಂಕುಗಳೇ ಆಗಲಿ ವಿಲೀನಗೊಂಡರೆ, ಅದರ ಪೂರ್ಣ ಪ್ರಯೋಜನವನ್ನು ವಿದೇಶಿ ಬಂಡವಾಳ ಪಡೆಯುತ್ತದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಪ್ರಭಾವ ಹೊಂದಿರುವ ವಿದೇಶಿ ಬಂಡವಾಳ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸರಕಾರಗಳ ಮೇಲೆ ಪ್ರಭಾವ ಬೀರಿ ಅಲ್ಲಿನ ಕಾನೂನುಗಳನ್ನು ಶಿಥಿಲಗೊಳಿಸಿ ತನಗೆ ಅನುಕೂಲವಾಗುವಂತೆ ಮಾಡುತ್ತದೆ. ಅದರ ಭಾಗವಾಗಿಯೇ ಹಿಂದಿನ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರವಾಗಲೀ, ಇಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವಾಗಲೀ ಬ್ಯಾಂಕ್‌ಗಳ ವಿಲೀನ ಮತ್ತು ಅರ್ಜನೆಯ ಒತ್ತಡಕ್ಕೆ ಒಳಗಾಗಿವೆ.

ವಿದೇಶಿ ಬ್ಯಾಂಕ್‌ಗಳೊಂದಿಗೆ ಸ್ಪರ್ಧೆ :

ಯುಪಿಎ ಸರಕಾರದ ಹಣಕಾಸು ಸಚಿವ ಚಿದಂಬರಂ ಹೇಳುವ ಪ್ರಕಾರ 'ಭಾರತದ ಬ್ಯಾಂಕುಗಳು ವಿಲೀನಗೊಂಡರೆ ದೈತ್ಯಕಾರವಾಗಿ ಬೆಳೆದಿರುವ ವಿದೇಶಿ ಬ್ಯಾಂಕುಗಳಿಗೆ ಸ್ಪರ್ಧೆ ನೀಡುವುದು ಸಾಧ್ಯ'. ಆದರೆ ಇದು ಪ್ರಾಯೋಗಿಕವಾದುದಲ್ಲ. ಜಗತ್ತಿನ ಅತ್ಯಂತ ದೊಡ್ಡ ಬ್ಯಾಂಕ್ ಎಂದು ಪರಿಗಣಿಸಲಾದ ಸಿಟಿ ಬ್ಯಾಂಕ್‌ನ ಒಟ್ಟು ಆಸ್ತಿ 2000ರಲ್ಲಿ, 111,826 ಮಿಲಿಯ ಡಾಲರು (11,182.6 ಕೋಟಿ ಡಾಲರು =5,59,130 ಕೋಟಿ ರೂ) (1 ಡಾಲರು = ರೂ. 50) ನಮ್ಮ ದೇಶದಲ್ಲಿರುವ ಎಲ್ಲಾ ಬ್ಯಾಂಕುಗಳನ್ನು ಸೇರಿಸಿ ಒಂದೇ ಬ್ಯಾಂಕ್ ಆಗಿ ಪರಿಗಣಿಸಿದರೂ, ನಮ್ಮ ದೇಶದ ಬ್ಯಾಂಕುಗಳ ಒಟ್ಟು ಆಸ್ತಿ, ಸಿಟಿ ಬ್ಯಾಂಕಿನ ಆಸ್ತಿಯ ಶೇಕಡಾ 10ರಷ್ಟು ಆಗುವುದೂ ಕಷ್ಟ.

ಆದ್ಯತಾ ವಲಯಕ್ಕೆ ಮತ್ತು ಕೃಷಿ ... ಮತ್ತು ಖಾಸಗಿ ...		
	ಸಾರ್ವಜನಿಕ ಕ್ಷೇತ್ರದ ಬಾ...	
	ನಿಗದಿಗಿಂತ ಜಾಸ್ತಿ ಸಾಲ ನೀಡಿಕೆ	ಕ...
ಆದ್ಯತಾವಲಯ	10897ಕೋಟಿ ರೂ (25 ಬ್ಯಾಂಕುಗಳು)	706 ಕ... (2 ಬ...
ಕೃಷಿ ಕ್ಷೇತ್ರದ ಸಾಲ	100 ಕೋಟಿ ರೂ (4 ಬ್ಯಾಂಕುಗಳು)	8061 ಕ... (23 ಬ...

2000ರಲ್ಲಿ ನಮ್ಮ ದೇಶದ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟು ಲಾಭ 5116 ಕೋಟಿ ರೂ. ಆದರೆ ಒಂದೇ ಒಂದು ಸಿಟಿ ಬ್ಯಾಂಕ್‌ನ ಲಾಭ 1351 ಕೋಟಿ ಡಾಲರು = 67,550 ಕೋಟಿ ರೂ. ನಮ್ಮ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ವಿಲೀನಗೊಂಡರೂ ಅಂತಹ ದೈತ್ಯ ಬ್ಯಾಂಕ್‌ನೊಂದಿಗೆ ಸ್ಪರ್ಧೆ ಮಾಡುವುದು ಸಾಧ್ಯವೇ?

ಕೇಂದ್ರ ಸರ್ಕಾರವು, ನಮ್ಮ ದೇಶದ ಬ್ಯಾಂಕುಗಳನ್ನು ವಿಲೀನಗೊಳಿಸಿ, ಬಂಡವಾಳವನ್ನು ಹೆಚ್ಚಿಸುವ ನೆಪದಲ್ಲಿ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದ್ದೇ ಆದಲ್ಲಿ ಹಲವು ವರ್ಷಗಳಿಂದ ಕಟ್ಟಿ ಬೆಳೆಸಿದ ಆಸ್ತಿ. ವಿದೇಶಿಯರ ಪಾಲಾಗುವುದರಲ್ಲಿ ಸಂದೇಹವಿಲ್ಲ.

ಗ್ರಾಮೀಣ ಆರ್ಥಿಕತೆಗೆ ವಂಚನೆ

ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಯ ಹೆಸರಿನಲ್ಲಿ ಗ್ರಾಮೀಣ ಜನತೆಗೆ ವಂಚಿಸುತ್ತಾ ಬಂದಿರುವುದು ಎಲ್ಲರಿಗೂ ತಿಳಿದ ವಿಚಾರ. ರೈತರ ಆತ್ಮಹತ್ಯೆಗಳಿಗೆ ಒಂದು ಪ್ರಮುಖ ಕಾರಣ. ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿಗೆ ಕೊಡುತ್ತಿದ್ದ ಸಾಲದಲ್ಲಿ ತೀವ್ರವಾದ ಕಡಿತ ಉಂಟಾಗಿರುವುದು ಎಂಬುದು ಈಗಾಗಲೇ ಸಾಬೀತುಪಟ್ಟಿದೆ. ಅಂದರೆ ರೈತರು

ಲೇವಾದೇವಿಗಾರರಿಂದ ಜಾಸ್ತಿ ಬಡ್ಡಿಯಲ್ಲಿ ಹಣ ತರುವುದು ಹಾಗೂ ವಾಪಾಸು ಮಾಡಲೂ ಸಾಧ್ಯವಾಗದೇ ಹೋದಾಗ ಗೂಂಡಾಗಳಿಂದ ಬೆದರಿಕೆ ಇತ್ಯಾದಿಗಳಿಂದಾಗಿ ಬೇಸತ್ತ ರೈತರು ಆತ್ಮಹತ್ಯೆಗೆ ಮೊರೆಹೋಗುತ್ತಾರೆ.



ಮುಂಬೈನ ರಿಸರ್ವ್ ಬ್ಯಾಂಕ್‌ನ ನಿರ್ದೇಶಕರಲ್ಲೊಬ್ಬರಾದ ಡಾ.ಸಿ.ಎಲ್.ದ್ಯಾಡಿಚ್ ಅವರು 2002 ರಲ್ಲಿ ನಡೆದ ಬ್ಯಾಂಕುಗಳ ಆರ್ಥಿಕ ತಜ್ಞರ ಸಭೆಯಲ್ಲಿ ಮಂಡಿಸಿದ ಪ್ರಬಂಧದಲ್ಲಿ 'ದುರ್ಬಲವರ್ಗದ ಜನತೆಗೆ ನೀಡುತ್ತಿರುವ ಸಾಲಗಳಲ್ಲಿ ತೀವ್ರ ಕಡಿತ ಉಂಟಾಗಿದೆ' ಎಂಬುದನ್ನು ತಿಳಿಸಿದ್ದಾರೆ. ಆದ್ಯತಾ ವಲಯಕ್ಕೆ ನೀಡುತ್ತಿರುವ ಶೇ.40ರಷ್ಟು ಸಾಲಗಳ ಪೈಕಿ ಕೃಷಿಕ್ಷೇತ್ರಕ್ಕೆ ಶೇ.18ರಷ್ಟು ಸಾಲ ನೀಡಬೇಕೆಂದಿದೆ. (ಶೇ.13.5 ನೇರ ಕೃಷಿ ಸಾಲ ಮತ್ತು ಶೇ.4.5ರಷ್ಟು ಪರೋಕ್ಷ ಕೃಷಿ ಸಾಲ) ಶೇ.10ರಷ್ಟು ಬ್ಯಾಂಕ್ ಸಾಲವನ್ನು ದುರ್ಬಲ ವರ್ಗದವರಿಗೆ ನೀಡಿದ. ಆದರೆ 2001ರಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ದುರ್ಬಲವರ್ಗದವರಿಗೆ ನೀಡಬೇಕಾದ ಸಾಲ ಶೇ.9.7 ರಿಂದ ಶೇ.7.2ಕ್ಕೆ ಕುಸಿದಿದೆ. ಖಾಸಗೀ ಬ್ಯಾಂಕುಗಳಲ್ಲಿ ಇದು ಶೇ.5.2ರಿಂದ ಶೇ.1.7ಕ್ಕೆ ಕುಸಿದಿದೆ.

ಕೃಷಿಕ್ಷೇತ್ರಕ್ಕೆ ಮೀಸಲಿಡಲಾದ ಸಾಲದಲ್ಲಿ 23 ರಾಷ್ಟ್ರೀಕೃತ ಬ್ಯಾಂಕುಗಳು 8061 ಕೋಟಿ ರೂ.ಕಡಿಮೆ ಸಾಲ ನೀಡಿರುತ್ತಾರೆ ಹಾಗೆಯೇ 30 ಖಾಸಗಿ ಬ್ಯಾಂಕುಗಳು 4773 ಕೋಟಿ ರೂ. ಕಡಿಮೆ ಸಾಲವನ್ನು ಕೃಷಿ ಕ್ಷೇತ್ರಕ್ಕೆ ನೀಡಿರುತ್ತಾರೆ. ಇದು 2001ರ ಅಂಕಿ ಅಂಶವಾಗಿದ್ದರೆ. ಈಗ ಇನ್ನೂ ಕೊರತೆಯಾಗಿರುತ್ತದೆ.

ಮೇಲಿನ ಅಂಕೆ ಸಂಖ್ಯೆಯಿಂದ ತಿಳಿದುಬರುವ ಇನ್ನೊಂದು ಗಮನಾರ್ಹವಾದ ಅಂಶವೆಂದರೆ ಖಾಸಗಿ ಬ್ಯಾಂಕುಗಳು ನೀಡುತ್ತಿರುವ ಸಾಲಗಳಲ್ಲಿ ಆದ್ಯತಾವಲಯ ಮತ್ತು ಕೃಷಿ ಕ್ಷೇತ್ರ ಎರಡೂ ವಿಭಾಗಕ್ಕೆ ನೀಡುತ್ತಿರುವ ಸಾಲದಲ್ಲಿ ತೀವ್ರ ಕೊರತೆ ಉಂಟಾಗಿದೆ.

...ೀಡಿದ ಸಾಲಗಳಲ್ಲಿ ರಾಷ್ಟ್ರೀಕೃತ ...ಗಳ ಪಾತ್ರ.

ಖಾಸಗೀ ಕ್ಷೇತ್ರದ ಬ್ಯಾಂಕುಗಳು	
ನಿಗದಿಗಿಂತ ಜಾಸ್ತಿ ಸಾಲ ನೀಡಿಕೆ	ನಿಗದಿಗಿಂತ ಕಡಿಮೆ ಸಾಲ ನೀಡಿಕೆ
1520 ಕೋಟಿ ರೂ (19 ಬ್ಯಾಂಕುಗಳು)	2564 ಕೋಟಿ ರೂ (12 ಬ್ಯಾಂಕುಗಳು)
8 ಕೋಟಿ ರೂ (1 ಬ್ಯಾಂಕು)	4773 ಕೋಟಿ ರೂ. (30 ಬ್ಯಾಂಕು)

ವಿದೇಶಿ ಬ್ಯಾಂಕುಗಳು ದೊಡ್ಡ ಸಂಖ್ಯೆಯಲ್ಲಿ ನುಸುಳುವ ಮೊದಲೇ ಈ ಪರಿಸ್ಥಿತಿಯಾದರೆ, ವಿದೇಶಿ ಬ್ಯಾಂಕುಗಳೊಂದಿಗೆ ಸ್ಪರ್ಧೆ ಮಾಡುವ ನೆಪದಲ್ಲಿ ಭಾರತದ ಬ್ಯಾಂಕುಗಳ ಪರಿಸ್ಥಿತಿ ಏನಾಗಬಹುದು? ಲಾಭ ಮಾಡುವ ಉದ್ದೇಶದಿಂದ ಆದ್ಯತಾ ವಲಯ ಮತ್ತು ಕೃಷಿ ಕ್ಷೇತ್ರಕ್ಕೆ ನೀಡುವ ಸಾಲದಲ್ಲಿ ಇನ್ನಷ್ಟು ಕಡಿತವಾಗುತ್ತದೆ.

ರಿಸರ್ವ್ ಬ್ಯಾಂಕ್ ನಿರ್ದೇಶಕ ಡಾ. ದ್ಯಾಡಿಚ್‌ರವರು ಮುಂದುವರಿಯುತ್ತಾ, 'ಗ್ರಾಮೀಣ ಬ್ಯಾಂಕುಗಳ ಶಾಖೆ ಜಾಸ್ತಿ ಆದಲ್ಲಿ ಕೃಷಿಕ್ಷೇತ್ರಕ್ಕೆ ಮತ್ತು ದುರ್ಬಲವರ್ಗಗಳಿಗೆ ನೀಡುತ್ತಿರುವ ಸಾಲದ ಪ್ರಮಾಣ ಹೆಚ್ಚುತ್ತದೆ. ಅಲ್ಲದೇ ಕೃಷಿಕ್ಷೇತ್ರಕ್ಕೆ ನೀಡುವ ನೇರ ಸಾಲಗಳಲ್ಲಿ ಕೆಟ್ಟ ಸಾಲಗಳ (ಎನ್.ಪಿ.ಎ) ಪ್ರಮಾಣ ಕಡಿಮೆ ಇರುತ್ತದೆ ಎಂದು ತಿಳಿಸಿದ್ದಾರೆ.

ಆದರೆ ನಿಜವಾಗಿಯೂ ಆಗುತ್ತಿರುವುದೇನೆಂದರೆ 1999 ರ ಜೂನ್ ಮತ್ತು 2002 ರ ಡಿಸೆಂಬರ್ ನಡುವೆ 535 ಗ್ರಾಮೀಣ ಬ್ಯಾಂಕುಗಳ ಶಾಖೆಗಳು ಮುಚ್ಚಿವೆ.


ಬ್ಯಾಂಕುಗಳ ವಿಲೀನ ಎಂದರೆ ಗ್ರಾಮೀಣ ಪ್ರದೇಶಗಳ ಬ್ಯಾಂಕು ಶಾಖೆಗಳ ಮುಚ್ಚುವಿಕೆ ಹಾಗೂ ಕೃಷಿ ಕ್ಷೇತ್ರದ ಸಾಲದಲ್ಲಿ ತೀವ್ರ ಕಡಿತ. ಇದರಿಂದ ಈಗಾಗಲೇ ತತ್ತರಿಸುವ ಕೃಷಿ ಕ್ಷೇತ್ರಕ್ಕೆ ಇನ್ನಷ್ಟು ಹೊಡೆತ.

ಒಂದು ಅಂದಾಜಿನ ಪ್ರಕಾರ, ರಾಷ್ಟ್ರೀಕರಣವಾದ ನಂತರ ಜನಸಾಮಾನ್ಯರು ಬ್ಯಾಂಕಿನ ಮೆಟ್ಟಿಲು ಹತ್ತುವಷ್ಟು ಶಕ್ತರಾಗಿದ್ದರೂ, ಇನ್ನೂ 50 ಕೋಟಿ ಜನರಿಗೆ ಬ್ಯಾಂಕು ಅಂದರೆ ಏನೆಂಬುದೇ ಗೊತ್ತಿಲ್ಲ. ಮುಂದುವರಿದ ದೇಶಗಳಲ್ಲಿ ಅಲ್ಲಿನ ಕೈಗಾರಿಕಾ ಬೆಳವಣಿಗೆಗಳು ಬ್ಯಾಂಕಿನ ಬೆಳವಣಿಗೆಗೂ, ಬ್ಯಾಂಕಿನ ಅಭಿವೃದ್ಧಿಯು ಕೈಗಾರಿಕಾ ಬೆಳವಣಿಗೆಗೂ ಪೂರಕವಾಗಿ, ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಆದ್ದರಿಂದ ನಮ್ಮ ದೇಶದಲ್ಲಿ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಇನ್ನಷ್ಟು ಬ್ಯಾಂಕ್ ಶಾಖೆಗಳು ಹೆಚ್ಚುವುದು ಅಗತ್ಯ.

ಗ್ರಾಮೀಣ ಬ್ಯಾಂಕುಗಳ ವಿಲೀನಕ್ಕೆ ಅಡ್ಡಿ :

ರಾಷ್ಟ್ರೀಕೃತ ಬ್ಯಾಂಕುಗಳನ್ನು ವಿಲೀನಗೊಳಿಸಬೇಕು ಎಂದು ಹೇಳುವ ಸರಕಾರ, ಗ್ರಾಮೀಣ ಬ್ಯಾಂಕುಗಳನ್ನು ವಿಲೀನಗೊಳಿಸಲು ಒಪ್ಪುತ್ತಿಲ್ಲ. ದೇಶದಲ್ಲಿ ಒಟ್ಟು 196 ಗ್ರಾಮೀಣ ಬ್ಯಾಂಕುಗಳಿದ್ದು, ಕರ್ನಾಟಕದಲ್ಲಿ ಪ್ರತಿ ಒಂದು ಜಿಲ್ಲೆ ಅಥವಾ ಎರಡು ಜಿಲ್ಲೆಗಳಿಗೆ ಒಂದರಂತೆ 13 ಗ್ರಾಮೀಣ ಬ್ಯಾಂಕುಗಳು ಇವೆ. ಇವುಗಳ ಆಡಳಿತದಲ್ಲಿ ಪ್ರಗತಿ, ವ್ಯವಹಾರಗಳ ಅಭಿವೃದ್ಧಿ, ಅವುಗಳ ಮೂಲಕ ಲಾಭದಾಯಕ ಚಟುವಟಿಕೆಗಳನ್ನು ಮಾಡಬೇಕೆಂದಾದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ನ್ಯಾಷನಲ್ ರೂರಲ್ ಬ್ಯಾಂಕ್ ಆಫ್ ಇಂಡಿಯಾ (ಎನ್.ಆರ್.ಬಿ.ಐ) ಸ್ಥಾಪಿಸಬೇಕೆಂದು ನೌಕರ ಸಂಘಟನೆಗಳು ಒತ್ತಾಯಿಸುತ್ತಿವೆ. ಆದರೆ ಇದರ ಬಗ್ಗೆ ಸರಕಾರ ಗಮನ ನೀಡುತ್ತಿಲ್ಲ.

ಗ್ರಾಮೀಣ ಬ್ಯಾಂಕುಗಳ ವಿಲೀನ ಬೇಡವೆಂದು ಹೇಳಿ ರಾಷ್ಟ್ರೀಕೃತ ಬ್ಯಾಂಕುಗಳ ವಿಲೀನ ಆಗಬೇಕೆಂದು ಹೇಳುವ ಯುಪಿಎ ಸರಕಾರದ ನೀತಿ ವಿದೇಶಿ ಹಣಕಾಸು ಬಂಡವಾಳದ ಒತ್ತಡಕ್ಕೆ ಒಳಗಾಗಿದೆ. ಇದನ್ನು ವಿರೋಧಿಸುವುದು ಎಲ್ಲಾ ದೇಶಪ್ರೇಮಿ ನಾಗರೀಕರ ಕರ್ತವ್ಯ. ಬ್ಯಾಂಕ್ ನೌಕರರ ಈ ಹೋರಾಟಕ್ಕೆ ಎಲ್ಲರೂ ಬೆಂಬಲಿಸಬೇಕು. □



'ಪೀಪಲ್ಸ್ ಡೆಮಾಕ್ರಸಿ'ಗೆ 40 ವರ್ಷ

ದುಡಿಯುವ ಜನತೆಯ ಧ್ವನಿಯಾಗಿ, ಶೋಷಣೆಗೊಳಗಾದವರ ದಾರಿದೀಪವಾಗಿ ತುಳಿತಕ್ಕೊಳಪಟ್ಟವರ ನೇತಾರನಾಗಿ ತನ್ನನ್ನು ತಾನು ಸಮರ್ಪಿಸಿಕೊಂಡಿರುವ ಪೀಪಲ್ಸ್ ಡೆಮೊಕ್ರಸಿ(ಪಿಡಿ)ಗೆ 40 ವರ್ಷ ತುಂಬಿದೆ. ತನ್ನ 40 ನೇ ವರ್ಷಾಚರಣೆಗಾಗಿ ಈ ಸಂಚಿಕೆಯನ್ನು ಸಮರ್ಪಣೆ ಮಾಡುತ್ತಿದೆ.

1965ರ ಜೂನ್ 27ರಂದು ಪಿಡಿಯ ಪ್ರಥಮ ಸಂಚಿಕೆ ಬಿಡುಗಡೆಯಾಯಿತು. ಅಂದಿನಿಂದಲೂ ಪ್ರತಿ ಭಾನುವಾರ ನಿರಂತರವಾಗಿ ಪ್ರಕಟವಾಗುತ್ತಿದೆ.

ಈ ಎಲ್ಲಾ ವರ್ಷಗಳು ಸುಸಂದರ್ಭಗಳಾಗಿರಲಿಲ್ಲ. ಹಲವಾರು ಸವಾಲುಗಳನ್ನು ಪಿಡಿ ಎದುರಿಸಿದೆ ಮತ್ತು ಎದುರಿಸುತ್ತದೆ. ಪಕ್ಷದ ಮುಖವಾಣಿಯು ಕೇವಲ ಸಮೂಹ ಪ್ರಚಾರ ಮಾಧ್ಯಮ ಮಾತ್ರವಾಗಿರದೆ ಅದೊಂದು ಸಾಮಾಜಿಕ ಸಂಘಟಕನಂತೆ, ಪ್ರತಿಭಟನಾಕಾರನಂತೆ ಎಂದು ಕಾಂ.ಲೆನಿನ್ ಅರ್ಥೈಸಿರುವಂತೆ ಎಲ್ಲಾ ಸನ್ನಿವೇಶ ಸಂದರ್ಭಗಳಲ್ಲಿ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದ)ದ ಕಾರ್ಯಕ್ರಮ, ಸಿದ್ಧಾಂತಗಳಿಗಾಗಿ ಧ್ವನಿ ಎತ್ತಿದೆ.

ವರ್ಗ ಸಹಕಾರ ತತ್ವದ ವಿರುದ್ಧ ಅಥವಾ ಪರಿಷ್ಕರಣವಾದಿಗಳ ವಿರುದ್ಧದ ಕಠಿಣ ಹೋರಾಟಗಳ ಮೂಲಕ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉದಯಿಸಿತು. ಕಮ್ಯೂನಿಸ್ಟ್ ಪಕ್ಷವು ಔಪಚಾರಿಕವಾಗಿ ವಿಭಜನೆಗೊಂಡು ಸಿಪಿಎಂ ಪಕ್ಷವನ್ನು ಸ್ಥಾಪಿಸಿದ ಕೆಲವೇ ತಿಂಗಳುಗಳಲ್ಲಿ ಭಾರತದ ಆಳುವ ವರ್ಗಗಳು ಚೀನಾ-ಭಾರತ ಯುದ್ಧದ ನೆಪವನ್ನು ಬಳಸಿಕೊಂಡು ಪಕ್ಷದ ಮುಖಂಡರ ಮೇಲೆ ಆಕ್ರಮಣಕಾರಿ ದಾಳಿಗಳನ್ನು ಆರಂಭಿಸಿದರು. ಹಲವಾರು ನಾಯಕರನ್ನು ಬಂಧಿಸಿದರು ಪಕ್ಷದ ಕಛೇರಿಗಳಿಗೆ ಬೀಗಮುದ್ರೆ ಹಾಕಿ, ಕಾರ್ಯ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಲಾಯಿತು. ಅಂದಿನ ಭಾರತ ಸರ್ಕಾರವು ಸಿಪಿಎಂ ಪಕ್ಷದ ನಿಲುವಿನ ವಿರುದ್ಧ 'ಭಾರತ ವಿರೋಧಿ' ಎಂಬ ಖ್ಯಾತ ಶಿರ್ಷಿಕೆ ಅಡಿಯಲ್ಲಿ 'ಶ್ವೇತ ಪತ್ರ'ವನ್ನು ಬಿಡುಗಡೆ ಮಾಡಿತು.



ಇಂತಹ ಸಂದರ್ಭದಲ್ಲಿ ಸಿಪಿಎಂ ಪಕ್ಷವನ್ನು ಸ್ಥಾಪಿಸಲು ಹೊರಟ ನಾಯಕರು ಎಂತಹ ನಿರ್ಣಯವನ್ನು ಕೈಗೊಂಡರು ಎಂಬುದು ಪ್ರಶ್ನೆಯಾಗಿದೆ. ಚೀನಾ ಮತ್ತು ಭಾರತದ ನಡುವಿನ ವಿವಾದಗಳನ್ನು ದ್ವಿಪಕ್ಷೀಯ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು. ಸಂಘರ್ಷ ಅಥವಾ ಯುದ್ಧವು ಸಮಸ್ಯೆಗಳ ನಿವಾರಣೆಗೆ ಪರಿಹಾರವಲ್ಲ ಎನ್ನುವುದು ನಮ್ಮ ಪಕ್ಷದ ನಾಯಕರ ನಿಲುವಾಗಿತ್ತು. ಅಂದಿನ ನಿಲುವು ನಲವತ್ತು ವರ್ಷಗಳ ನಂತರವೂ ಸಮರ್ಥನೀಯ ಮತ್ತು ತೀರ ಅನಿವಾರ್ಯವಾಗಿದೆ. ಈ ಸನ್ನಿವೇಶವು ಇತಿಹಾಸದ ವಿಪರ್ಯಾಸವಾಗಿದೆ. ಅಂದು ಯಾವ ವರ್ಗಗಳು ಸಿಪಿಎಂ ನಾಯಕರ ವಿರುದ್ಧ ಆಕ್ರಮಣಕಾರಿ ಧಾಳಿಗಳನ್ನು ನಡೆಸಿದ್ದಾರೋ ಅವರೇ ಇಂದು ಇದೇ ನಿಲುವನ್ನು ಸಲಹೆ ಮಾಡುತ್ತಿದ್ದಾರೆ. ಈ ಮಾರ್ಗವಲ್ಲದೆ ಪರ್ಯಾಯವಿಲ್ಲ ಎನ್ನುತ್ತಿದ್ದಾರೆ.

ಪೀಪಲ್ಸ್ ಡೆಮೊಕ್ರಸಿಯು ಈ ವಿವಾದಗಳ ಬಗ್ಗೆ ನಿರಂತರವಾಗಿ ಕಮ್ಯೂನಿಸ್ಟ್ ಪಕ್ಷದ ನಿಲುವನ್ನು ಪ್ರಕಟಿಸಿದೆ. ಪರಿಷ್ಕರಣವಾದಿಗಳ ವಿರುದ್ಧದ ಕಠಿಣ ಸಂಘರ್ಷದ ನಂತರ ಅದಕ್ಕಿಂತಲೂ ತೀವ್ರವಾದ ಎಡ ಸಾಹಸವಾದಿಗಳ ವಿಭಜನೆಯ ವಿರುದ್ಧದ ಹೋರಾಟ ಆರಂಭವಾಯಿತು. ಸಿಪಿಎಂ ಪಕ್ಷದ ಒಂದು ವಿಭಾಗವಾದ ಆಂಧ್ರ ಪ್ರದೇಶದಂತಹ ರಾಜ್ಯಗಳಲ್ಲಿನ ವಿಭಾಗಗಳು ತಕ್ಷಣದ ಗುರಿಯಾಗಿ ಪೀಪಲ್ಸ್ ವಾರ್‌ನ್ನು ಆರಂಭಿಸುವ ಯೋಜನೆಯನ್ನು ಮುಂದಿಟ್ಟರು. ಮಾವೋ ತ್ಸೆ ತುಂಗ್ ಅವರ 'ಎ ಸಿಂಗಲ್ ಸ್ಪಾರ್ಕ್ ಕ್ಯಾನ್ ಸೆಟ್ ದಿ ಪ್ರೈರೀ ಅಫೈರ್' (ಒಂದು ಕಿಡಿಯು ಇಡೀ ಹುಲ್ಲುಗಾವಲನ್ನೇ ಸುಡಬಲ್ಲದು) ಶೀರ್ಷಿಕೆಯ ಕರಪತ್ರದಿಂದ ಪ್ರೇರೇಪಣೆಗೊಂಡ ಈ ವರ್ಗದ ಕೆಲವರು ಶೀಘ್ರ ಸಶಸ್ತ್ರ ಹೋರಾಟ, ವರ್ಗಶತ್ರುವಿನ ಸರ್ವನಾಶ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಪೂರ್ಣ ನಿರಾಕರಣೆಗೆ ಕರೆ ನೀಡಿದರು.

ಪಥಭ್ರಷ್ಟಗೊಂಡ ಈ ವಿಭಾಗಗಳೊಂದಿಗಿನ ಹೋರಾಟವು ಅತ್ಯಂತ ಕಠಿಯಾದುದಾಗಿತ್ತು. ಅಂತರಾಷ್ಟ್ರೀಯವಾಗಿ ಖ್ಯಾತರಾಗಿದ್ದ ಹಿರಿಯ ಕಮ್ಯೂನಿಸ್ಟ್ ಪಕ್ಷಗಳು ಇದಕ್ಕೆ ಬೆಂಬಲ ನೀಡಿದ್ದರಿಂದ ಹೋರಾಟವು ಇನ್ನೂ ದುಸ್ತರವಾಯಿತು. ಸಿಪಿಎಂ ಪಕ್ಷವು ಅಂತರಾಷ್ಟ್ರೀಯ ಕಮ್ಯೂನಿಷ್ಟ್ ಚಳುವಳಿಯಿಂದ ಎರಡು ದಶಕಗಳವರೆಗೆ ಪ್ರತ್ಯೇಕವಾಗಿ ಉಳಿಯುವಂತಾಯಿತು.

ಒಂದು ವರ್ಗವು ನಮ್ಮನ್ನು 'ಪರಿಷ್ಕರಣವಾದಿ'ಗಳೆಂದೂ ಮತ್ತೊಂದು ವರ್ಗವು 'ಪಥಭ್ರಷ್ಟ' ರೆಂದೂ ಕರೆದರು.

ಸಿಪಿಎಂ ಪಕ್ಷದ ಸೈದ್ಧಾಂತಿಕ ಸರಿದಾರಿಯ ಬಗ್ಗೆ ಸಮರ್ಪಕವಾದ ಉದಾಹರಣೆಗಳೊಂದಿಗೆ ಮತ್ತು ಹಲವಾರು ಚರ್ಚೆಗಳೊಂದಿಗೆ ಇಲ್ಲಿ ವಿವರಿಸಲಾಗಿದೆ.

ಜಗತ್ತಿನ ಬಹುತೇಕ ಭಾಗಗಳಲ್ಲಿ ಪ್ರಧಾನವಾದ ಹಲವಾರು ಕಮ್ಯೂನಿಸ್ಟ್ ಪಕ್ಷಗಳು ಈ ತತ್ವಭ್ರಷ್ಟ ಸಿದ್ಧಾಂತದ ವಿರುದ್ಧ ಸರಿಯಾದ ನಿಲುವನ್ನು ತಾಳದೆ ಕುಸಿದಿರುವಂತಹ ಸನ್ನಿವೇಶದಲ್ಲಿ ಇದು ಅತ್ಯಂತ ಪ್ರಮುಖವಾಗಿದೆ. ಇಂಡೋನೇಷಿಯಾ, ಸೂಡಾನ್, ಇರಾಕ್, ಇರಾನ್, ಈಜಿಪ್ಟ್ ರಾಷ್ಟ್ರಗಳು ಭಾರತಕ್ಕಿಂತಲೂ ಬಲಿಷ್ಟವಾದ ಕಮ್ಯೂನಿಷ್ಟ್ ಚಳುವಳಿಗಳನ್ನು ಹೊಂದಿದ್ದವು. ಆದರೆ ಈ ಪಥಭ್ರಷ್ಟತೆಯ ವಿನಾಶದ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ನಡೆಸುವಲ್ಲಿನ ವಿಫಲತೆಯಿಂದಾಗಿ ಅಲ್ಲಿನ ಚಳುವಳಿಗಳು ಛಿದ್ರಗೊಂಡವು.

ಭಾರತದಲ್ಲಿನ 'ಪರಿಸ್ಥಿತಿಗಳನ್ನು ಸರಿಯಾಗಿ ವಿಶ್ಲೇಷಿಸಿ ಮಾರ್ಕ್ಸ್‌ವಾದ ಲೆನಿನ್ ವಾದ ವೈಜ್ಞಾನಿಕ ಸಿದ್ಧಾಂತವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಸಿಪಿಎಂ ಪಕ್ಷದ ಹೆಗಲ ಮೇಲೆ ಬಿತ್ತು. ಇದರಿಂದಾಗಿ ಪಕ್ಷವು ಸೈದ್ಧಾಂತಿಕತೆಯ ಆಧಾರದ ಮೇಲೆ, ತಪ್ಪು ತಿಳುವಳಿಕೆಯ ವಿರುದ್ಧ ಕಾರ್ಯಕ್ರಮಗಳನ್ನು ರೂಪಿಸಿದ್ದು ಪಕ್ಷದ ಇಂದಿನ ಸ್ಥಿತಿಗೆ ಪ್ರಮುಖ ಕಾರಣವಾಗಿದೆ.

ಸಿಪಿಎಂ ಪಕ್ಷದ ಇಂದಿನ ದೃಢ ಸ್ಥಿತಿ, ಜವಾಬ್ದಾರಿ ಭಾರತದ ರಾಜಕಾರಣದಲ್ಲಿನ ನಿರ್ಣಾಯಕ ಘಟ್ಟದಲ್ಲಿರುವ ಇಂದಿನ ಸ್ಥಿತಿ ಸಾಧನೆಯು ಹಲವಾರು ತ್ಯಾಗಮಯಿ ಹೋರಾಟಗಳ ಫಲಿತವಾಗಿದೆ. ವರ್ಗಶತ್ರುಗಳ ವಿರುದ್ಧದ ಹೋರಾಟದಲ್ಲಿ ಸಾವಿರಾರು ಸಂಗಾತಿಗಳು ಬಲಿಯಾಗಿದ್ದಾರೆ. ಬಲ ಮತ್ತು ಎಡಪಂಥಿಯ ತತ್ವಭ್ರಷ್ಟರ ವಿರುದ್ಧದ ಹೋರಾಟದಲ್ಲಿ ತಮ್ಮ ಪ್ರಾಣಗಳನ್ನು ತೆತ್ತಿದ್ದಾರೆ.

.... ಪುಟ 10ಕ್ಕೆ

ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಮೆಟಲ್ ಕ್ಲೋಸರ್ಸ್ ಕಾರ್ಖಾನೆ ಕಾರ್ಮಿಕರ ಹೋರಾಟ ಕಳೆದ ಒಂದೂವರೆ ವರ್ಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ಬಗ್ಗೆ ಹಲವು ಬಾರಿ ವರದಿಗಳು ಐಕ್ಯರಂಗದಲ್ಲಿ ಈಗಾಗಲೇ ಪ್ರಕಟವಾಗಿವೆ. ಕೇವಲ ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ ದೊರೆಯದ ಕಾರಣ ಸಂಘಟಿತರಾಗಿ ಸಿಐಟಿಯು ಸಂಘ ಸೇರಿದ್ದೇ ಮಾಲಿಕರ ದೃಷ್ಟಿಯಲ್ಲಿ ಒಂದು ದೊಡ್ಡ ಅಪರಾಧವಾಗಿದೆ. ಕನಿಷ್ಟ ವೇತನ ಕೇಳಿ ಹೋರಾಟ ನಡೆಸಿದ ಕಾರಣಕ್ಕಾಗಿ ಒಟ್ಟು 150 ಕ್ಕೂ ಹೆಚ್ಚು


ಕೇವಲ ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ ದೊರೆಯದ ಕಾರಣ ಸಂಘಟಿತರಾಗಿ ಸಿಐಟಿಯು ಸಂಘ ಸೇರಿದ್ದೇ ಮಾಲಿಕರ ದೃಷ್ಟಿಯಲ್ಲಿ ಒಂದು ದೊಡ್ಡ ಅಪರಾಧವಾಗಿದೆ. ಕನಿಷ್ಟ ವೇತನ ಕೇಳಿ ಹೋರಾಟ ನಡೆಸಿದ ಕಾರಣಕ್ಕಾಗಿ ಒಟ್ಟು 150 ಕ್ಕೂ ಹೆಚ್ಚು ಕಾರ್ಮಿಕರ ಮೇಲೆ ಕೊಲೆ ಪ್ರಯತ್ನ ಸೇರಿದಂತೆ 40 ಕ್ಕೂ ಹೆಚ್ಚು ಪೋಲೀಸ್ ಕೇಸ್‌ಗಳು ದಾಖಲಾಗಿವೆ. ಮೂವರು ಕಾರ್ಮಿಕರು ನಾಲ್ಕು ತಿಂಗಳ ಕಾಲ ಜಾಮೀನು ದೊರೆಯದೆ ಜೈಲುವಾಸ ಅನುಭವಿಸಬೇಕಾಗಿ ಬಂದಿತು.



ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಮುಗಿಯದ ಬವಣೆ – ಮುಂದುವರೆದ ಹೋರಾಟ

ಕಾರ್ಮಿಕರ ಮೇಲೆ ಕೊಲೆ ಪ್ರಯತ್ನ ಸೇರಿದಂತೆ 40 ಕ್ಕೂ ಹೆಚ್ಚು ಪೋಲೀಸ್ ಕೇಸ್‌ಗಳು ದಾಖಲಾಗಿವೆ. ಮೂವರು ಕಾರ್ಮಿಕರು ನಾಲ್ಕು ತಿಂಗಳ ಕಾಲ ಜಾಮೀನು ದೊರೆಯದೆ ಜೈಲುವಾಸ ಅನುಭವಿಸಬೇಕಾಗಿ ಬಂದಿತು. ಸರ್ಕಾರವೇ ನಿಗದಿ ಪಡಿಸಿದ ಕನಿಷ್ಟ ವೇತನ ಜಾರಿ ಮಾಡಬೇಕೆಂದು ಒತ್ತಾಯಿಸಿ ಹೋರಾಟ ನಡೆಸಿದ ಕಾರ್ಮಿಕರಿಗೆ ಸರ್ಕಾರವೇ ನೀಡಿದ ಬಹುಮಾನವಿದು.

ಕನಿಷ್ಟ ವೇತನ ಕೇಳಿ ಹಾಗೂ ಕೆಲಸದ ವೇಳೆ ಯಂತ್ರಗಳಿಗೆ ಸುರಕ್ಷಾ ಕ್ರಮಗಳನ್ನು ಅಳವಡಿಸಬೇಕೆಂದು ಒತ್ತಾಯಿಸಿ ಸಿಐಟಿಯು ಸಂಘ ರಚಿಸಿಕೊಂಡ ಕಾರಣಕ್ಕಾಗಿ ಮಾಲೀಕರು 2004 ರಲ್ಲಿ ಎರಡು ತಿಂಗಳ ಕಾಲ ಕಾರ್ಖಾನೆಗೆ ಬೀಗಮುದ್ರೆ ಹಾಕಿದ್ದರು. ಕಾರ್ಮಿಕರ ನಿರಂತರ ಹೋರಾಟದಿಂದ ಸರ್ಕಾರ ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಿ ವಿಧಾನಸೌಧದಲ್ಲಿ ಕಾರ್ಮಿಕ ಸಚಿವರ ಸಮ್ಮುಖದಲ್ಲಿ ಒಪ್ಪಂದವೊಂದು ಏರ್ಪಟ್ಟು 200 ಮಂದಿ ಕಾರ್ಮಿಕರು ಬೆಂಗಳೂರಿನ ಕಾರ್ಖಾನೆಯಲ್ಲಿಯೇ ಪುನಃ ಕೆಲಸಕ್ಕೆ ಹೋಗುವಂತಾಯಿತು ಹಾಗೂ 170 ಮಂದಿ ಕಾರ್ಮಿಕರನ್ನು ತಾತ್ಕಾಲಿಕವಾಗಿ ಕುಣಿಗಲ್‌ಗೆ ವರ್ಗಾವಣೆ ಮಾಡಲಾಯಿತು ಹಾಗೂ 53 ಮಂದಿ ತಾತ್ಕಾಲಿಕ ಕೆಲಸಗಾರರಿಗೆ ಬದಲಿ ಕೆಲಸ ನೀಡುವಂತೆ ಒಪ್ಪಂದವಾಯಿತು. ಆದರೆ ಮಾಲೀಕರು ಕನಿಷ್ಟವೇತನವನ್ನು ಮಾತ್ರ



ಜಾರಿ ಮಾಡಿರುವುದಿಲ್ಲ ಹಾಗೂ 53 ಮಂದಿ ಕೆಲಸಗಾರರಿಗೆ ಬದಲಿ ಕೆಲಸ ಸಹಾ ನೀಡಿರುವುದಿಲ್ಲ. ಕನಿಷ್ಟ ವೇತನ ಜಾರಿಮಾಡಬೇಕೆಂದು ಹಾಗೂ 53 ಮಂದಿ ಕೆಲಸಗಾರರಿಗೆ ಬದಲಿ ಕೆಲಸ ನೀಡಬೇಕೆಂದು ಒತ್ತಾಯಿಸಿ ಕಾರ್ಖಾನೆ ಮುಂದೆ ಕಾರ್ಮಿಕರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಗ ಕಾರ್ಮಿಕರ ಮೇಲೆ ಮಾಲೀಕರು ಮಾರಣಾಂತಿಕ ಹಲ್ಲೆ ಸಹ ನಡೆಸಿದರು. ಆದರೆ ಈ ಹಲ್ಲೆ ನಡೆಸಿದವರನ್ನು ಈವರೆಗೂ ಪೊಲೀಸರು ಬಂಧಿಸಿರುವುದಿಲ್ಲ. ಬದಲಾಗಿ ಕಾರ್ಮಿಕರ ಮೇಲೆಯೇ ದೂರು ದಾಖಲಿಸಿರುವುದು ಕಾನೂನಿನ ಅವಹೇಳನವಾಗಿದೆ.

ಈ ನಡುವೆ ಒಪ್ಪಂದದಂತೆ ಕುಣಿಗಲ್‌ಗೆ ಕೆಲಸಕ್ಕೆ ಹೋಗುತ್ತಿದ್ದ ಕಾರ್ಮಿಕರಮೇಲೆ ಕುಣಿಗಲ್‌ನಲ್ಲೂ ಸಹ ಹಲ್ಲೆ ನಡೆಸಲಾಗಿತ್ತು. ಕನಿಷ್ಟ ವೇತನ ಜಾರಿಯಾಗಬೇಕು ಹಾಗೂ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದವರನ್ನು ಬಂಧಿಸಬೇಕೆಂದು ಒತ್ತಾಯಿಸಿ ಕಾರ್ಖಾನೆ ಮುಂದೆ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಹಾಗೂ ಸಿಐಟಿಯು ಬೆಂಗಳೂರು ಜಿಲ್ಲಾಧ್ಯಕ್ಷರಾದ ಕಾಂ. ಇ.ಕೆ.ಎನ್.ರಾಜನ್ ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದರು ಹಾಗೂ ಬೆಂಗಳೂರಿನ ಸಿಐಟಿಯು ಸಂಘಟನೆಗೆ ಸೇರಿದ ಇಡೀ ಕಾರ್ಮಿಕ ವರ್ಗ ಮುಖ್ಯಮಂತ್ರಿಗಳ ನಿವಾಸಕ್ಕೆ ಬೃಹತ್ ಮೆರವಣಿಗೆ ನಡೆಸಿತು. ಸರ್ಕಾರ ಪುನಃ ಕಾರ್ಮಿಕರ ಹೋರಾಟಕ್ಕೆ ಮಣಿದು ವಿಧಾನಸೌಧದಲ್ಲಿ ಕಾರ್ಮಿಕ ಸಚಿವರ ಹಾಗೂ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಹಲವಾರು ಸಂಧಾನ ಸಭೆಗಳನ್ನು ನಡೆಸಿತು. ಕುಣಿಗಲ್‌ಗೆ ಕೆಲಸಕ್ಕೆ ಹೋಗುತ್ತಿದ್ದ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ ನಂತರ ಈ ಕಾರ್ಮಿಕರಿಗೆ ಕೆಲಸ ಸಹಾ ನಿರಾಕರಿಸಲಾಯಿತು. ಈ ಕಾರ್ಮಿಕರು ಡಿಸೆಂಬರ್ 2004 ರಲ್ಲಿ ಹಗಲು-ರಾತ್ರಿ ನಿರಂತರವಾಗಿ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಸತ್ಯಾಗ್ರಹ ನಡೆಸಿದ ಕಾರಣ ಸರ್ಕಾರ ಮಾಲೀಕರನ್ನು ಪೊಲೀಸರ ಮೂಲಕ ಸಂಧಾನಕ್ಕೆ ಕರೆಸಿ ಪುನಃ ಎಲ್ಲಾ ಕಾರ್ಮಿಕರಿಗೆ ಇದೇ ಆಡಳಿತ ವರ್ಗದವರ ಪೀಣ್ಯಾ ಘಟಕದಲ್ಲಿ ಕೆಲಸ ನೀಡಬೇಕೆಂದು ಒಪ್ಪಂದವಾಗಿತ್ತು.

ಈ ಒಪ್ಪಂದದ ಪ್ರಕಾರ 170 ಮಂದಿ ಕಾರ್ಮಿಕರು 2005 ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ಪೀಣ್ಯಾ ಘಟಕ್ಕೆ ಕೆಲಸಕ್ಕೆ ಹೋಗಿರುತ್ತಾರೆ. ಆದರೆ ಮಾಲೀಕರು ಒಪ್ಪಂದದ ಪ್ರಕಾರ ಮೆಟಲ್‌ಕ್ಲೋಸರ್ಸ್ ಸಂಸ್ಥೆಯಲ್ಲಿ ಕೆಲಸದ ನೀಡದೆ ಬೇರೆ ಸಂಸ್ಥೆಯಲ್ಲಿ ಕೆಲಸ ಮಾಡಲು ಒತ್ತಾಯಿಸಿರುತ್ತಾರೆ. ಇದಕ್ಕೆ ಕಾರ್ಮಿಕರು ಒಪ್ಪದ ಕಾರಣ 170 ಮಂದಿ ಕಾರ್ಮಿಕರಿಗೆ ಎರಡು ತಿಂಗಳ ದುಡಿದ ವೇತನವನ್ನು ಈವರೆಗೂ ಆಡಳಿತ ವರ್ಗದವರು ನೀಡಿರುವುದಿಲ್ಲ. ಅಲ್ಲದೆ ಮಾಲೀಕರು ಮುಂಬೈ ಹಾಗೂ ಮಂಗಳೂರು ಕಡೆ ರೌಡಿಗಳನ್ನು ಕರೆಸಿ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸಂಘದ ಸದಸ್ಯರಾಗಿರುವ ಕಾರ್ಮಿಕರ ಮೇಲೆ ಹಲ್ಲೆ ನಡೆಸಿ ಸಂಘಕ್ಕೆ ರಾಜೀನಾಮೆ ನೀಡುವಂತೆ ಒತ್ತಾಯ ಮಾಡಿರುತ್ತಾರೆ. ಸಂಘದ ಮುಖಂಡರಾದ ಇ.ಕೆ.ಎನ್.ರಾಜನ್ ಅವರಿಗೆ ದೂರವಾಣಿ ಮೂಲಕ ಸತತವಾಗಿ ಕೊಲೆ ಬೆದರಿಕೆ ಹಾಕಲಾಗುತ್ತಿದೆ. ಈ ಹಲ್ಲೆ ಹಾಗೂ ಕೊಲೆ ಬೆದರಿಕೆ ಬಗ್ಗೆ ಪೊಲೀಸರಿಗೆ ದೂರು ನೀಡಿದಾಗ ಹಲ್ಲೆ ನಡೆಸಿದವರನ್ನು ಬಂಧಿಸಲು ಪೊಲೀಸರು ನಿರಾಕರಿಸಿರುವ ಬಗ್ಗೆ ದಿನಾಂಕ 16.5.2005 ರಂದು ಕಾರ್ಮಿಕರು ಬೆಂಗಳೂರಿನ ಪೊಲೀಸ್ ಕಮಿಷನರ್ ಕಚೇರಿ ಮುಂದೆ ಧರಣಿ ನಡೆಸಿದರು. ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಪ್ರಕಾಶ್, ಕಾಂ. ಇ.ಕೆ.ಎನ್.ರಾಜನ್ ಇವರನ್ನೊಳಗೊಂಡ ನಿಯೋಗ ಪೊಲೀಸ್ ಕಮಿಷನರ್‌ರನ್ನು ಭೇಟಿ ಮಾಡಿ ಮನವಿ ಅರ್ಪಿಸಿತು. ನಂತರವೇ ಪೊಲೀಸರು ಕಾರ್ಮಿರ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ದೂರು ದಾಖಲಿಸಿಕೊಂಡಿರುತ್ತಾರೆ.

ಕೇವಲ ಕನಿಷ್ಟ ವೇತನ ಕೇಳಿ ಹೋರಾಟ ನಡೆಸಿದ ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಮೇಲೆ ಪೊಲೀಸರು ದಾಖಲಿಸಿರುವ ಸುಳ್ಳು ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಪೊಲೀಸರ ಪಕ್ಷಪಾತ ನೀತಿ ಬಗ್ಗೆ ತನಿಖೆಯಾಗಬೇಕೆಂದು ಹಾಗೂ ಈವರೆಗೂ ಕಳೆದ ಒಂದೂವರೆ ವರ್ಷದಿಂದ ಕೆಲಸ ನಿರಾಕರಿಸಲ್ಪಟ್ಟ ಒಟ್ಟು 340 ಕಾರ್ಮಿಕರಿಗೆ ಪುನಃ ಕೆಲಸನೀಡಬೇಕೆಂದು ಒತ್ತಾಯಿಸಿ ಕಾರ್ಮಿಕರು ದಿನಾಂಕ 16.6.2005 ರಿಂದ ಬನ್ನಪ್ಪ ಪಾರ್ಕ್‌ನಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸಿರುತ್ತಾರೆ. ಈ ಕಾರ್ಯಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿರುತ್ತಾರೆ. ಸರದಿ ಉಪವಾಸ ಸತ್ಯಾಗ್ರಹ ಐದನೇ ದಿನಕ್ಕೆ ಕಾಲಿಟ್ಟಾಗ ಕಾರ್ಮಿಕ ಸಚಿವರು ಉಪವಾಸ ನಡೆಯುವ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರ ಸಮ್ಮುಖದಲ್ಲಿ ಕೂಡಲೇ ಈ ಬಗ್ಗೆ ವಿಧಾನಸೌಧದಲ್ಲಿ ಸಭೆ ಕರೆಯುವುದಾಗಿ ತಿಳಿಸಿ ಸರ್ಕಾರ ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಸಮಸ್ಯೆಬಗ್ಗೆ ಪರಿಹಾರಕ್ಕೆ ಪುನಃ ಪ್ರಯತ್ನ ನಡೆಸುವುದಾಗಿ ಹೇಳಿದ ನಂತರ ಈ ಸರದಿ ಉಪವಾಸ ಸತ್ಯಾಗ್ರಹಕೊನೆಗೊಂಡಿತು. ಮರುದಿನವೇ ವಿಧಾನಸೌಧದಲ್ಲಿ ಕಾರ್ಮಿಕ ಸಚಿವರು ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರ ಸಮ್ಮುಖದಲ್ಲಿ ಸಮಸ್ಯೆ ಪರಿಹಾರಕ್ಕೆ ಸಭೆ ಕರೆದಿದ್ದರು. ಈ ಸಭೆಗೆರಾಜ್ಯ ಕಾರ್ಮಿಕ ಆಯುಕ್ತರು ಹಾಗೂ ಅಪರ ಕಾರ್ಮಿಕ ಆಯುಕ್ತರು ಹಾಜರಿದ್ದರು. ಈ ಸಭೆಯಲ್ಲಿ ಕೂಡಲೇ ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಅಗತ್ಯವಿರುವ ತುರ್ತು ಹಾಗೂ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದು ಕಾರ್ಮಿಕ ಸಚಿವರು ಕಾರ್ಮಿಕ ಆಯುಕ್ತರಿಗೆ ಸೂಚನೆ ನೀಡಿರುತ್ತಾರೆ. ಸರ್ಕಾರದ ಮುಂದೆ ನಡೆದ ಒಪ್ಪಂದದ ಉಲ್ಲಂಘನೆಗಾಗಿ ಮೆಟಲ್ ಕ್ಲೋಸರ್ಸ್ ಮಾಲೀಕನ ವಿರುದ್ಧ ಕ್ರಿಮಿನಲ್ ದಾವಾ ಹೂಡಲು ಸರ್ಕಾರ ಈಗಲೆ ಸಂಘಕ್ಕೆ ಅನುಮತಿ ನೀಡಿದ್ದು ಈ ಬಗ್ಗೆ ಈಗಾಗಲೇ ಕ್ರಿಮಿನಲ್ ನ್ಯಾಯಾಲಯದಲ್ಲಿ ಮಾಲೀಕನ ವಿರುದ್ಧ ಮೊಕದ್ದಮೆ ದಾಖಲಾಗಿದೆ. ಇದರ ವಿರುದ್ಧ ಮಾಲಿಕ ಹೈಕೋರ್ಟ್‌ನಿಂದ ತಡೆಯಾಜ್ಞೆ ತರಲು ನಡೆಸಿದ ಪ್ರಯತ್ನ ಸಹಾ ವಿಫಲವಾಗಿದೆ. ಅಲ್ಲದೆ ಕೆಲಸ ನಿರಾಕರಿಸಿದ ಕಾರ್ಮಿಕರಿಗೆ ಕೈಗಾರಿಕಾ ವಿವಾದ ಕಾಯಿದೆಯ ಕಲಂ 10 ಬಿ ಪ್ರಕಾರ ಮಧ್ಯಂತರ ಪರಿಹಾರ ದೊರೆಕಿಸಲು ಕಾರ್ಮಿಕ ಆಯುಕ್ತರು ಕಾನೂನು ಕ್ರಮ ಆರಂಭಿಸಿರುತ್ತಾರೆ.

ಕಳೆದ ಒಂದೂವರೆ ವರ್ಷದಿಂದ ನಡೆಯುತ್ತಿರುವ ಈ ಹೋರಾಟದಲ್ಲಿ ಮೆಟಲ್ ಕ್ಲೋಸರ್ಸ್ ಕಾರ್ಮಿಕರು ಸರ್ಕಾರದ ಮೇಲೆ ಒತ್ತಡ ತರುವ ಹೋರಾಟ ನಡೆಸಿರುವುದರಿಂದ ಮಾತ್ರವೇ ಕಾರ್ಮಿಕರಿಗೆ ಫಲ ದೊರೆತಿರುವುದು ಸಾಬೀತಾಗಿದೆ ಹಾಗೂ ಈಗಲೂ ಮೆಟಲ್ ಕ್ಲೋಸರ್ಸ್ ಕಾರ್ಮಿಕರು ಇದೇ ಪ್ರಯತ್ನದಲ್ಲಿದ್ದಾರೆ.

ವರದಿ : **ಮೆಲ್ಕಿಯೋರ್ ಆರ್.ಡಿ**

ಸಾವು ಮತ್ತು ಜನರ ಬದುಕಿನ ಸಮಸ್ಯೆಗಳು

ಮೆಣಸಿನಹಾಡ್ಯದಲ್ಲಿ ಬುಡಕಟ್ಟು ಜನಾಂಗಕ್ಕೆ ಸೇರಿದ ಕಾಂಗ್ರೆಸ್ ಕಾರ್ಯಕರ್ತ ಶೇಷಪ್ಪಗೌಡನನ್ನು ಮಾವೋವಾದಿ ನಕ್ಸಲೀಯರು ಹತ್ಯೆ ಮಾಡಿದ ಬೆನ್ನಲ್ಲೇ ಪಶ್ಚಿಮಘಟ್ಟಕ್ಕೆ ವಿಶೇಷ ಕಾರ್ಯಾಚರಣೆ ಪಡೆಯನ್ನು (ಎಸ್.ಟಿ.ಎಫ್) ಸರ್ಕಾರ ಕಳಿಸಿತು. ಈ ಪಡೆ ಕಾರ್ಯಾಚರಣೆಗೆ ಇಳಿದಿದೆ.

ಈ ಕಾರ್ಯಾಚರಣೆಯಲ್ಲಿ ಉಡುಪಿ ಜಿಲ್ಲೆಯ ಶಂಕರನಾರಾಯಣ ಬಳಿ ಜೂನ್ 23ರಂದು ಇಬ್ಬರು ಶಸ್ತ್ರಧಾರಿ ನಕ್ಸಲೀಯ ಯುವಕರನ್ನು ಪೊಲೀಸರು ಕೊಂದಿದ್ದಾರೆ. ಒಬ್ಬ ಎಸ್.ಕೆ.ಉಮೇಶ್(24) ಮೂಡಿಗೆರೆ ತಾಲೂಕಿನವ, ಇನ್ನೊಬ್ಬ ಬೆಳಗಾವಿಯ ಅಜಿತ್‌ಕುಸುಬಿ (26) ಎಂದು ಖಾತ್ರಿಯಾಗಿದೆ.


ಇದಕ್ಕೆ ತಕ್ಕದಾಗಿ ಉತ್ತರಿಸುವುದಾಗಿ ಮಾವೋವಾದಿ ರಾಜ್ಯಸಮಿತಿ ಹೇಳಿದೆ. ಅಂದರೆ ಪ್ರತೀಕಾರ ಪರಸ್ಪರ ಘರ್ಷಣೆ ಸಾವು ರಕ್ತಪಾತ.

ಸರ್ಕಾರ ಮಾತುಕತೆಗೆ ಬನ್ನಿ ಎಂದಿದೆ. ಬರಬೇಕಾದವರು ಬರುತ್ತಾರೆಯೇ? ಅದರಲ್ಲಿ ಅವರಿಗೆ ವಿಶ್ವಾಸವಿದೆಯೇ?

ಈ ನಡುವೆ ಅಲ್ಲಿನ ಜನ ನಮಗೆ ಸಾಕುಸಾಕಾಗಿದೆ. ಒಂದೆಡೆ ಪೋಲೀಸರು ಇನ್ನೊಂದೆಡೆ ನಕ್ಸಲೀಯರು ಇಬ್ಬರ ಕಾಟ ಸಾಕು. ನಮ್ಮನ್ನು ನಮ್ಮಪಾಡಿಗೆ ಬಿಡಿ ಎಂದು ಹೇಳುತ್ತಿದ್ದಾರೆ. ಇದು ಟಿ.ವಿಗಳಲ್ಲಿ ಬಿತ್ತರಗೊಂಡಿತು.

ಅಂದರೆ ಈ 'ಕ್ರಾಂತಿ' ಯಾರಿಗಾಗಿ? ಸಾಯುವುದನ್ನು ವೈಭವೀಕರಿಸುತ್ತಲೇ ಇನ್ನಷ್ಟು ಸಾವುಗಳಿಗೆ ಸಿದ್ಧಗೊಳ್ಳುವುದೇ? ಜನತೆಯ ಚಳುವಳಿಯಿಂದ ವಿಮುಖಗೊಳಿಸುವುದೇ? ಈಗಲಾದರೂ ನಕ್ಸಲೀಯರು ದುಸ್ಸಾಹಸದ ಹಾದಿ ತೊರೆದು ಶಸ್ತ್ರ ತ್ಯಜಿಸಿ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗೆ ಮರಳಬೇಕು.

ಸರ್ಕಾರ ನಕ್ಸಲೀಯ ಸಮಸ್ಯೆ ಎದುರಿಸಲು ಬಿಗಿ ನಿಲುವು ತಳೆಯಬೇಕು. ಜನರ ಪ್ರಶ್ನೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಮುಂದಾಗಬೇಕು.



ಉಡುಪಿಯ ಶಂಕರನಾರಾಯಣದಲ್ಲಿ ಇಬ್ಬರು ನಕ್ಸಲೀಯರು ಪಡೆಗಳ ಕಾರ್ಯಾಚರಣೆಯಲ್ಲಿ ಸಾವನ್ನಪ್ಪಿದ್ದಾರೆ. ಇದಕ್ಕೆ ಪ್ರತೀಕಾರದ ಉತ್ತರ ನೀಡುವುದಾಗಿ ಮಾವೋವಾದಿ ನಕ್ಸಲೀಯರು ಘೋಷಿಸಿದ್ದಾರೆ. ಆದರೆ ಜನ ಏನೆನ್ನುತ್ತಾರೆ? ಎಲ್ಲದಕ್ಕಿಂತ ನಮಗೆ ಬದುಕು ಮುಖ್ಯ ಎಂಬುದರಲ್ಲಿ ತಪ್ಪೇನಿದೆ? ಚಳುವಳಿಯಿಂದ ಜನರನ್ನು ವಿಮುಖಗೊಳಿಸುವುದು ಕ್ರಾಂತಿಕಾರಿ ಪ್ರಕ್ರಿಯೆಯೇ?

ಸಿಪಿಐ(ಎಂ) ಮತ್ತು ಎಡಪಕ್ಷಗಳ ತೀವ್ರವಾದ ವಿರೋಧವನ್ನು ಲೆಕ್ಕಿಸದೆ ಕೇಂದ್ರ ಯುಪಿಎ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಏರಿಸಿದೆ. ಅಂತರ ರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಏರಿಕೆ ಆಗಿರುವುದರಿಂದ ಈ ಏರಿಕೆ ಅನಿವಾರ್ಯ ಎಂದು ಸರ್ಕಾರ ವಾದಿಸುತ್ತಿದೆ. ಬೆಲೆ ಏರಿಕೆಗೆ ಬದಲಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸೂಚಿಸಿದ ಬದಲಿ ಕ್ರಮಗಳನ್ನು ತಿರಸ್ಕರಿಸಿರುವ ಕೇಂದ್ರ ಯುಪಿಎ ಸರ್ಕಾರವು ಈ ಭಾರಿ ಪೆಟ್ರೋಲ್-ಡೀಸೆಲ್ ದರ ಏರಿಕೆಯಿಂದ ಜನಸಾಮಾನ್ಯರ ಮೇಲೆ ದೊಡ್ಡ ಗದಾ ಪ್ರಹಾರವನ್ನೇ ನಡೆಸಿದೆ. ಈ ಏರಿಕೆ ಅನಿವಾರ್ಯವೆ?

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಅನಿವಾರ್ಯವೇ?

ಇಲ್ಲ. ಖಂಡಿತಾ ಇಲ್ಲ. ಪೆಟ್ರೋಲ್ ಡೀಸೆಲ್ ಬೆಲೆ ಏರಿಸುವುದು ಎಂದರೆ ಜನಸಾಮಾನ್ಯರಿಗೆ ಹೊರೆ ಮಾತ್ರವಲ್ಲ, ಎಲ್ಲಾ ವಸ್ತುಗಳ ಸಾಗಾಣಿಕೆ ವೆಚ್ಚವನ್ನು ಹೆಚ್ಚಿಸುವುದು ಎಂದರ್ಥ. ಇದರಿಂದಾಗಿ ಎಲ್ಲ ಅಗತ್ಯ ವಸ್ತುಗಳ ಬೆಲೆಯೂ ಗಗನಕ್ಕೇರಿ ಹಣದುಬ್ಬರ ಅಧಿಕವಾಗುತ್ತದೆ. ಆದರೆ ಸಂಬಳ - ವೇತನ - ಕೂಲಿ - ಆದಾಯ ಇದಕ್ಕೆ ತಕ್ಕಂತೆ ಏರದೇ ಕಾರ್ಮಿಕ - ನೌಕರರು - ರೈತರು - ಕೂಲಿಕಾರರು ತೊಂದರೆಗೆ ಒಳಗಾಗುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆ ಏರಿದರೂ ಸರ್ಕಾರ ಬೆಲೆ ಏರಿಕೆಯನ್ನು ತಡೆಗಟ್ಟಲು ಅವಕಾಶವಿದೆ.

ಪೆಟ್ರೋಲ್‌ನ ವಾಸ್ತವಿಕ ಬೆಲೆ ಒಂದು ಲೀಟರ್‌ಗೆ 19.00 ರೂ. ಮಾತ್ರ. ಡೀಸೆಲ್‌ನ ವಾಸ್ತವಿಕ ಬೆಲೆ ಲೀಟರ್‌ಗೆ 18.53 ರೂ. ಮಾತ್ರ. ಉಳಿದದ್ದೆಲ್ಲಾ ತೆರಿಗೆ.

ಸಿಪಿಐ(ಎಂ) ಎಡಪಕ್ಷಗಳು ಸೂಚಿಸಿದ ಬದಲು ನೀತಿ ಏನು ಹೇಳುತ್ತದೆ?

ಖಾಸಗಿ ಕಂಪನಿಗಳನ್ನು ಕೊಬ್ಬಿಸುವ ತೆರಿಗೆ ನೀತಿ ಬದಲಿಸಿ

ಈ ಹಿಂದೆ ಹಣಕಾಸು ಮಂತ್ರಿ ಚಿದಂಬರಂರವರು ಜನಸಾಮಾನ್ಯರಿಗೆ ಹೊರೆಯಾಗದಂತಹ ರೀತಿಯಲ್ಲಿ ತೆರಿಗೆ ನೀತಿಯಲ್ಲಿ ಬದಲಾವಣೆ ಮಾಡಿ 'ಟ್ಯಾಕ್ಸ್ ನ್ಯೂಟ್ರಲ್' ನೀತಿ ಅನುಸರಿಸಲಾಗುವುದು ಎಂಬ ಭರವಸೆ ನೀಡಿದ್ದರು.

ಆದರೆ ತಾವೇ ನೀಡಿದ ಭರವಸೆಗೆ ವಿರುದ್ಧವಾಗಿ ಬಜೆಟ್‌ನಲ್ಲಿ ಮತ್ತೆ ಪ್ರತಿ ಲೀಟರ್ ಪೆಟ್ರೋಲ್-ಡೀಸೆಲ್‌ಗೆ 50 ಪೈಸೆಯ 'ಹೆದ್ದಾರಿ ಸೆಸ್' ವಿಧಿಸಿದರು ಮಾತ್ರವಲ್ಲ, ಸರ್ಕಾರದ ತೆರಿಗೆ



ನೀತಿಯನ್ನು ತೈಲಕ್ಷೇತ್ರದ ಖಾಸಗಿ ಕಂಪನಿಗಳ ಲಾಭದ ಲೂಟಿಗೆ ಪೂರಕವಾಗಿ ತಿರುಚಿದರು. ಕಚ್ಚಾ ತೈಲವನ್ನು ಆಮದು ಮಾಡಿಕೊಂಡು ಸಂಸ್ಕರಿಸುವ ರಿಲೈಯನ್ಸ್‌ನಂತಹ ಖಾಸಗಿ ಕಂಪನಿಗಳ ಲಾಭದ ಕೊಳ್ಳೆಗೆ ಪೂರಕವಾಗಿ ಸರ್ಕಾರ ಆಮದು ಸುಂಕವನ್ನು ಕಡಿತಗೊಳಿಸಿತು.

ಆದರೆ ಸಾರ್ವಜನಿಕರ - ಸಮಾಜದ ಹಿತಾಸಕ್ತಿಯನ್ನು ಗಮನದಲ್ಲಿಟ್ಟಿಕೊಂಡು ತೈಲ ವಿತರಣೆಯ ಹೊಣೆ ನಿರ್ವಹಿಸುತ್ತಿರುವ ಸಾರ್ವಜನಿಕ ತೈಲ ಸಂಸ್ಥೆಗಳ ಮೇಲೆ ವಿಪರೀತ ತೆರಿಗೆಯನ್ನು ಹೇರಲಾಯಿತು.

ಖಾಸಗಿ ಕಂಪನಿಗಳ ಲಾಭದ ಕೊಳ್ಳೆಗೆ ತಡೆಹಾಕಿ

ಭಾರತ ಆಮದು ಮಾಡಿಕೊಳ್ಳುವ ಒಟ್ಟು ಪೆಟ್ರೋಲಿಯಂನಲ್ಲಿ ಕಚ್ಚಾ ತೈಲದ ಪ್ರಮಾಣವೇ ಶೇ.90. ಸಂಸ್ಕರಿತ ಪೆಟ್ರೋಲಿಯಂ ಉತ್ಪನ್ನ ಶೇ.10 ಮಾತ್ರ. ಸಂಸ್ಕರಣ ರಂಗದಲ್ಲಿ ರಿಲೆಯನ್ಸ್‌ನಂತಹ ಖಾಸಗಿ ಕಂಪನಿಗಳದ್ದೇ ಕಾರುಬಾರು. ಅಂದರೆ ಕಚ್ಚಾತೈಲ ಆಮದಿಗೆ ತೆರಿಗೆ ಕಡಿತ ಮಾಡುವ ಸರಕಾರದ ನೀತಿಯಿಂದ ಖಾಸಗಿ ಕಂಪನಿಗಳಿಗೆ ಲಾಭದ ಸುಗ್ಗಿ. ಸರ್ಕಾರದ ಹೊಸ ತೆರಿಗೆ ನೀತಿಯ ಪ್ರಯೋಜನ ಜನರಿಗೆ ಯಾವ ರೀತಿಯಲ್ಲೂ ತಲುಪಲಿಲ್ಲ. ಕಚ್ಚಾತೈಲ ಆಮದು ಸುಂಕವನ್ನು ದೊಡ್ಡ ಪ್ರಮಾಣದಲ್ಲಿ ಸರ್ಕಾರ ಕಡಿತಗೊಳಿಸಿದರೂ ಈ ಖಾಸಗಿ ಕಂಪನಿಗಳು ಸಂಸ್ಕರಣ ಶುಲ್ಕದಲ್ಲಿ ಮತ್ತೆ ದೊಡ್ಡ ಏರಿಕೆ ಮಾಡಿ 'ಸೂಪರ್' ಲಾಭವನ್ನು ಲೂಟಿ ಹೊಡೆಯುತ್ತಿವೆ. ಹಿಂದೆ ಬ್ಯಾರಲ್ ಒಂದಕ್ಕೆ 4ರಿಂದ 6 ಡಾಲರ್ ಸಂಸ್ಕರಣ ಶುಲ್ಕ ವಿಧಿಸುತ್ತಿದ್ದ ಈ ಖಾಸಗಿ ಕಂಪನಿಗಳು ಈಗ ತೆರಿಗೆ ಕಡಿತದ ನಂತರವೂ ಸಂಸ್ಕರಣ ಶುಲ್ಕ ಏರಿಸಿ ಪ್ರತಿ ಬ್ಯಾರಲ್‌ಗೆ ಈಗ 12 ಡಾಲರ್ ಶುಲ್ಕ ವಿಧಿಸುತ್ತಿದ್ದಾರೆ. ಹೇಗಿದೆ ಖಾಸಗಿ ಕುಳಗಳ ಲಾಭದ ಲೂಟಿ.

ತೈಲ ಬೆಲೆ ನಿಯಂತ್ರಣ ನಿಧಿ ಸ್ಥಾಪಿಸಿ

ಸರ್ಕಾರ ತೈಲದ ಮೇಲೆ ವಿಧಿಸಿರುವ ಸೆಸ್ (ಉಪಕರ) ಮೂಲಕ ಪ್ರತಿವರ್ಷ ಸುಮಾರು 5,400 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದೆ. ಅಂತರರಾಷ್ಟ್ರೀಯ ಕಚ್ಚಾತೈಲ ಮಾರುಕಟ್ಟೆಯಲ್ಲಿ ಆಗುವ ನಿರಂತರ ಬೆಲೆಗಳ ಏರಿಳಿತಗಳು ದೇಶದ ತೈಲ ಕ್ಷೇತ್ರದ ಮೇಲೆ ಹಾನಿಕಾರಕ ಪ್ರಭಾವ ಬೀರದಂತೆ ಈ ಹಣವನ್ನು ಬಳಸಿ 'ತೈಲಬೆಲೆ ನಿಯಂತ್ರಣ ನಿಧಿ' ಸ್ಥಾಪಿಸಬೇಕೆಂಬ ಎಡಪಕ್ಷಗಳ ಒತ್ತಾಯವನ್ನು ಸರ್ಕಾರ ಪರಿಗಣಿಸುತ್ತಿಲ್ಲ. ಇದರಿಂದಾಗಿ ತೀವ್ರ ಅನಿಶ್ಚಿತತೆಯಿಂದ ಕೂಡಿರುವ ಅಂತರ ರಾಷ್ಟ್ರೀಯ ತೈಲ ಮಾರುಕಟ್ಟೆಯಲ್ಲಿ ಬೆಲೆ ಏರುಪೇರು ಆದಾಗಲೆಲ್ಲಾ ದೇಶದ ತೈಲ ಕ್ಷೇತ್ರವೂ ಅಲುಗಾಡಿ ಬೆಲೆ ಏರಿಕೆಯ ಮೂಲಕ ಜನರ ಮೇಲೆ ನಿರಂತರವಾಗಿ ಹೊರೆ ಹೇರಲಾಗುತ್ತದೆ.

ಆದರೆ ಸೆಸ್ ಮೂಲಕ ಸಂಗ್ರಹವಾಗುವ ಅಪಾರ ಮೊತ್ತದ ಹಣವನ್ನು ಸರ್ಕಾರ ಭಾರಿ ಶ್ರೀಮಂತರಿಗೆ ರಿಯಾಯತಿ ವಿನಾಯತಿ ನೀಡುವ ತನ್ನ ಆರ್ಥಿಕ ನೀತಿಯ ಅಗತ್ಯಕ್ಕೆ ದುರ್ಬಳಕೆ ಮಾಡುತ್ತಿದೆ.

ನಿರಂತರವಾಗಿ ಕುಸಿಯುತ್ತಿರುವ ಸರ್ಕಾರದ ಸಹಾಯಧನ

ಅಡಿಗೆ ಅನಿಲ ಮತ್ತು ಸೀಮೆಎಣ್ಣೆಗೆ ವಿಪರೀತ ಸಹಾಯಧನ ನೀಡುತ್ತಿರುವುದಾಗಿ ಸರ್ಕಾರ ಬೊಬ್ಬಿಡುತ್ತಿದೆ. ಕಡುಬಡವರು ಬಳಸುವ ಸೀಮೆಎಣ್ಣೆಗೆ ಜನಸಾಮಾನ್ಯರ ಅಗತ್ಯವಾದ ಅಡಿಗೆ ಅನಿಲಕ್ಕೆ ಸಹಾಯಧನ ನೀಡಬೇಕಾದ ಸಾಮಾಜಿಕ ಹೊಣೆಗಾರಿಕೆ ಸರ್ಕಾರದ್ದೆ ಆಗಿದೆ.

ಆದರೆ ಜಾಗತೀಕರಣ - ಖಾಸಗೀಕರಣ-ಉದಾರೀಕರಣದ ವಿನಾಶಕಾರಿ ಹಾದಿ ಹಿಡಿದಿರುವ ಸರ್ಕಾರಕ್ಕೆ ಸಾಮಾಜಿಕ ಹೊಣೆಗಾರಿಕೆಯು ಒಂದು ದೊಡ್ಡ ಹೊರೆಯಂತೆ ಕಾಣುತ್ತಿದೆ. ಭಾರಿ ಬಂಡವಾಳದಾರರಿಗೆ ಶ್ರೀಮಂತರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರಿ ಭಾರಿ ರಿಯಾಯಿತಿಗಳನ್ನು ನೀಡುವ ನೀತಿಗಳನ್ನು ಸಂಭ್ರಮೋತ್ಸಾಹಗಳಿಂದ ಜಾರಿಗೆ ತರುತ್ತಿರುವ ಸರ್ಕಾರ ಜನರ ಅಗತ್ಯಗಳಿಗೆ ನಿರಂತರವಾಗಿ ಸಹಾಯಧನ ಕಡಿತ ಮಾಡುತ್ತಿರುವುದು ಮಾತ್ರ ಎಗ್ಗಿಲ್ಲದೆ ಮುಂದುವರಿದಿದೆ.

ನಿರಂತರವಾಗಿ ಕುಸಿಯುತ್ತಿರುವ ಸರ್ಕಾರದ ಸಹಾಯಧನ

ಸೀಮೆಎಣ್ಣೆ - (ಪ್ರತಿಲೀಟರ್‌ಗೆ)

ಬಜೆಟ್	2002-03	2003-04
ಏ-ಡಿ-04		
ಸಹಾಯಧನ	ರೂ.2.45	ರೂ.1.65
ರೂ.0.82		

ಅಡುಗೆ ಅನಿಲ (ಪ್ರತಿ ಸಿಲಿಂಡರ್‌ಗೆ)

ಬಜೆಟ್	67.75	45.18
22.58		
ಸಹಾಯಧನ		

ಸರ್ಕಾರದ ಈ ಬೊಬ್ಬೆಗೆ ಏನಾದರೂ



ಅರ್ಥವಿದೆಯೇ ಎಂಬುದನ್ನು ಜನತೆ ತೀರ್ಮಾನಿಸಬೇಕಿದೆ.

ಸಾರ್ವಜನಿಕ ತೈಲ ಕಂಪನಿಗಳಿಂದ ಸರ್ಕಾರದ ಆದಾಯ ನಿರಂತರವಾಗಿ ಏರುತ್ತಿದೆ-ಗಮನಿಸಿ.

ಒಂದೆಡೆ ಸರ್ಕಾರ ನೀಡುವ ಸಹಾಯಧನ ನಿರಂತರವಾಗಿ ಕುಸಿಯುತ್ತಿದ್ದರೆ ಮತ್ತೊಂದೆಡೆ ಸರ್ಕಾರಿ ಒಡೆತನದ ತೈಲ ಕಂಪನಿಗಳಿಂದ ಸರ್ಕಾರ ಗಳಿಸುತ್ತಿರುವ ಆದಾಯ ನಿರಂತರವಾಗಿ ಏರುತ್ತಿದೆ.

ಸಾರ್ವಜನಿಕ ತೈಲ ಕಂಪನಿಗಳಿಂದ ಸರ್ಕಾರ ಗಳಿಸಿದ ಆದಾಯ (ಕೋಟಿಗಳಲ್ಲಿ)

2001-2002	ರೂ.46,603
2002-2003	ರೂ.69,195

ತೈಲ ಸಂಶೋಧನೆ ಮತ್ತು ಸ್ವಾವಲಂಬಿ ತೈಲ ಕ್ಷೇತ್ರದ ಕಣ್ನೋಟ ಮತ್ತು ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ.

ತೈಲಕ್ಕಾಗಿ ವಿದೇಶದ ಮೇಲೆ ನಿರಂತರವಾಗಿ ಅವಲಂಬಿಸುವ ಬದಲು ಭಾರತದಲ್ಲಿ ತೈಲ ಕ್ಷೇತ್ರಗಳ ಸಂಶೋಧನೆಯಾಗಬೇಕು. ತೈಲ ಕ್ಷೇತ್ರಕ್ಕೆ ಸಂಬಂಧಿಸಿದ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಗೆ ಸರ್ಕಾರ ಗಮನ ನೀಡಬೇಕು. ಒಟ್ಟಾರೆ ತೈಲ ಉದ್ಯಮದಲ್ಲಿ ಭಾರತ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗುವಂತಹ ದೂರದೃಷ್ಟಿಯ ನೀತಿ ಬೇಕೆಂದು ಮೊದಲಿನಿಂದಲೂ ಎಡಪಕ್ಷಗಳು ಸರ್ಕಾರಗಳನ್ನು ಒತ್ತಾಯಿಸುತ್ತಾ ಬಂದಿವೆ. ಆದರೆ ಖಾಸಗಿ ಕಂಪನಿಗಳು ದೊಡ್ಡ ಬಂಡವಾಳಿಗರ ಹಿತಾಸಕ್ತಿ ಕಾಪಾಡಲು ಟೊಂಕಕಟ್ಟಿ ನಿಂತಿರುವ ನಮ್ಮ ಆಳುವ ಸರ್ಕಾರಗಳು ಈ ಯಾವುದೇ ವಿಚಾರಗಳ ಬಗ್ಗೆ ಗಮನವನ್ನು ನೀಡುತ್ತಿಲ್ಲ.

ಬಂಡವಾಳಿಗರಿಗಾಗಿ ಮಾಡಲಾದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ 'ರಫ್ತು ತೆರಿಗೆ ಕಡಿತ' ವಾಪಸ್ಸಾಗಲಿ

ಕೇಂದ್ರ ಯುಪಿಎ ಸರ್ಕಾರವು ಭಾರತದಿಂದ ವಿದೇಶಗಳಿಗೆ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ರಫ್ತು ತೆರಿಗೆಯನ್ನು ಕಡಿತ ಮಾಡಿದೆ. ಇದರಿಂದಾಗಿ ಸರ್ಕಾರಕ್ಕೆ ಪ್ರತಿವರ್ಷ 1200 ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇಂತಹ ಎಲ್ಲ ನಷ್ಟದ ಹೊರೆಯನ್ನು ಜನರ ತಲೆಯ ಮೇಲೆಯೇ ಹೊರಿಸಲಾಗುತ್ತದೆ.

ಸರ್ಕಾರದ ಅಪಪ್ರಚಾರವನ್ನು ಧಿಕ್ಕರಿಸಿ ಪ್ರಯಾಣ ದರ ಏರಿಕೆ - ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ಆಂದೋಲನಕ್ಕೆ ಮುಂದಾಗಿ

ಲಾಭಕೋರ ಖಾಸಗಿ ಕಂಪನಿಗಳ ಪರವಾಗಿ ವರ್ತಿಸುತ್ತಿರುವ ಸರ್ಕಾರ ತಪ್ಪು ಮಾಹಿತಿ ಮತ್ತು ಅಪಪ್ರಚಾರದ ಮೂಲಕ ಜನರನ್ನು ವಂಚಿಸಲು ಪ್ರಯತ್ನಿಸುತ್ತಿದೆ. ಇಂತಹ ವಂಚನೆಗೆ ಬಲಿಯಾಗದೆ ಜನತೆ ಜನಪರವಾದ ಮತ್ತು ಶಾಶ್ವತವಾದ ತೈಲ ನೀತಿಗಾಗಿ ತೀವ್ರವಾದ ಆಂದೋಲನಕ್ಕೆ ಮುಂದಾಗಬೇಕಾದದ್ದು ಇಂದಿನ ತುರ್ತು ಅಗತ್ಯವಾಗಿದೆ ಮತ್ತು ಬೆಲೆ ಏರಿಕೆಯನ್ನು ಹಿಮ್ಮೆಟ್ಟಿಸಬೇಕಿದೆ.

ಬಿಜೆಪಿ ಮತ್ತು ಎನ್.ಡಿ.ಎಗಳ ಬೂಟಾಟಿಕೆಯೂ ಬಯಲಾಗಿದೆ

ಬಿಜೆಪಿ ಮತ್ತು ಎನ್.ಡಿ.ಎ.ಗಳು ಯುಪಿಎ ಸರ್ಕಾರದ ತೈಲಬೆಲೆ ಏರಿಕೆಯನ್ನು ವಿರೋಧಿಸುವ ಕಪಟ ನಾಟಕವನ್ನಾಡುತ್ತಿವೆ. ಇದೇ ಎನ್.ಡಿ.ಎ. ಸರ್ಕಾರ ಅಧಿಕಾರದಲ್ಲಿದ್ದಾಗಲೂ ನಿರಂತರವಾಗಿ ಪೆಟ್ರೋಲ್-ಡಿಸೇಲ್ ಬೆಲೆಗಳನ್ನು ಏರಿಸಲಾಯಿತು. ಮಾತ್ರವಲ್ಲ ಸೀಮೆಎಣ್ಣೆ - ಅಡಿಗೆ ಅನಿಲದ ಬೆಲೆಯನ್ನು ವಿಪರೀತವಾಗಿ ಏರಿಸಲಾಯಿತು. (ಎಡಪಕ್ಷಗಳ ಒತ್ತಾಯದಿಂದ ಈಗ ಹಾಗಾಗಿಲ್ಲ.)

ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಗಲೂ ಜನಪರ ಪರ್ಯಾಯ ನೀತಿಗಳನ್ನು ಸೂಚಿಸಿ ಚಳುವಳಿ ನಡೆಸಿದ್ದವು. ಆದರೆ ಇಂತಹ ಜನಪರ ಪರ್ಯಾಯ ನೀತಿಗಳನ್ನು ಧಿಕ್ಕರಿಸಿ ಇದೇ ಜಾಗತೀಕರಣ, ಖಾಸಗೀಕರಣ ಮತ್ತು ಬೆಲೆ ಏರಿಕೆ ನೀತಿಯನ್ನೇ ಅನುಸರಿಸಿದ ಬಿಜೆಪಿ ಮತ್ತು ಎನ್‌ಡಿಎಗಳನ್ನು ಜನತೆ ಕಳೆದ ಚುನಾವಣೆಯಲ್ಲಿ ಧೂಳಿಪಟ ಮಾಡಿ ತಕ್ಕ ಪಾಠ ಕಲಿಸಿದ್ದಾರೆ. ಬಿಜೆಪಿ-ಎನ್‌ಡಿಎಗಳ ಬೂಟಾಟಿಕೆ - ಕಪಟ ನಾಟಕ ಜನರ ಮುಂದೆ ಬಯಲಾಗಿದೆ.

ವಿಮಾನಯಾನ ಹಗುರ; ಬಡವರ ಪ್ರಯಾಣ ಬಲು ಭಾರ

ಜನಸಾಮಾನ್ಯರಿಗೆ ಅಗತ್ಯವಾದ ಪೆಟ್ರೋಲ್ ಡೀಸೆಲ್ ದರಗಳನ್ನು ನಿರಂತರವಾಗಿ ಏರಿಸುತ್ತಿರುವ ಸರ್ಕಾರ ಮತ್ತೊಂದೆಡೆ ವಿಮಾನಗಳಿಗೆ ಅಗತ್ಯವಾದ ಇಂಧನದ ಬೆಲೆಯನ್ನು ಕಡಿತಗೊಳಿಸುತ್ತಿದೆ.

ವಿಮಾನ ಕಂಪನಿಗಳ - 'ವಿಮಾನಯಾನಿಗಳ ಪ್ರಯಾಣ ಹಗುರ, ಬಡವರ ಪ್ರಯಾಣ ಬಲುಭಾರ' ಎಂಬಂತೆ ಮಾಡಿರುವ ಸರ್ಕಾರದ ನೀತಿಯು ಸ್ಪಷ್ಟವಾಗಿ ಸರ್ಕಾರ ಯಾರ ಪರವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ತೈಲ ಕಂಪನಿಗಳಿಗೆ ನಷ್ಟವಾಗುತ್ತಿಲ್ಲ. ಲಾಭದ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ ಅಷ್ಟೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲಗಳ ಬೆಲೆ ಏರಿಕೆಯಿಂದಾಗಿ ಸಾರ್ವಜನಿಕ ತೈಲ ಕಂಪನಿಗಳಿಗೆ ನಷ್ಟವಾಗುತ್ತಿರುವ ಕಾರಣದಿಂದ ಬೆಲೆ ಏರಿಕೆಗೆ ಈ ಸಂಸ್ಥೆಗಳು ಒತ್ತಾಯ ಮಾಡಿದವು ಎಂದು ಬಿಂಬಿಸಲಾಗುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಆಗಿರುವುದರಿಂದ ಈ ತೈಲ ಕಂಪನಿಗಳಿಗೆ ನಷ್ಟವೇನೂ ಆಗುತ್ತಿರಲಿಲ್ಲ. ಉತ್ತಮ ಲಾಭಗಳಿಸುತ್ತಿದ್ದ ಈ ಕಂಪನಿಗಳ ಲಾಭದ ಪ್ರಮಾಣದಲ್ಲಿ ಸ್ವಲ್ಪ ಕಡಿತವಾಗಿತ್ತು ಅಷ್ಟೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿದಂತೆಲ್ಲಾ ನೇರವಾಗಿ ಅದನ್ನು ಜನರ ಮೇಲೆ ವರ್ಗಾಯಿಸಬೇಕೆನ್ನುವುದು ಬಂಡವಾಳಶಾಹಿ ವ್ಯವಸ್ಥೆಯ ಒಂದು ಕ್ರೂರ ನೀತಿಯಾಗಿದೆ. ಇಂತಹ ಜನವಿರೋಧಿ ವಾದವನ್ನು ಒಪ್ಪುವುದು ಸಾಧ್ಯವಿಲ್ಲ. ಎನ್.ಡಿ.ಎ ಸರ್ಕಾರದ ಅದೇ ವಿನಾಶಕಾರಿ ನೀತಿಯ ದಾರಿಯಲ್ಲೇ ಸಾಗಲು ಯುಪಿಎ ಸರ್ಕಾರವೂ ಪ್ರಯತ್ನಿಸುತ್ತಿದೆ.

ಜನರ ರಾಜಕೀಯ ಜಾಗೃತಿ - ತೀವ್ರವಾದ ಪ್ರತಿಭಟನಾ ಆಂದೋಲನಗಳಿಂದ ಮಾತ್ರವೇ ಇಂತಹ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ

- ಆರ್.ರಾಮಕೃಷ್ಣ

ಜಾಗತೀಕರಣ ತಂದ ಹೊಸ ಉದ್ಯಮ ಅಥವಾ

ನಡುರಾತ್ರಿ ಕೂ

ಕಾಲ್‌ಸೆಂಟರ್ ಈಗ ಎಲ್ಲರಿಗೂ ಚಿರಪರಿಚಿತ. ಇದು ಜಾಗತೀಕರಣ ತಂದ ಹೊಸ ಉದ್ಯಮವೇ? ಅಥವಾ ಇದ್ದಬದ್ದ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ 'ನಡುರಾತ್ರಿ ಕೂಲಿ' ಆಧರಿಸಿದ ಇನ್ನೊಂದು ಶೋಷಕ ಕ್ಷೇತ್ರವೇ? ಬಿಪಿಓ-ಐಟೀಎಸ್ ಎಂದೂ ಕರೆಯಲಾಗುವ ಈ ಉದ್ಯಮದ ಲಕ್ಷಣಗಳೇನು? ವಿಶೇಷತೆಗಳೇನು? ಸಾಧ್ಯತೆ-ಸವಾಲುಗಳೇನು? ಈ ಉದ್ಯಮ ನಮ್ಮ ಬೆಳವಣಿಗೆಯಲ್ಲಿ ಯಾವ ಪಾತ್ರ ವಹಿಸುತ್ತದೆ? ಎಷ್ಟರ ಮಟ್ಟಿಗೆ ಇದಕ್ಕೆ ಆದ್ಯತೆ ನೀಡಬೇಕು. ಉದ್ಯಮದ ಒಂದು ಸಮಗ್ರ ಪರಿಚಯಾತ್ಮಕ ವಿಶ್ಲೇಷಣೆ ಇಲ್ಲಿದೆ.

ಶರತ್‌ಚಂದ್ರ



ನಡುರಾತ್ರಿಯ ನಂತರ ಸುಮೊ, ಕ್ವಾಲಿಸ್‌ಗಳು ಗದ್ದಲ ಎಬ್ಬಿಸುತ್ತಾ, ಮನೆ ಮುಂದೆ ನಿಲ್ಲುತ್ತವೆ. ಪಾಪ್ ಸಂಗೀತದ ಏರುಧ್ವನಿಯ ಆಲಾಪನೆ ಬೇರೆ. ವ್ಯಾನ್ ಇಳಿದು ಮನೆಗೆ ಸೇರಿದವರ ನಗು - ಅರಚಾಟ-ಕಿರಿಚಾಟ ಎಚ್ಚರರಾದ ನೆರೆಹೊರೆಯವರು 'ಥೂ, ಈ ಕಾಲ್ ಸೆಂಟರ್ ಮನೆ ಹಾಳಾಗ....' ಎಂದು ಶಪಿಸುತ್ತಾ ಪುನಃ ನಿದ್ದೆ ಮಾಡಲು ಪ್ರಯತ್ನಿಸುತ್ತಾರೆ. ಇದು ಬೆಂಗಳೂರಿನ ಬಡಾವಣೆಗಳಲ್ಲಿ ಸರ್ವೇ ಸಾಮಾನ್ಯ ದೃಶ್ಯ. ಬೆಂಗಳೂರು ನಗರ ಮತ್ತು ಸುತ್ತಮುತ್ತ ಒಂದೂವರೆ ಲಕ್ಷ ಜನರಿಗೆ ಉದ್ಯೋಗ ಕೊಡುವ ಕಾಲ್ ಸೆಂಟರ್‌ಗಳು, 'ಮಾಹಿತಿ ತಂತ್ರಜ್ಞಾನ ಆಧಾರಿತ ಸೇವಾಕ್ಷೇತ್ರ' (ITES-Information Technology enabled Service)ಎಂದು ಕರೆಯಲಾಗುವ ಹೊಸ 'ಉದ್ಯಮ'ದ ದೊಡ್ಡ ವಿಭಾಗ. ಸಾಕಷ್ಟು ವಿವಾದಿತವಾಗಿರುವ ಈ ಕ್ಷೇತ್ರದ ಸಂಕ್ಷಿಪ್ತ ಪರಿಚಯ ಇದು.

ಕಾಲ್‌ಸೆಂಟರ್ 'ಉದ್ಯಮ'

ಕಾಲ್‌ಸೆಂಟರ್ ಒಂದು ಕಂಪನಿಯ ಮಾರಾಟದ ನಂತರದ ಮತ್ತು ಮಾರಾಟದ ಮೊದಲಿನ ಪ್ರಶ್ನೆ - ಸಮಸ್ಯೆ - ದೂರುಗಳನ್ನು ಸ್ವೀಕರಿಸುವ ವಿಭಾಗ. ಗ್ರಾಹಕರ ಜತೆ ಸಂಬಂಧದಲ್ಲಿ ಮೊದಲ ಕೊಂಡಿ. ಗ್ರಾಹಕರ ಜತೆ ಸಂಪರ್ಕ ಬಿಂದು. (ವಿವರಗಳಿಗೆ 'ಕಾಲ್ ಸೆಂಟರ್ ಎಂದರೇನು?' ಬಾಕ್ಸ್ ನೋಡಿ) ಗ್ರಾಹಕ ಸಾಮಗ್ರಿಗಳು, ಸೇವೆಗಳು ವ್ಯಾಪಕವಾಗಿ ಹೆಚ್ಚುತ್ತಿರುವುದರಿಂದ ಕಾಲ್ ಸೆಂಟರ್ ಉದ್ಯೋಗಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ಈ ಉದ್ಯೋಗಿಗಳು ಗ್ರಾಹಕರ ಜತೆ ಸೌಜನ್ಯದಿಂದ ಮಾತಾಡಿ, ಅವರ ಸಮಸ್ಯೆ ಅರ್ಥ ಮಾಡಿಕೊಳ್ಳುವುದನ್ನು ಬಿಟ್ಟರೆ (ಕಂಪನಿಯ ಉತ್ಪನ್ನದ ಬಗ್ಗೆ ವಿಶೇಷ ಮಾಹಿತಿ ಸೇರಿಸಿ) ಬೇರೆ ಯಾವುದೇ ವಿಶೇಷ ಜಾಣ್ಮೆ - ಆಕರ್ಷಣೆ ಅಗತ್ಯವಿಲ್ಲ. ಕಾಲ್ ಸೆಂಟರ್‌ಗಳು ಗ್ರಾಹಕರಿಗೆ ಹತ್ತಿರವಿರುವ (ಸ್ಥಳೀಯ ಅಥವಾ ಉಚಿತ ಕರೆ ಮಾಡುವ ಸೌಲಭ್ಯವಿರುವ) ಕೇಂದ್ರಗಳಾಗಿದ್ದು, ಸಾಮಾನ್ಯವಾಗಿ ಕಂಪನಿಯ ಕಾರ್ಖಾನೆ ಅಥವ ಇತರ ಕೇಂದ್ರಗಳ ಹತ್ತಿರ ಇರಬೇಕಾಗಿಲ್ಲ. ತಮ್ಮ ವಹಿವಾಟಿನ ಖರ್ಚನ್ನು ಕಡಿಮೆ ಮಾಡುತ್ತಾ, ಲಾಭ ಹೆಚ್ಚು ಮಾಡುತ್ತಾ ಹೋಗುವ ಗುಂಗಿನಲ್ಲಿರುವ ಅಮೆರಿಕ-ಯುರೋಪುಗಳ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಈ ಉದ್ಯೋಗಗಳನ್ನು ಕಡಿಮೆ - ವೆಚ್ಚದ ಮೂರನೇ ಜಗತ್ತಿನ ದೇಶಗಳಲ್ಲಿ ಯಾಕೆ ಮಾಡಬಾರದು ಎಂದು ಹಲವು ವರ್ಷಗಳಿಂದ ಯೋಚಿಸುತ್ತಿವೆ. ಒಂದು ದಶಕದ ಹಿಂದೆಯೇ ಆರಂಭವಾದ ಈ ಲಹರಿ ಈಗ ಒಂದು ದೊಡ್ಡ 'ಉದ್ಯಮ'ವಾಗಿದೆ. ಟೆಲಿಕಾಂ, ಇಂಟರ್‌ನೆಟ್ ಸಂಪರ್ಕ ಕ್ಷೇತ್ರದಲ್ಲಿ ಆಗಿರುವ ದೊಡ್ಡ ಕ್ರಾಂತಿ, ಇಂಡಿಯಾ - ಮೂರನೇ ಜಗತ್ತಿನ ದೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಣ ಪಡೆದ ನಿರುದ್ಯೋಗಿಗಳ ಪಡೆಯ ಲಭ್ಯತೆ - ಇವೆರಡು ಈ ಯೋಚನಾ ಲಹರಿಗೆ ಕುಮ್ಮಕ್ಕು ಕೊಟ್ಟಿವೆ.

ಮುಖ್ಯವಾಗಿ ಜನರಲ್ ಎಲೆಕ್ಟ್ರಿಕ್, ಅಮೆರಿಕನ್ ಎಕ್ಸ್‌ಪ್ರೆಸ್ ನಂತರ ಅಮೆರಿಕನ್ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಇದನ್ನು ಆರಂಭಿಸಿದವು. ಈಗ ಇದುದೊಡ್ಡ ಸ್ವತಂತ್ರ 'ಉದ್ಯಮ'ವಾಗಿದೆ. ಅಮೇರಿಕನ್ ಕಂಪನಿಗಳಿಗೆ ಮುಖ್ಯವಾಗಿ ಅಮೆರಿಕನ್ ಗ್ರಾಹಕರ ಜತೆ ವ್ಯವಹರಿಸುವ ಕಾಲ್‌ಸೆಂಟರ್‌ಗಳು ಬೇಕಾಗಿದ್ದು, ಇಂಗ್ಲೀಷ್ ಮಾತನಾಡಬಲ್ಲ ಶಿಕ್ಷಿತ ಯುವಕ-ಯುವತಿಯರು ದೊಡ್ಡ ಸಂಖ್ಯೆಯಲ್ಲಿರುವ ಭಾರತ ಸ್ವಾಭಾವಿಕ ತಾಣವಾಯಿತು. 90ರ ದಶಕದಲ್ಲಿ ಟೆಲಿಕಾಂ, ಇಂಟರ್‌ನೆಟ್ ವ್ಯವಸ್ಥೆ ವ್ಯಾಪಕವಾಗಿ ಲಭ್ಯವಾಗಿ, ಸೇವೆ ಉತ್ತಮಗೊಂಡಿದ್ದು ಇದಕ್ಕೆ ಕುಮ್ಮಕ್ಕು ಕೊಟ್ಟಿದೆ.

ಬಿಪಿಒ-ಐಟೀಎಸ್(BPO-ITES)ಎಂದರೇನು?

ಕಾಲ್‌ಸೆಂಟರ್‌ನಂತೆ ಕಂಪನಿಯ ಮುಖ್ಯ ಕೆಲಸ (ಉದಾಹರಣೆಗೆ ಮೂಲ ಉತ್ಪನ್ನದ ವಿನ್ಯಾಸ, ತಯಾರಿ, ಮಾರಾಟ) ಅಲ್ಲದ ಇತರ ಎಲ್ಲಾ ಕೆಲಸ ಮಾಡುವ ಸಹಾಯಕ - ವಿಭಾಗಗಳನ್ನು ಕಡಿಮೆ - ಖರ್ಚಿನ ದೇಶಗಳಿಗೆ ಕಳಿಸುವುದು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಒಂದು 'ಟ್ರೆಂಡ್' ಆಗಿಬಿಟ್ಟಿದೆ. ಇಂತಹ ವಿಭಾಗಗಳೆಂದರೆ ಕಾಲ್‌ಸೆಂಟರ್, ಸಿಬ್ಬಂದಿ (ಪರ್ಸನೆಲ್ ಅಥವಾ ಎಚ್‌ಆರ್) ವ್ಯವಹಾರ, ಇಡಿಎ(ಕಂಪನಿಯ ಅಂಕಿ-ಸಂಖ್ಯೆಗಳನ್ನು ಕಂಪ್ಯೂಟರ್ ಬಳಸಿ ಪರಿಷ್ಕರಿಸುವುದು, ನಾನಾ ವರದಿಗಳನ್ನು ತಯಾರಿಸುವುದು), ಖರೀದಿ, ಬಿಲ್ಲಿಂಗ್, ಕಂಪ್ಯೂಟರ್ ಸಂಪರ್ಕಜಾಲ ಉಸ್ತುವಾರಿ, ಪಿಟ್‌ಸ್ಟೈಟ್ ಉಸ್ತುವಾರಿ, ಕಾನೂನು ವ್ಯವಹಾರ, ಮಾರುಕಟ್ಟೆ, ಇತ್ಯಾದಿ. ಇಂತಹ ವಿಭಾಗಗಳು ಎಲ್ಲಾ ಕಂಪನಿಗಳಲ್ಲೂ ಇದ್ದು ಅವುಗಳನ್ನು ನಡೆಸಲು ಬೇಕಾದ ಜಾಣ್ಮೆ - ಪರಿಣತಿಗೂ ಕಂಪನಿಯ ಮೂಲಭೂತ ವ್ಯವಹಾರ-ವಹಿವಾಟು- ಉತ್ಪನ್ನಕ್ಕೂ ಏನೇನೂ ಸಂಬಂಧವಿಲ್ಲ. ಉದಾಹರಣೆ ಯಾವುದೇ ಕಂಪನಿಯ ಸಿಬ್ಬಂದಿ ವಿಭಾಗಕ್ಕೆ, ಖರೀದಿ ವಿಭಾಗದ ಉದ್ಯೋಗಿ ಮಾಡುವ ಕೆಲಸ ಎಲ್ಲಿದ್ದರೂ ಒಂದೇ, ಇಂತಹ ಉದ್ಯೋಗಗಳನ್ನು ಬೇರೆಡೆ (ವೇತನ ಕಡಿಮೆ ಇರುವಲ್ಲಿ) ಮಾಡುವುದು ಟೆಲಿಕಾಂ ಇಂಟರ್‌ನೆಟ್ ಮತ್ತು ಕಂಪ್ಯೂಟರ್ ಕ್ಷೇತ್ರಗಳಲ್ಲಿ ಮೆರೆದ ಪ್ರಗತಿಯಿಂದ ಈಗ ಸಾಧ್ಯವಾಗಿದೆ. ಹಲವು ಕಂಪನಿಗಳ ಈ ಎಲ್ಲಾ ವಿಭಾಗಗಳ ಕೆಲಸಗಳೂ ಹೊರಗೆ ಕಳಿಸಲ್ಪಟ್ಟಾಗ ಒಂದು ಸ್ವತಂತ್ರ ಉದ್ಯಮವಾಗಿ ಬಿಡುವ ಸಾಧ್ಯತೆ ಇದೆ ಆಗಿದೆ. ಇದನ್ನೇ ಬಿಪಿಒ(BPO-Business Process Outsourcing) ಅಂದರೆ - ಕಂಪನಿಯ ವಹಿವಾಟಿನ ಮೂಲಭೂತ ವಿಭಾಗ ಬಿಟ್ಟು ಇತರ ವಿಭಾಗಗಳನ್ನು ಕಂಪನಿಯ ಹೊರಗೆ ಕಾಂಟ್ರಾಕ್ಟು ಕೊಟ್ಟು ಮಾಡಿಸುವುದು - ಎನ್ನುತ್ತಾರೆ. ಇದನ್ನೇ ಐ.ಟಿ.ಇ.ಎಸ್.(ITES-Information Technology enabled Service) ಅಂದರೆ- ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು ಎಂದೂ ಕರೆಯುತ್ತಾರೆ. ಇವೆರಡಕ್ಕೂ ಸ್ವಲ್ಪ ವ್ಯತ್ಯಾಸ ಇದೆ. ಬಿಪಿಒದ ವಿವರಣೆಗೆ ಒಗ್ಗದ ಕೆಲವು ಸೇವೆಗಳು ಹೊರಗೆ ಹೋಗುತ್ತಿವೆ. ಉದಾಹರಣೆಗೆ 'ಕಾರ್ಟೂನ್ ಫಿಲಂ'ಗಳನ್ನು ಮಾಡುವುದು ಇಲ್ಲಿ ಇಂತಹ ಕಂಪನಿಗಳ ಮೂಲಭೂತ ಭಾಗವಾದ ಕಾರ್ಟೂನ್ ವಿನ್ಯಾಸ, ಫಿಲಂನ ಹಿಂದಿನ ಕಥೆ ಎಲ್ಲಾ ಭಾರತದಲ್ಲೇ ಸಿದ್ಧವಾಗುತ್ತಿದೆ. ಡಿಸ್ನಿ, ಕಾರ್ಟೂನ್ ನೆಟ್‌ವರ್ಕ್ - ಮುಂತಾದ ಕಂಪನಿಗಳ ಸ್ಪೆಶಲ್ ಎಫೆಕ್ಟ್, ಎನಿಮೇಶನ್ ಕಾರ್ಟೂನ್ ಭಾರತದಲ್ಲಿ ಸಿದ್ಧವಾಗುತ್ತಿದೆ. ಅದೇ ರೀತಿ ಕೆಲವು ಆರ್ಥಿಕ - ಮಾರುಕಟ್ಟೆ ಸಂಶೋಧನೆ - ವಿಶ್ಲೇಷಣೆ ಮುಖ್ಯ ವಹಿವಾಟುಗಾರರು ಮೋರ್ಗನ್ ಸ್ಟಾನ್ಲಿ, ಗಾರ್ಟ್‌ನರ್, ನಂತಹ ಕಂಪನಿಗಳು ತಮ್ಮ ಮುಖ್ಯ ವಿಭಾಗ ಮಾರುಕಟ್ಟೆ ಸಂಶೋಧನೆ - ವಿಶ್ಲೇಷಣೆಗಳನ್ನೇ ಭಾರತದಲ್ಲಿ ಮಾಡಲು ಆರಂಭಿಸಿವೆ. ಜಾಗತಿಕ ಮಾರುಕಟ್ಟೆ - ಆರ್ಥಿಕ - ಶೇರು ಬಜಾರ್ ಬಗ್ಗೆ ಅಂಕಿ ಸಂಖ್ಯೆ ಸಂಗ್ರಹ, ವಿಶ್ಲೇಷಣೆ ಮುಖ್ಯ ಭಾಗವಾಗಿ ಈ ವಹಿವಾಟು ಎಲ್ಲಿ ಮಾಡಿದರೂ ಒಂದೇ. ಆದರೆ ಈ ಎಲ್ಲಾ ಉದ್ಯೋಗಗಳಿಗೂ ವಿಶೇಷ ಪರಿಣತಿ ಬೇಕು. ಇದು ಈಗ ಭಾರತದಲ್ಲಿ ಲಭ್ಯವಿರುವುದು. ಇಂತಹ ಕೆಲಸವನ್ನು ಭಾರತದಲ್ಲಿ ಮಾಡುವುದು ಸಾಧ್ಯವಾಗಿದೆ. ಇದೆ ರೀತಿ ಪುಸ್ತಕಗಳ ಕಂಪೋಸಿಂಗ್-ಪ್ರಿಂಟಿಂಗ್‌ನಂತಹ ಉದ್ಯಮಗಳೂ ಆರಂಭ'ವಾಗಿವೆ. ಇವೆಲ್ಲವನ್ನು ತೋರಿಸಿ ಐಟೀಎಸ್ 'ಉದ್ಯಮ' ಎನ್ನುತ್ತಾರೆ. ಇದು ನಿಜವಾಗಿಯೂ ಒಂದು ಸೇವಾ (ಸರ್ವೀಸಸ್) ಕ್ಷೇತ್ರ. ಆದರೆ

ಕಾಲ್‌ಸೆಂಟರ್ ಎಂದರೇನು

ಯಾವುದೇ ಉತ್ಪನ್ನದ ಉತ್ಪಾದನೆ, ಮಾರಾಟದಲ್ಲಿ ತೊಡಗಿರುವ ಕಂಪನಿಯ ಗ್ರಾಹಕರು ಆ ಉತ್ಪನ್ನಗಳಲ್ಲಿ ಸಮಸ್ಯೆ ಬಂದಾಗ, ಅದನ್ನು ಪರಿಹರಿಸಲು ಫೋನು ಮಾಡಿದಾಗ ಅದನ್ನು ಸ್ವೀಕರಿಸುವ ಕೇಂದ್ರ. ಸಮಸ್ಯೆ ಕೊಡುತ್ತಿರುವ 'ಉತ್ಪನ್ನ' ಸ್ಟಿರಿಯೋ, ಮೊಬೈಲ್ ಫೋನ್, ಕ್ಯಾಮರಾ ಇರಬಹುದು. ಅಥವಾ ಸೇವೆಗಳಾದ ಬ್ಯಾಂಕ್, ಇನ್ಶೂರೆನ್ಸ್, ಕ್ರೆಡಿಟ್ ಕಾರ್ಡ್, ವಿದ್ಯುತ್ ಫೋನು ಬಿಲ್ಲ, ತೆರಬೇಕಾದ ತೆರಿಗೆಗಳು ಇತ್ಯಾದಿ ಇರಬಹುದು. ಕಂಪನಿಯ ಉತ್ಪನ್ನಗಳ ಮಾರಾಟದ ಸಂಖ್ಯೆ (ಲಕ್ಷಾಂತರ ಸಾವಿರಾರು)ಗೆ ಅನುಗುಣವಾಗಿ ಕಾಲ್‌ಸೆಂಟರ್‌ನಲ್ಲಿ ಎಷ್ಟು ಜನ ಫೋನು ಸ್ವೀಕರಿಸುವವರು ಬೇಕು ಎಂದು ನಿರ್ಧಾರವಾಗುತ್ತದೆ. ಗ್ರಾಹಕರು ದೂರು / ಪ್ರಶ್ನೆಗಳನ್ನು ಸ್ವೀಕರಿಸಿ ಸರಳವಾದ ಪ್ರಶ್ನೆಯಾದರೆ ಅದಕ್ಕೆ ತತ್‌ಕ್ಷಣ ಪರಿಹಾರ ಹೇಳುವುದು, ಇಲ್ಲವೆ ಪರಿಹಾರ ತಿಳಿಸುವ ದಿನ - ಸಮಯ ಹೇಳುವುದು ಕಾಲ್ ಸೆಂಟರ್‌ನ ಕೆಲಸ. ಆ ಮೇಲೆ ಈ ದೂರು ಪರಿಹಾರಕ್ಕೆ ಕಂಪನಿಯ ಸಂಬಂಧಪಟ್ಟ ವಿಭಾಗಕ್ಕೆ ರವಾನಿಸುವುದು. ಪರಿಹಾರ ಸಂಬಂಧಪಟ್ಟ 'ಉತ್ಪನ್ನ'ದ ರಿಪೇರಿ ಬಿಡಿಭಾಗ ಕಳಿಸುವುದು, 'ಗ್ಯಾರಂಟಿ' ಅವಧಿಯ ಬಳಿಕೆ ಇದ್ದರೆ ಹೊಸ 'ಉತ್ಪನ್ನ' ಕೊಡುವುದು ಫೋನ್ ಬಿಲ್ಲು ತಪ್ಪಾಗಿದ್ದರೆ ಸರಿಪಡಿಸಿ 'ಹೆಚ್ಚಿನ ಹಣ' ವಾಪಸು ಮಾಡುವುದು - ಇತ್ಯಾದಿ. ಉತ್ಪನ್ನದ ಬಗ್ಗೆ ಮಾಹಿತಿ, ಸರಿಯಾದ ಮಾಡೆಲ್ ಆರಿಸಲು ಸಹಾಯ - ಮುಂತಾದ ಮಾರಾಟದ - ಮೊದಲಿನ ಸಮಸ್ಯೆಗಳನ್ನು ಕಂಪನಿಗಳ ಕಾಲ್‌ಸೆಂಟರ್‌ಗಳು ಸ್ವೀಕರಿಸುತ್ತವೆ. ಉತ್ಪನ್ನಗಳ ಮಾರಾಟಕ್ಕೆ ಕರೆ ಮಾಡುವುದೂ (ಈ ಕಾರು ಕೊಳ್ಳಿ, ಆ ಇನ್ಶೂರೆನ್ಸ್ ಕೊಳ್ಳಿ, ಮನೆ ಸಾಲ ಕೊಳ್ಳಿ ಇತ್ಯಾದಿ) ಕಾಲ್ ಸೆಂಟರ್‌ಗಳ ಕಾರ್ಯ ವ್ಯಾಪ್ತಿಗೆ ಬರುತ್ತದೆ.



'ರಾತ್ರಿ ಪಾಳಿ ತರುವ ಹ

ರಾತ್ರಿ ಪಾಳಿ ತರುವ ಹೊಸ ರೋಗಕ್ಕೆ ಹೆ
ಅಂದರೆ Burn-Out-Stress Syndrom. ಅಂ
ಉದ್ಯೋಗಗಳಲ್ಲಿ ಸಾಮಾನ್ಯ. ಸತತ ಸುಸ್ತು, ನಿದ್ದೆ
- ಈ ರೋಗದ ಲಕ್ಷಣಗಳು. ಹೊಟ್ಟೆ, ಜೀರ್ಣ
ದೇಹವನ್ನು ಅದರ ಪ್ರಾಕೃತಿಕ ಒತ್ತಡದ ಮೇಲೆ ದ
ಬಡಿತದ ಮೇಲೂ ಪರಿಣಾಮ ಆಗುವವರೂ ಇ
ಮುಂತಾದ ಗಂಭೀರ ಸಮಸ್ಯೆಗಳಿಗೆ ಕಾರಣವಾಗು
ಸ್ವಭಾವ, ಎಲ್ಲದರಲ್ಲಿ ಆಸಕ್ತಿ ಕಳೆದುಕೊಳ್ಳುವುದು
ಸೆಂಟರ್‌ಗಳಲ್ಲಿ ಡಾಕ್ಟರುಗಳನ್ನು ಈ ಸಮಸ್ಯೆ
'ತಾತ್ಕಾಲಿಕವಾಗಿ ಸಹಿಸಲು' ಡಾಕ್ಟರು ಶುಶ್ರೂಷೆ
ರಾತ್ರಿ ಪಾಳಿ ಇದ್ದರೆ ಈ 'ಬಾಸ್' ಅನಿವಾರ್ಯ

'ಉದ್ಯಮ'ದ ದರ್ಜೆ ಗಳಿಸಿ ಬಿಟ್ಟಿದೆ. ಬಿಪಿಒ, ಐಟಿಇಎಸ್, ಕ್ಷೇತ್ರದ ಒಂದು ಭಾಗವೆನ್ನಬಹುದು. ಕಾಲ್‌ಸೆಂಟರ್ ಬಿಪಿಒ ನ ಒಂದು ವಿಭಾಗ. ಐಟಿಇಎಸ್ ಈ ಇಡೀ ಕ್ಷೇತ್ರಕ್ಕೆ ಇಟ್ಟಿರುವ ಹೆಸರು.

ಬಿಪಿಒ-ಐಟಿಇಎಸ್ ಉದ್ಯಮ

90ರ ದಶಕದಲ್ಲಿ ಆರಂಭವಾದ ಈ 'ಉದ್ಯಮ' ಈ ದಶಕದಲ್ಲಿ ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ 'ರಫ್ತು ಉದ್ಯಮ'ವಾಗಿ ಬಿಟ್ಟಿದೆ. 2004-05ರ ಸಾಲಿಗೆ ಐಟಿಇಎಸ್ ಕ್ಷೇತ್ರದ ಒಟ್ಟು ವಹಿವಾಟು ಸುಮಾರು 22 ಸಾವಿರ ಕೋಟಿ ರೂ. ಕಳೆದ ಐದು ವರ್ಷಗಳಲ್ಲಿ ಸರಾಸರಿ ಶೇಕಡಾ 55 ರಷ್ಟು ವಾರ್ಷಿಕವಾಗಿ ಬೆಳೆಯುತ್ತಿದೆ. ಉದ್ಯೋಗ ನಿರ್ಮಾಣದಲ್ಲೂ ಈ 'ಉದ್ಯಮ' ವಿಕ್ರಮ ಸಾಧಿಸಿದೆ. ಈಗ ಮೂರುವರೆ ಲಕ್ಷ ಉದ್ಯೋಗ ಹೊಂದಿರುವ ಉದ್ಯಮ ಕಳೆದ ವರ್ಷ ಸುಮಾರು ಒಂದು ಕಾಲು ಲಕ್ಷ ಹೊಸ ಉದ್ಯೋಗ ಸೃಷ್ಟಿಸಿತು. ಇದು ವೇಗವಾಗಿ ಬೆಳೆಯುವ ಇತರ ಕ್ಷೇತ್ರಗಳಲ್ಲಿ ಸಾಫ್ಟ್‌ವೇರ್ ಮತ್ತು ಟೆಲಿಕಾಂ ಸೇವೆ ಕೈಗಾರಿಕೆಗಳ ಎರಡು - ಮೂರು ಪಟ್ಟು. ಈ ಅಂಕೆ ಸಂಖ್ಯೆಗಳು ಇಡೀ ಐಟಿ ಉದ್ಯಮದ್ದಲ್ಲ. ಸಾಫ್ಟ್‌ವೇರ್ ಸೇವೆಗಳನ್ನು ಒಳಗೊಂಡಿಲ್ಲ ಎಂದು ಗಮನಿಸಬೇಕು. ಐದು ವರ್ಷಗಳ ಹಿಂದೆ ಐಟಿಇಎಸ್ ಕ್ಷೇತ್ರ ಒಟ್ಟು

...್‌ಸೆಂಟರ್‌ನ ...ಗಳು

ಐಟಿ ವಹಿವಾಟಿನ ಸುಮಾರು ಶೇಕಡಾ 15 ಭಾಗ ಮಾತ್ರ ಇದ್ದರೆ, ಈ ವರ್ಷ ಶೇಕಡಾ 30 ದಾಟಿದೆ. ಅಂದರೆ ಕಳೆದ ಐದು ವರ್ಷಗಳಲ್ಲಿ ಒಟ್ಟು ಐಟಿ-ಬಿಟಿ ಉದ್ಯಮದ ಭಾಗವನ್ನು ಇಮ್ಮಡಿಗಿಂತ ಹೆಚ್ಚು

...ೋಗ - ಬಾಸ್' (BOSS)

...ಇಡಲಾಗಿದೆ - 'ಬಾಸ್' ಅಂತ. ಬಾಸ್ ...ಡುವ ಒತ್ತಡ!. ಇದು ಕಾಲ್ ಸೆಂಟರ್‌ನ ...ದೇಹದ ಚಕ್ರದಲ್ಲಿ ಪೂರ್ವ ಏರುಪೇರು ...ಗಳು ಸಹ ಸರ್ವೇ ಸಾಮಾನ್ಯ. ಇದು ...ದರಿಂದ ಆಗುವ ಪರಿಣಾಮ. ಹೃದಯ ...ಯರಲ್ಲಿ ಇವೆಲ್ಲಾ ತೀವ್ರ. ಗರ್ಭಕೋಶ ...ದ್ದರಿಂದ ಮಾನಸಿಕ ಕಿರಿಕಿರಿ, ಸಿಡಿಮಿಡಿ ...ವುದು ಸಹ ಆಗುತ್ತವೆ. ಎಲ್ಲಾ ಕಾಲ್ ...ನೇಮಿಸಿದ್ದಾರೆ. ಆದರೆ ಈ ಸಮಸ್ಯೆಗೆ ...ಿ. ಆದರೆ ಮೂಲ ಕಾರಣವಾದ ಸತತ ...್ಯೋಗಿಗಳನ್ನು ಸತಾಯಿಸುತ್ತದೆ.



ಮಾಡಿಕೊಂಡಿದೆ.

ದೊಡ್ಡ ದೊಡ್ಡ ಐಟಿ ಕಂಪನಿಗಳ (ವಿಪ್ರೊ, ಇನ್ಫೋಸಿಸ್, ಸತ್ಯಂ, ಎಚ್‌ಸಿಎಲ್) ತಮ್ಮ ಬಿಪಿಒ ವಿಭಾಗ ಅಥವಾ ಪ್ರತ್ಯೇಕ ಕಂಪನಿಗಳನ್ನು ಸ್ಥಾಪಿಸಿವೆ. ವಿಪ್ರೊದ 'ಸ್ಪೆಕ್ಟ್ರಾಮೈಂಡ್', ಇನ್ಫೋಸಿಸ್‌ನ 'ಪ್ರೊಜಿಒನ್', ಸತ್ಯಂನ 'ನಿಪುಣ' ಇಂತಹ ಕಂಪನಿಗಳ ಉದಾಹರಣೆಗಳು. ಇವಲ್ಲದೆ ಜನರಲ್ ಇಲೆಕ್ಟ್ರಿಕ್, ಹೆಚ್.ಎಸ್.ಬಿ.ಸಿ. ಅಮೆರಿಕನ್ ಎಕ್ಸ್‌ಪ್ರೆಸ್, ಹೆಚ್.ಇ., ಐಬಿಎಂ. ನಂತಹ ದೊಡ್ಡ ಕಂಪನಿಗಳು ತಮ್ಮದೇ 'ಬಿಪಿಒ' ವಿಭಾಗಗಳನ್ನು ನಡೆಸುತ್ತವೆ. ಒಳ್ಳೆಯ ಲಾಭ, ವೇಗದ ಬೆಳವಣಿಗೆಯಿಂದಾಗಿ ಬಿಪಿಒ ಕಂಪನಿಗಳು ಈಗಾಗಲೇ ಐಟಿ ಉದ್ಯಮ ನೆಲೆಸಿರುವ ನಗರ ಕೇಂದ್ರಗಳಲ್ಲೇ, ಪ್ರಮುಖವಾಗಿ ನಡೆದಿವೆ. ದೆಹಲಿ-ಮುಂಬಯಿ, ಬೆಂಗಳೂರು,

> **ಕರ್ನಾಟಕದಲ್ಲಿ ಬಿಪಿಒ-ಐಟಿಇಎಸ್ ಉದ್ಯಮ**
>
> ಕರ್ನಾಟಕ ಈ ಉದ್ಯಮದ ತವರೂರು. ಐಟಿ ಸೇವಾಕ್ಷೇತ್ರದಂತೆ. ಮೊದಲ ಬಿಪಿಒ ಕಂಪನಿ ಎಂದು ಹೇಳಲಾದ ಸ್ಪೆಕ್ಟ್ರಾಮೈಂಡ್ (ಈಗ ವಿಪ್ರೊ ಒಡೆತನದ ಕಂಪನಿ)ನ್ನು ರಾಮನ್ ರಾಯ್‌ಸ್ಥಾಪಿಸಿದ್ದು ಬೆಂಗಳೂರಿನಲ್ಲಿ. ಇದಲ್ಲದೆ ಇತರ ಬಿಪಿಒ ಕಂಪನಿಗಳಾದ ಪ್ರೊಜಿಒನ್(ಇನ್ಫೋಸಿಸ್ ಒಡೆತನದ್ದು), ಹೆಚ್.ಎಸ್.ಬಿ.ಸಿ., ಅಮೆರಿಕನ್ ಎಕ್ಸ್‌ಪ್ರೆಸ್, ಹೆಚ್.ಪಿ, ಕನ್ವರ್ಜಿಸ್, ಐಸಿಐಸಿಐ ಒನ್ ಪೋರ್ಟ್, ಎಂಫಸಿಸ್, ಬೆಂಗಳೂರಿನಲ್ಲಿ ನೆಲೆಸಿವೆ. ಮೂರನೇ ಒಂದು ಭಾಗಕ್ಕೂ ಹೆಚ್ಚು ಉದ್ಯೋಗಗಳ, ವಹಿವಾಟು ಕರ್ನಾಟಕದಲ್ಲೇ ಆಗುವುದು. ಇದರಲ್ಲಿ ಸಿಂಹಪಾಲು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರಿಗೆ ಸಣ್ಣ ಭಾಗ ಹೋಗಿದೆ.

ಹೈದರಬಾದ್, ಚೆನ್ನೈ, ಕೊಲ್ಕತಾ, ಪುಣೆ. ಇತ್ತೀಚೆಗೆ ಇತರ ನಗರಗಳಿಗೆ ಹರಡುವ ಸೂಚನೆಗಳು ಕಾಣುತ್ತಿದೆ. ಸದ್ಯಕ್ಕೆ ಬಿಪಿಒ-ಐಟಿಇಎಸ್ ಉದ್ಯಮದ ಸಿಂಹಪಾಲು ಕಾಲ್ ಸೆಂಟರ್‌ಗಳೇ. ವಹಿವಾಟು ಮತ್ತು ಉದ್ಯೋಗಗಳು ದೊಡ್ಡ ಭಾಗ ಕಾಲ್ ಸೆಂಟರ್ಸ್‌ನಿಂದ ಬರುವಂಥವು.

ಜಾಗತೀಕರಣ ತಂದ ಹೊಸ 'ಉದ್ಯಮ'

ಜಾಗತೀಕರಣ ಎಲ್ಲರಿಗೂ ಗೊತ್ತಿರುವ ಹಾಗೆ ಮೂರನೇ ಜಗತ್ತಿನ ದೇಶಗಳಲ್ಲಿ ಇರುವ ಉದ್ಯಮಗಳನ್ನು ದುರ್ಬಲಗೊಳಿಸಿ ನಾಶ ಮಾಡುತ್ತದೆ. ಭಾರತದಲ್ಲೂ ಜಾಗತೀಕರಣ ಇದನ್ನೆ ಮಾಡಿ ಈಗಾಗಲೇ ಹಲವು ಕೈಗಾರಿಕಾ ಉತ್ಪಾದನಾ ಕ್ಷೇತ್ರಗಳು ಬಹಳ ದುರ್ಬಲಗೊಂಡಿವೆ ಅಥವಾ ನಾಶವಾಗಿವೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಬಿಪಿಒ ಜಾಗತೀಕರಣವೇ ಹುಟ್ಟಿಹಾಕಿದ 'ಉದ್ಯಮ'. ಆದರೆ ಇದು ನಿಜವಾದ ಅರ್ಥದಲ್ಲಿ 'ಉದ್ಯಮ' ಅಲ್ಲ. ಒಂದು ಸೇವಾಕ್ಷೇತ್ರ. ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿಸಿರುವ ಸೇವಾಕ್ಷೇತ್ರ.

ಈ ಹೊಸ ಉದ್ಯಮದ ಬೆಳವಣಿಗೆ ಉಳಿದು ಕೊಳ್ಳಬಹುದಾದದ್ದೇ?

ಈ ಉದ್ಯಮವು ಎದುರಿಸುತ್ತಿರುವ ಸಮಸ್ಯೆಗಳೇನು? ಸಾಧ್ಯತೆಗಳೇನು? ಈ ಉದ್ಯಮದ ದೊಡ್ಡ ಭಾಗ (ಕಾಲ್‌ಸೆಂಟರ್ ಸೇರಿದಂತೆ ಹಲವು ಭಾಗಗಳು) ಇಂಗ್ಲಿಷ್ (ಮಾತನಾಡ)ಬಲ್ಲ ಶಿಕ್ಷಿತ ಜನರ ಲಭ್ಯತೆ, ಕಡಿಮೆ ವೆಚ್ಚ(ಡಾಲರ್-ರೂಪಾಯಿ ವಿನಿಮಯ ದರ), ಮತ್ತು ಅಮೆರಿಕನ್ - ಯುರೋಪುಗಳ ಹಗಲಿನಲ್ಲಿ(ಅಂದರೆ ನಿಮ್ಮ ರಾತ್ರಿ ಪಾಳಿಯಲ್ಲಿ) ಕೆಲಸ ಮಾಡಲು ಸಿದ್ಧರಿರುವ ಅಗತ್ಯ ಪ್ರಮಾಣದ ಜನರ ಲಭ್ಯತೆ ಮೇಲೆ ಮುಖ್ಯವಾಗಿ ಅವಲಂಬಿಸಿದೆ. ಇವೇ ಸಮಸ್ಯೆ-ಸಾಧ್ಯತೆ ಎರಡರ ಮೂಲ ಸಹ.

ನಮ್ಮ ದೇಶದಲ್ಲಿ ಇಂಗ್ಲಿಷ್ ಬಲ್ಲ ಶಿಕ್ಷಿತ ಜನರ ಕೊರತೆ ಇಲ್ಲದಿದ್ದರೂ, ಇಂಗ್ಲಿಷ್ ಮಾತನಾಡಬಲ್ಲ ಅಮೇರಿಕನ್ನರು- ಬ್ರಿಟೀಷರು- ಆಸ್ಟ್ರೇಲಿಯನ್ನರು (ಅವರ ಅಸಂಖ್ಯಾತ ಸ್ಥಳೀಯ ಸೊಗಡು - ಪ್ರಭೇದಗಳ ಜತೆ) ಮಾತನ್ನು ಆಲಿಸಿ ಅರ್ಥ ಮಾಡಿಕೊಳ್ಳಬಲ್ಲವರ ಕೊರತೆ ಇದೆ. ಇದಕ್ಕಾಗಿ ಬಿಪಿಒ ಕಂಪೆನಿಗಳು ಸಾಮಾನ್ಯವಾಗಿ ತರಬೇತಿ ಕೊಡಬೇಕಾಗುತ್ತದೆ. ಇದನ್ನು ಬಿಪಿಒ ಉದ್ಯಮ ಸಾಕಷ್ಟು ಚೆನ್ನಾಗಿಯೇ ಎದುರಿಸಿದೆ ಎಂದು ಹೇಳಬೇಕು. ಇಂಗ್ಲೀಷ್ ಅಮೇರಿಕನ್ನರ 'ಇಸ್ಟೈಲ್'ನಲ್ಲಿ ಮಾತನಾಡುವುದು ಮಾತ್ರವಲ್ಲ, ಅವರ ಮಾತು ಅರ್ಥ ಮಾಡಿಕೊಳ್ಳಲು ಬೇಕಾದ ಸಾಂಸ್ಕೃತಿಕ ಸಾಮಾಜಿಕ - ಪ್ರಾಕೃತಿಕ ಜ್ಞಾನವನ್ನೂ ಕೊಡಲಾಗುತ್ತದೆ. ನಿಜವಾಗಿಯೂ ಹೇಳಬೇಕಾದರೆ ಬಿಪಿಒ ಉದ್ಯಮ ಇದನ್ನು ಅತಿರೇಕಕ್ಕೆ ತೆಗೆದುಕೊಂಡು ಹೋಗಿ ಸಮಸ್ಯೆಗಳಿಗೆ ಕಾರಣವಾಗಿದೆ. (ವಿವರಗಳಿಗೆ 'ಸೌಮ್ಯ ಸುಸಾನ್ ಆದಾಗ.......' ಬಾಕ್ಸ್ ನೋಡಿ)

'ನಡುರಾತ್ರಿ ಕೂಲಿಗಳು'


ಎಲ್ಲಕ್ಕಿಂತಲೂ ಹೆಚ್ಚಿನ ಗಂಭೀರ ಸಮಸ್ಯೆ ರಾತ್ರಿ ಪಾಳಿಯದ್ದು. ಕಾಲ್‌ಸೆಂಟರ್ ಮತ್ತು ಇತರ ಬಿಪಿಒ ಕೆಲಸಗಳಲ್ಲಿ ಗ್ರಾಹಕರು ಅಥವಾ ಮೂಲ ಕಂಪನಿಯ ಇತರ ವಿಭಾಗಗಳ ಜತೆ ಮಾತನಾಡಬೇಕು - ವ್ಯವಹರಿಸಬೇಕು. ಹೆಚ್ಚಾಗಿ ಅವರ ಹಗಲಲ್ಲಿ, ಅಂದರೆ ನಮ್ಮ ರಾತ್ರಿಯಲ್ಲಿ. ಇದರಿಂದ ಬಹುಪಾಲು ಕೆಲಸ ರಾತ್ರಿ ಪಾಳಿಯಲ್ಲಿ. ಗ್ರಾಹಕರು, ತಮ್ಮ ಕಂಪನಿಯ ವಿಭಾಗಗಳು ಮುಖ್ಯವಾಗಿ ಅಮೆರಿಕ, ಯುರೋಪ್, ಆಸ್ಟ್ರೇಲಿಯಾಗಳಲ್ಲಿ ಇರುವುದರಿಂದ. ಸತತ ರಾತ್ರಿ ಪಾಳಿ ಕೆಲಸ ದೇಹದ ಸ್ವಾಭಾವಿಕ ಕ್ರಮದಲ್ಲಿ ತೀರ ಏರುಪೇರು ಮಾಡುವುದರಿಂದ, ಅಕಾಲಿಕ ನಿದ್ದೆ - ಆಹಾರ ಸೇವನೆಯಿಂದ ತೀವ್ರತರದ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ ಎಂಬುದು ಹಿಂದಿನಿಂದಲೂ ಗೊತ್ತಿರುವ ಸಂಗತಿ. ಹಿಂದೆ ಯಾವ ಉದ್ಯಮದಲ್ಲೂ ಇಡೀ ಕೆಲಸವೇ ರಾತ್ರಿ ಪಾಳಿಯಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇದ್ದದ್ದಿಲ್ಲ. ಸಾಮಾನ್ಯವಾಗಿ ಅಗತ್ಯ ಸೇವೆ ಅಥವ ಪೂರ್ಣ ಸ್ವಯಂ-ಚಾಲಿತ ಘಟಕಗಳಲ್ಲಿ ಅತ್ಯಗತ್ಯ ಉಸ್ತುವಾರಿಗೆ ಮಾತ್ರ ರಾತ್ರಿ ಪಾಳಿ ಇರುತ್ತಿತ್ತು. ಸೀಮಿತ ಸಂಖ್ಯೆಯಲ್ಲಿ. ಅದೂ ಎರಡು - ಮೂರು ವಾರಕ್ಕೊಮ್ಮೆ ಒಂದು ವಾರ ರಾತ್ರಿ ಪಾಳಿ ಇರುತ್ತಿತ್ತು. ಕಾಲ್ ಸೆಂಟರ್ ಉದ್ಯಮದಲ್ಲಿನ ರಾತ್ರಿ ಪಾಳಿಯ ತೀವ್ರ ಪರಿಣಾಮಗಳು ಒಬ್ಬ ವ್ಯಕ್ತಿ ಮೇಲೆ ಬೀರುವ ಪರಿಣಾಮಗಳು ಈಗಾಗಲೇ ಗೊತ್ತಾಗಿವೆ. ಕಾಲ್ ಸೆಂಟರ್ ಉದ್ಯೋಗದಲ್ಲಿ ಸರಾಸರಿ ಒಂದು ವರ್ಷದ ನಂತರ, ಉದ್ಯೋಗಿಗಳು ಕೆಲಸ ಬಿಡುತ್ತಾರೆ. ಯಾವುದೇ ಅವಧಿಯಲ್ಲಿ ಕೆಲಸ ಬಿಡುವವರ ಸಂಖ್ಯೆ ಶೇಕಡಾ 40-50 ಇದೆ. ಇದು ಈ ಉದ್ಯಮ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಸಹ. ಅಗಾಧ ಜನಸಂಖ್ಯೆ - ನಿರುದ್ಯೋಗ, ಇರುವ ನಮ್ಮ ದೇಶದಲ್ಲಿ

> **ಬಿಪಿಒ ವಿದೇಶಿ ಒಡೆತನದತ್ತ**
>
> [illegible] ಒಡೆತನದ [illegible] ಕಂಪನಿಗಳಲ್ಲಿ [illegible] ಈಗಾಗಲೇ, [illegible] ಬಹುರಾಷ್ಟ್ರೀಯ ಕಂಪನಿಗಳವು. [illegible] ಏರುವ ಲಕ್ಷಣಗಳು ಇವೆ. [illegible] ದೊಡ್ಡ ಭಾರತೀಯ ಬಿಪಿಒ ಕಂಪನಿಯಾದ ದಕ್ಷ್ ಐಬಿಎಂ ಕೊಂಡುಕೊಂಡಿತು. ವಿದೇಶಿ ಒಡೆತನ ಇದ್ದರೇನು ಅಂದಿರಾ? ಇಲ್ಲಿ ವಹಿವಾಟಿನಲ್ಲಿ ಬರುವ ದೊಡ್ಡ ಲಾಭದ ದೊಡ್ಡ ಭಾಗ ಭಾರತದಲ್ಲಿ ಹೂಡಿಕೆ ಆಗುವುದಿಲ್ಲ. ಆ ಕಂಪನಿಗಳ ಲಾಭ ಹೆಚ್ಚಿಸಲು ಸಹಾಯಕವಾಗುತ್ತದೆ.

ಈ ಉದ್ಯಮಕ್ಕೆ ಹೊಸ 'ಬಕ್ರಾ'ಗಳು ಸಿಗುತ್ತಾರೆ. ಸತತ ರಾತ್ರಿ ಪಾಳಿ ಮಹಿಳೆಯರಲ್ಲಿ ಹಾರ್ಮೋನ್ ವ್ಯತ್ಯಯಗಳನ್ನು ಹಾಗೂ ಇನ್ನಷ್ಟು ಹೆಚ್ಚಿನ ಗಂಭೀರ ಪರಿಣಾಮ ಆರೋಗ್ಯದ ಮೇಲೆ ಬೀರುತ್ತದೆ ಎಂದು ತಿಳಿದು ಬಂದಿದೆ. (ರಾತ್ರಿ ಪಾಳಿ ತರುವ ಹೊಸ ರೋಗ- ಬಾಸ್'!-ಬಾಕ್ಸ್ ನೋಡಿ)

ರಾತ್ರಿ ಪಾಳಿ ಮಾತ್ರವಲ್ಲ, ಇನ್ನೂ ಹಲವು ರೀತಿಯಲ್ಲಿ ಕಾಲ್ ಸೆಂಟರ್ - ಬಿಪಿಒ ಉದ್ಯಮ ಅಲ್ಲಿನ ಉದ್ಯೋಗಿಗಳನ್ನು 'ನಡು ರಾತ್ರಿ ಕೂಲಿ'ಯಾಗಿಸಿದೆ. ವೇತನ ಸರಾಸರಿಯಾಗಿ ಉತ್ತಮವಾಗಿದೆ. ಉದ್ಯೋಗಿಗಳಿಗೆ ಸಾರಿಗೆ ಸವಲತ್ತು ಕೊಡುತ್ತಾರೆ (ಇದು ರಾತ್ರಿ ಪಾಳಿ, ಕಾಲ್ ಸೆಂಟರ್‌ಗಳು ದೂರವಿರುವುದರಿಂದ ಅನಿವಾರ್ಯ ಎನ್ನುವುದನ್ನು ಮರೆಯುವಂತಿಲ್ಲ) ಆದರೆ ಹಲವು ಕಾರ್ಮಿಕರ/ ಉದ್ಯೋಗಿಗಳ ಹಕ್ಕು ರಕ್ಷಣೆಗೆ ಇರುವ ಕಾನೂನುಗಳನ್ನು ಉದ್ಯಮ ಉಲ್ಲಂಘಿಸುತ್ತಿದೆ. ಅದನ್ನು ಈಗ ಕಾನೂನು ತಿದ್ದುಪಡಿಗಳಿಂದ ಸಂಭಾಳಿಸಲಾಗಿದೆ.

ದಿನಕ್ಕೆ ಎಂಟು ಗಂಟೆ ಮಿತಿ, ತುಂಡು ಪಾಳಿಗಳು, ರಾಷ್ಟ್ರೀಯ ರಜಾ ದಿನ - ಹಬ್ಬದ ದಿನಗಳಲ್ಲಿ ಕಡ್ಡಾಯ ರಜಾ, ಓವರ್‌ಟೈಮ್ - ಇತ್ಯಾದಿಗಳಿಗೆ ಅನ್ವಯವಾಗುವ ಕಾನೂನನ್ನು ಗಾಳಿಗೆ ತೂರಲಾಗಿದೆ. ಅಥವಾ ಬದಲಿಸಲಾಗಿದೆ. ದಿನಕ್ಕೆ ಪೂರೈಸಬೇಕಾದ ಕರೆಗಳನ್ನು ಸತತವಾಗಿ ಏರಿಸುತ್ತಾ ಎರಡು ಕರೆಗಳ ನಡುವಣ ಅಂತರ ಕಡಿಮೆ ಮಾಡುತ್ತಾ ಹೋಗುವುದು - ಕೆಲಸದ ಒತ್ತಡ ಏರಿಸುವುದು ನಡೆಯುತ್ತಿದೆ. ಕೆಲಸದ ಪರಿಸ್ಥಿತಿ ಮತ್ತು ಇತರ ಹಕ್ಕುಗಳ ಬಗ್ಗೆ ಚರ್ಚೆ, ಸಾಮೂಹಿಕ ಚೌಕಾಶಿಯ ಅಭಾವ - ಕಾಲ್‌ಸೆಂಟರ್ ಉದ್ಯೋಗಿಗಳನ್ನು 'ನಡುರಾತ್ರಿ ಕೂಲಿ'ಗಳಾಗಿಸಿದ ಇತರ ಕಾರಣಗಳು. ಕಾಲ್‌ಸೆಂಟರ್‌ಗಳಲ್ಲಿ



ಮೂರನೇ ಎರಡು ಭಾಗ ಮಹಿಳೆಯರು ದುಡಿಯುತ್ತಿದ್ದು, ಲೈಂಗಿಕ ಕಿರುಕುಳದಂತಹ ಸಮಸ್ಯೆ ಸಹ ವ್ಯಾಪಕವಾಗಿ ಇದೆ.

ಬಿಪಿಒ ಉದ್ಯಮ - ಮುಂದೇನು?

ಇವೆಲ್ಲದರ ನಡುವೆ ಬಿಪಿಒ [illegible] ಉದ್ಯಮವಾಗಿ ದಾಪುಗಾಲಿನಲ್ಲಿ ಮುನ್ನಡೆಯುತ್ತಿವೆ. ಬಿಪಿಒ ಕಂಪನಿಗಳು ಅದರ ಮಾಲಿಕರಿಗೆ ಒಳ್ಳೆ ಲಾಭ ಗಳಿಸುತ್ತಿವೆ. ಜಗತ್ತಿನ ದೊಡ್ಡ ಬಹುರಾಷ್ಟ್ರೀಯ

ಪುಟ 8 ಕ್ಕೆ

ಸೌಮ್ಯ ಸುಸಾನ್ ಆದಾಗ....

ಕಾಲ್‌ಸೆಂಟರ್‌ಗೆ ಕರೆ ಮಾಡುವ ಅಮೆರಿಕನ್ನರಿಗೆ - ಬ್ರಿಟಿಷರಿಗೆ ತಮಗೆ ಅಮೆರಿಕನ್ - ಬ್ರಿಟಿಷರೇ ಉತ್ತರ ಕೊಡುತ್ತಿದ್ದಾರೆ ಎಂಬ 'ಭ್ರಮೆ' ಹುಟ್ಟಿಸಲು ಉದ್ಯೋಗಿಗಳಿಗೆ ಅಮೆರಿಕನ್ ಉಚ್ಚಾರಣೆ ಮಾತ್ರವಲ್ಲ, ಅಮೆರಿಕನ್ ಹೆಸರು, ಮತ್ತು ವ್ಯಕ್ತಿತ್ವ ಸಹ ಹೊರಿಸಲಾಗುತ್ತಿದೆ. ಬಿಪಿಒ ಉದ್ಯಮ ಸೌಮ್ಯಳಿಗೆ ಅಮೆರಿಕನ್ 'ಠಸ್‌ಪುಸ್' ಇಂಗ್ಲೀಷ್ ಕಲಿಸುವುದು ಮಾತ್ರವಲ್ಲ, ಅವಳನ್ನು 'ಸೂಸೇನ್' ಮಾಡಿಬಿಡುತ್ತದೆ. 'ಸೂಸೇನ್'ಗೊಂದು ಅಮೆರಿಕನ್ ಊರು ಬಾಯ್‌ಫ್ರೆಂಡ್‌ನ ಹೆಸರು, ಕಳೆದ ವಾರಾಂತ್ಯದಲ್ಲಿ ಹೋದ 'ಡಿಸ್ಕೊ', ಇಷ್ಟವಾದ ತಿಂಡಿ/ಡ್ರಿಂಕ್ಸ್, ಇಷ್ಟವಾದ ಹೀರೋ, ರಾಕ್ ಸಂಗೀತಕಾರ ಈ ರೀತಿ ಬೇರೆ ವ್ಯಕ್ತಿತ್ವವೇ ಸೃಷ್ಟಿಸಿಬಿಡುತ್ತದೆ. ಕಾಲ್‌ಸೆಂಟರ್‌ಗೆ ಕರೆ ಮಾಡಿದ ಗ್ರಾಹಕರು ಹುಡುಗಿಗಾದರೆ ಸೌಮ್ಯ ತಾನು 'ಸೂಸಾನ್' ಆಗಿ ಉತ್ತರ ಕೊಡುತ್ತಾಳೆ. ಹಗಲಿನ 'ಸೌಮ್ಯ', ರಾತ್ರಿ 'ಸೂಸೇನ್' ಆಗಿ ಬಿಡುತ್ತಾಳೆ. ಬರಬರುತ್ತಾ 'ಸೌಮ್ಯ'ಳಿಗೆ ತಾನು ಸೌಮ್ಯ ಯಾವಾಗ, ಸೂಸೇನ್ ಯಾವಾಗ (ಬಹುಶಃ ಹಗಲು ಯಾವುದು ರಾತ್ರಿ ಯಾವುದು ಅಂತ ಸಹ) ಎಂಬ ಗೊಂದಲ ಬಂದು ಬಿಡುತ್ತದೆ. ಇದು ಮೊದಲ ನೋಟಕ್ಕೆ ಕಾಣುವಂಥದ್ದಕ್ಕಿಂತ ಗಂಭೀರ ಸ್ವರೂಪದ ಸಮಸ್ಯೆ ಆಗಿದೆ. ಈ 'ದ್ವಂದ್ವ' ಪರಿಹಾರ ಹುಡುಕುತ್ತಾ ಪೂರ್ತಿ 'ಸೂಸಾನ್' ಆದವರೂ ಇದ್ದಾರೆ. ಎರಡೂ ತಾಕಲಾಟ ತಾಳಲಾರದೆ ಕೆಲಸ ಬಿಟ್ಟವರೂ ಇದ್ದಾರೆ.

ಬಾಗೇಪಲ್ಲಿ ಕೊತ್ತಕೋಟೆ

ಕೊಲೆಗಡುಕ ಕಾಂಗ್ರೆಸ್‌ನಿಂದ ಕಾಂ. ರಘು ಕೊಲೆ

ಸಿಪಿಐ(ಎಂ) ಪಕ್ಷದ ಮುನ್ನಡೆಯನ್ನು ಸಹಿಸದೆ ಹತಾಶರಾಗಿರುವ ಕಾಂಗ್ರೆಸ್ ಪಕ್ಷದ ನಾಯಕರು ಬಾಗೇಪಲ್ಲಿ ತಾಲೂಕಿನಲ್ಲಿ ಕೊಲೆಗಡುಕ ರಾಜಕೀಯಕ್ಕೆ ಇಳಿದಿದ್ದಾರೆ. ಅತ್ಯಂತ ಸೌಮ್ಯ ಸ್ವಭಾವದ ಜನಾನುರಾಗಿ, ದಿಟ್ಟತನದ ನಾಯಕ ಕಾಂ. ರಘುರವರ ಕಗ್ಗೊಲೆಯನ್ನು ಸುಫಾರಿ ಕೊಲೆಗಡುಕರಿಂದ ಮಾಡಿಸಿದ್ದಾರೆ. ಕಾಂ. ರಘುರವರನ್ನು ಕೊಂದ ಮಾತ್ರಕ್ಕೆ ಕಮ್ಯುನಿಸ್ಟ್ ಆಂದೋಲನ ನಿಂತು ಹೋಗುವುದೇ? ಇಲ್ಲ. ಹತ್ಯೆಯ ಸಂಚುಗಳ ಬಗ್ಗೆ ವರದಿ

ಬಾಗೇಪಲ್ಲಿ ತಾಲ್ಲೂಕಿನ ಕೊತ್ತಕೋಟೆ ಗ್ರಾಮಪಂಚಾಯತಿ ಪ್ರಗತಿ ಪರ ಚಳುವಳಿ ಎದ್ದುಬಂದ ಪ್ರದೇಶ. ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಅತ್ಯಂತ ಬಲಿಷ್ಟವಾಗಿ ಬೆಳೆಯುತ್ತಿರುವ ಪಂಚಾಯತಿ. ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳಲ್ಲಿಯೂ ಪಕ್ಷದ ಶಾಖೆಗಳು, ರೈತ ಸಂಘ, ಯುವಜನ ಸಂಘಟನೆ, ಕೃಷಿಕೂಲಿಕಾರರ ಸಂಘಟನೆಗಳು ಬೆಳೆಯುತ್ತಿವೆ. ಇದನ್ನು ಸಹಿಸಲಾರದ ಕಾಂಗ್ರೆಸ್ ಪಕ್ಷದ ನಾಯಕರು ಇಡೀ ಪಂಚಾಯತಿಯ ಜನತೆಯನ್ನು ಭಯಭೀತಿಗೊಳಿಸಲು ಸಿಪಿಐ(ಎಂ)ನ ಪ್ರಮುಖ ಕಾರ್ಯಕರ್ತರನ್ನು ಕೊಲ್ಲುವ ಕಾರ್ಯಕ್ರಮವನ್ನು ಹಾಕಿಕೊಂಡು ದೌರ್ಜನ್ಯವನ್ನು ಎಸಗುವ ಮುಖಾಂತರ ಪಕ್ಷದ ಮುನ್ನಡೆಯನ್ನು ಕುಂಠಿತ ಗೊಳಿಸಲುವಿಫಲ ಪ್ರಯತ್ನ ನಡೆಸುತ್ತಿದ್ದಾರೆ.

ಅದರ ಪರಿಣಾಮವಾಗಿಯೇ ಕಳೆದ ಜೂನ್ 16 ರಂದು ರಾತ್ರಿ ಸುಮಾರು 12 ಗಂಟೆ ಸಮಯದಲ್ಲಿ ಪಕ್ಷದ ಕೊತ್ತಕೋಟೆ ಗ್ರಾಮ ಶಾಖೆಯ ಅತ್ಯಂತ ನಿಷ್ಟ ಸದಸ್ಯ, ಸೌಮ್ಯ ಸ್ವಭಾವದ ಮುಗ್ಧ ಮನಸ್ಸಿನ ಕಾಂ. ರಾಘವೇಂದ್ರ ಪ್ರಸಾದರನ್ನು ಕಾಂಗ್ರೆಸ್ ಕೊಲೆಪಾತತಿಗಳು ಸುಫಾರಿ ಕೊಲೆಗಾರರಿಂದ ಕೊಚ್ಚಿ ಕೊಲೆ ಮಾಡಿಸಿದ್ದಾರೆ. ಸೆಖೆಯ ತಾಪಕ್ಕೆ ಮನೆಯ ಮೇಲೆ ಮಲಗಿದ್ದ ಕಾಂ. ರಾಘವೇಂದ್ರರವರನ್ನು ಸುಮಾರು ನಾಲ್ಕೈದು ಜನ ಕೊಲೆಗಾರರು ಮಚ್ಚಿನಿಂದ ಹೊಡೆದು ಕಡಿದಿದ್ದಾರೆ. ಕಾಲು ಹಿಡಿದು ಅಂಗಲಾಚಿದ ಹೆಂಡತಿಯನ್ನು ಸಹ ಮಾರಕಾಸ್ತ್ರಗಳಿಂದ ಗಾಯಗೊಳಿಸಿ ಹೋಗಿದ್ದಾರೆ.

ಅಂದುರಾತ್ರಿಯೇ ಕಾಂ. ರಾಘವೇದ್ರ ಪ್ರಸಾದ್(ರಘು) ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಯಿತು. ಆದರೆ ತೀವ್ರ ಏಟುಗಳಿಂದ ರಕ್ತಸಿಕ್ತವಾಗಿದ್ದ ಸಂಗಾತಿಯನ್ನು ಬದುಕಿಸಲು ಒಂಭತ್ತು ದಿನ ಹೋರಾಟ ನಡೆಸಿದರೂ ಪ್ರಜ್ಞೆ ಕೂಡ ಇಲ್ಲದೆ ಕೊನೆಗೆ ಜೂನ್ 24 ರಂದು ಸಾವು ಬರಸಿಡಿಲಿನಂತೆ ಅಪ್ಪಳಿಸಿ ಅಪಹರಿಸಿಬಿಟ್ಟಿತು.

ಅಂದೇ ರಾತ್ರಿ 10 ಗಂಟೆಗೆ ಕೊತ್ತಕೋಟೆಯ ಗ್ರಾಮಕ್ಕೆ ಕಾಂ. ರಘುರವರ ಶವ ಸೇರಿದಾಗ ಶೋಕಸಾಗರದಲ್ಲಿ ಗ್ರಾಮ ಮುಳುಗಿಹೋಯಿತು. ಈ ಅಮಾನವೀಯ ಕೃತ್ಯವನ್ನು ಖಂಡಿಸುತ್ತಾ ಕೊಲೆಪಾತಕ ಕಾಂಗ್ರೆಸ್ ಪಕ್ಷಧ ಮುಖಂಡರಿಗೆ ಜನತೆಯು ಇಡಿ ಶಾಪ ಹಾಕಿದರು. ಇಪ್ಪತ್ತೈದರಂದು ಮಧ್ಯಾಹ್ನ 12 ಗಂಟೆಗೆ ಸಾವಿರಾರು ಜನರ ಎದುರು ಅಂತ್ಯಸಂಸ್ಕಾರ ಮಾಡಿ ಹೋರಾಟಗಾರನಿಗೆ ವಿದಾಯಹೇಳಲಾಯಿತು.

ದುಃಖತಪ್ತ ಕುಟುಂಬವನ್ನು ಸಾಂತ್ವನಗೊಳಿಸಲು ಬಾಗೆಪಲ್ಲಿ ಕ್ಷೇತ್ರದ ಸಿಪಿಐ(ಎಂ) ಶಾಸಕರು, ಜಿಲ್ಲಾ ಕಾರ್ಯದರ್ಶಿಗಳೂ ಆದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು, ರಾಜ್ಯ ಸಮಿತಿ ಸದಸ್ಯರಾದ ಕಾಂ. ವೆಂಕಟಸ್ವಾಮಿರೆಡ್ಡಿಯವರು, ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಮುಖಂಡರು ಹಾಜರಿದ್ದರು.

ಉತ್ತಮ ಸಂಗಾತಿ

ಕಾಂ. ರಘು ಅತ್ಯಂತ ಸೌಮ್ಯ ಸ್ವಭಾವದ ಸರಳ ವ್ಯಕ್ತಿ. ಪ್ರಗತಿಪರ ಚಳುವಳಿಗೆ ಆಕರ್ಷಿತರಾಗಿ ಸಿಪಿಐ(ಎಂ) ಪಕ್ಷವನ್ನು ಸೇರಿದವರು. ಪಕ್ಷದ ನಿಷ್ಟಾವಂತ ಕಾರ್ಯಕರ್ತನಾಗಿ ಇಡೀ ಗ್ರಾಮಪಂಚಾಯತಿಯಲ್ಲಿ ಬೆಳೆಯುತ್ತಿದ್ದ ಸಂಗಾತಿ. ಕೇವಲ 36 ವರ್ಷಗ ರಘು ಕೊತ್ತಕೋಟ ಗ್ರಾಮಪಂಚಾಯತ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಪಕ್ಷದ ಹೋರಾಟದಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸುತ್ತಾ, ಮುಂದಿನ ದಿನಗಳಲ್ಲಿ ಪಕ್ಷದ ಉತ್ತಮ ನಾಯಕರಲ್ಲಿ ಒಬ್ಬರಾಗುವ ಲಕ್ಷಣಗಳಿದ್ದ ಸಂಗಾತಿ. ಇಡೀ ಗ್ರಾಮ ಪಂಚಾಯತಿಯಲ್ಲಿ ಪಕ್ಷವನ್ನು ಮುನ್ನಡೆಸುವ, ಹೋರಾಟದ ಕಿಚ್ಚು ಇದ್ದ ಸಂಗಾತಿ. ಇಂತಹ ಭರವಸೆಯ ಸಂಗಾತಿ ರಘುವನ್ನು ಮುಗಿಸಬೇಕೆಂದು ಗ್ರಾಮದ ಕಾಂಗ್ರೆಸ್ ಗೂಂಡಾಗಳು ಸಂಚುಹೂಡಿದ್ದರು. ಸಂಚಿನ ಭಾಗವಾಗಿ ಆಂಧ್ರದ ಸುಫಾರಿ ಕೊಲೆಗಾರರಿಂದ ಕೊಲೆ ಮಾಡಿಸಲು ಮೂವತ್ತು ಸಾವಿರ ರೂ.ಗಳಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಸುಮಾರು ಒಂದು ತಿಂಗಳ ಕಾಲ ಹೊಂಚು ಹಾಕಿದ್ದ ಕೊಲೆಗಡುಕರು ರಘುವಿನ ದಿನಚರಿಯನ್ನು ಅರಿತರು. ರಾತ್ರಿ ಸೆಖೆಯಿಂದಾಗಿ ತನ್ನ ಕುಟುಂಬದ ಜೊತೆ ಮನೆಯ ಮೇಲೆ ಮಲಗುತ್ತಿದ್ದನ್ನು ಕಂಡರು. ಜೂನ್ 15 ರಂದು ರಾತ್ರಿ ಸುಮಾರು 2 ಗಂಟೆ ಸಮಯದಲ್ಲಿ ಪಾತಕಿಗಳು ರಘುವಿನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದರು. ಹೆಂಡತಿ ಮಕ್ಕಳನ್ನು ತಬ್ಬಲಿ ಮಾಡಿದರು. ಪಕ್ಷದ ಪ್ರಮುಖ ಸಂಗಾತಿಯನ್ನುಇಲ್ಲದಂತೆ ಮಾಡಿದರು.

ಎಚ್ಚರಿಕೆ

ಕೊಲೆಗಳಿಂದ, ದೌರ್ಜನ್ಯದಿಂದ ಸಿಪಿಐ(ಎಂ) ಪಕ್ಷವನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಎನ್ನುವುದನ್ನು ಕಾಂಗ್ರೆಸ್ ಪಕ್ಷದ ದುಷ್ಟರು ಅರಿಯಬೇಕು. ಕಾಂ.ರಘುರವರು ಯಾವ ಆಶಯಗಳನ್ನು ಇಟ್ಟುಕೊಂಡು ಕಮ್ಯುನಿಸ್ಟ್ ಪಕ್ಷದಲ್ಲಿ ಶ್ರಮಿಸುತ್ತಿದ್ದರೋ ಅದೇ ಆಶಯಗಳನ್ನು ಮುಂದುವರಿಸುತ್ತೇವೆ ಎಂದು ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದ ಸಾವಿರಾರ ಜನರ ಒಕ್ಕೊರಲಿನ ಧ್ವನಿಯಾಗಿತ್ತು.

ಗೂಂಡಾ ಸಂಸತಿ ಎದುರಿಸಿಯೇ ಸಿದ್ಧ

ಕಾಂಗ್ರೆಸ್ ಪಕ್ಷದ ನೀಚ ಸಂಸತಿ, ಹೊಸದಲ್ಲದಿದ್ದಾಗ್ಯೂ ತಾಲ್ಲೂಕಿನಾದ್ಯಂತ ಮತ್ತೊಮ್ಮೆ ಗೂಂಡಾ ಸಂಸತಿಯನ್ನು ತೋರಿಸಿದ್ದಾರೆ. ಕಾಂಗ್ರೆಸ್ ಇಲ್ಲಿ ಹೇಳಹೆಸರಿಲ್ಲದೆ ಆಗುತ್ತದೆಂಬ ಭಯ ಆವರಿಸಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದೌರ್ಜನ್ಯವೆಸಗಲು ಪಿತೂರಿ ನಡೆಸುತ್ತಿದ್ದಾರೆ. ದೇಶದ್ರೋಹಿ ಎಡಿಎಟಿಎಸ್ ಎಂಬ ಸ್ವಯಂಸೇವಾ ಸಂಘಟನೆಯ ಆಶ್ರಯ ಪಡೆದು ಪ್ರಗತಿಪರ ಚಳುವಳಿಗಾರರನ್ನು ಹತ್ತಿಕ್ಕಲು ಕಂಡುಕೊಂಡ ಅತ್ಯಂತ ಹೇಡಿ ದಾರಿ ಇದ್ದ ಕಾಂಗ್ರೆಸ್ ಇಂತಹ ಪಿತೂರಿಗಳನ್ನು ನಡೆಸಿದೆ. ಹೇಗೆ ಇದನ್ನು ಎದುರಿಸಬೇಕೆಂದು ಸಿಪಿಐ(ಎಂ) ಪಕ್ಷಕ್ಕೆ ಗೊತ್ತಿದೆ. ಜನರ ಸಮಸ್ಯೆಗಳನ್ನು ಎತ್ತಿಕೊಂಡು ಜನರನ್ನು ಹೋರಾಟಕ್ಕೆ ಇಳಿಸುವ ಮುಖಾಂತರ ಕಾಂಗ್ರೆಸ್ ಗೂಂಡಾ ಸಂಸತಿಗೆ ತಕ್ಕ ಉತ್ತರ ಹೇಳಬೇಕಾಗುತ್ತದೆ. ಇಂತಹ ಹತ್ಯಾ ರಾಜಕೀಯವನ್ನು ಎದುರಿಸಲು ಜನತೆಯ ಪ್ರಜಾಸತ್ತಾತ್ಮಕ ರಾಜಕೀಯ ಹೋರಾಟವನ್ನು ಬಲಪಡಿಸಬೇಕೆಂದು ಸಿಪಿಐ(ಎಂ) ನಿರ್ಧರಿಸಿದೆ. ಹುತಾತ್ಮ ಸಂಗಾತಿ ಕಾಂ. ರಘುರವರ ತ್ಯಾಗ ಬಲಿದಾನ ವ್ಯರ್ಥವಾಗಲಾರದು. ಜನತೆಯೇ ಆದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ.

ದೈವತ್ವ

ದೈವತ್ವ ಬೇರೆಡೆಗೆ ಹುಡುಕಾಡಬೇಡಿ
ದೈವತ್ವ ಎಂಬುದೇ ಮನುಷ್ಯತ್ವ ನೋಡಿ
ಮಾನವತೆಗಿಂತಲೂ ಹಿರಿದಾದುದಿಲ್ಲ
ಸುಮ್ಮನೇ ಮರುಳಾಗಿ ಕೆಡಬೇಡಿರೆಲ್ಲ

- ವಿಡಂಬಾರಿ

..............ನಡುರಾತ್ರಿ ಕೂಲಿಗಳು

ಕಂಪನಿಗಳು ತಮ್ಮ ಮುಖ್ಯ ವಹಿವಾಟಿನ ಭಾಗವಲ್ಲದ ಎಲ್ಲಾ ವಿಭಾಗಗಳ ಕೆಲಸವನ್ನು ಹೊರಗುತ್ತಿಗೆಗೆ ಕೊಡಲಾರಂಭಿಸಿದ್ದು, ಇದು ಪ್ರತಿ ವರ್ಷ ಶೇಕಡಾ 75ರ ದರದಲ್ಲಿ ಏರುತ್ತಿದೆಯಂತೆ. ಭಾರತ ಇದರಲ್ಲಿ ಸದ್ಯಕ್ಕೆ ಅರ್ಧಕ್ಕೂ ಹೆಚ್ಚು ಭಾಗ ಹೊಂದಿದ್ದು, ಇದು ಇನ್ನಷ್ಟು ಏರಲಿದೆ ಅಂತ ಗಾರ್ಟ್‌ನರ್ ಎಂಬ ಆರ್ಥಿಕ ಸರ್ವೇಕ್ಷಣ/ವಿಶ್ಲೇಷಣ ಸಂಸ್ಥೆ ಹೇಳಿದೆ. ಗಾಬ್‌ರ ಅಧ್ಯಯನ ವರದಿಯ ಪ್ರಕಾರ ಹೊರಗುತ್ತಿಗೆ ಕೊಡಲ್ಪಡುವ ಬಿಪಿಓ ವಹಿವಾಟು 2008ರ ಹೊತ್ತಿಗೆ 24 ಶತಕೋಟಿ ಡಾಲರ್‌ಗಳಷ್ಟು ಆಗಿ ಅದರಲ್ಲಿ 13 ಶತಕೋಟಿ ಡಾಲರು ಭಾರತ ಗಿಟ್ಟಿಸುವ ಅವಕಾಶ ಇದೆಯಂತೆ. ಅಂದರೆ ಈಗಿನ ಎರಡುವರೆ ಪಟ್ಟು ವಹಿವಾಟು ಈ ಉದ್ಯಮ ಸಾಧಿಸಲಿದೆಯಂತೆ. 2008ರ ಹೊತ್ತಿಗೆ 10 ಲಕ್ಷ ಜನರಿಗೆ ಈ 'ಉದ್ಯಮ' ಉದ್ಯೋಗ ಒದಗಿಸುತ್ತದೆ ಎಂದು ಗಾರ್ಟನರ್ ಅಂದಾಜು ಮಾಡಿದೆ.

ಗಾರ್ಟನರ್ ಅಥವಾ ಇಂತಹ ಇತರ ಸಂಸ್ಥೆಗಳ 'ಭವಿಷ್ಯವಾಣಿ' ಹಲವು ಬಾರಿ ತೀರಾ ಹುಸಿಯಾಗಿದ್ದು ಇದೆ. ಅಲ್ಲದೆ ಅವರು ಈ ಭವಿಷ್ಯವಾಣಿಯಂತೆ ಹಾಕಿಕೊಂಡಿರುವ ಅಂದಾಜುಗಳು ಸುಳ್ಳಾಗಬಹುದು. ಇಂಡಿಯಾಕ್ಕೆ ಈಗ ಇರುವ ಮುನ್ನಡೆ ಮಾಯವಾಗಬಹುದು. ಈಗಾಗಲೇ ಈ ಉದ್ಯಮದಲ್ಲಿ ಇಂಡಿಯಾಕ್ಕೆ ಇರುವ ಮುನ್ನಡೆಯ ಕಾರಣಗಳನ್ನು (ಇಂಗ್ಲೀಷ್‌ಶಿಕ್ಷಿತ ಜನ, ಬೇಕಾದ ಸೀಮಿತ ಜಾಣ್ಮೆ - ತರಬೇತಿ) ಇತರ ದೇಶಗಳು ಅನುಸರಿಸಿ ಸರಿಗಟ್ಟಬಹುದು, ಇದಲ್ಲದೆ ಡಾಲರ್ ಬೆಲೆ ಕಡಿಮೆಯಾಗುತ್ತಿದ್ದು, ಉದ್ಯಮದ ವೆಚ್ಚ ಜಾಸ್ತಿಯಾಗುತ್ತಿದ್ದು - ಎಲ್ಲೋ ಈಗಿನ ಲೆಕ್ಕಾಚಾರಗಳು ತಲೆಕೆಳಗಾಗಬಹುದು.


ಇದಲ್ಲದೆ ಬಿಪಿಓ ಉದ್ಯಮ ಐಟಿ ಅಥವಾ ಇತರ ರಫ್ತು- ಆಧಾರಿತ ಉದ್ಯಮಗಳು ಒಂದು ಕಡೆ ಬಹಳ ತೆಳುವಾದ ನೆಲೆಯ ಮೇಲೆ ನಿಂತಿರುತ್ತದೆ. ಇನ್ನೊಂದು ಕಡೆ ದೇಶದ ಸಮಗ್ರ ಆರ್ಥಿಕ - ಸಾಮಾಜಿಕ ಬೆಳವಣಿಗೆಗೆ ಇವುಗಳ ಕೊಡುಗೆ ಬಹಳ ಸೀಮಿತ. ಇವು ಹಲವು ಅನವಶ್ಯ ವಿಕೃತಿಗಳನ್ನು ತರುತ್ತವೆ. (ರಾತ್ರಿ ಪಾಳಿ, ಕಾರ್ಮಿಕರ ಹಕ್ಕುಗಳ ಮೊಟಕುಗೊಳಿಸುವಿಕೆ, ಸಾಂಸ್ಕೃತಿಕ ಗೊಂದಲ). ಇದಲ್ಲದೆ ಈ ಉದ್ಯಮಕ್ಕೆ ಹಲವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ಈಗ ಮಾಡುತ್ತಿರುವಂತೆ ಅತ್ಯಂತ ಹೆಚ್ಚಿನ ಆದ್ಯತೆ ಕೊಡುವುದು, ಉತ್ತಮ ನೀತಿ ಎಂದು ಹೇಳಲು ಸಾಧ್ಯವಿಲ್ಲ. ಬಿಪಿಓ ಉದ್ಯಮ ಬಿಟ್ಟರೆ ಬೇರೆ ಕೈಗಾರಿಕೆ, ಆರ್ಥಿಕ ಕ್ಷೇತ್ರಗಳಲ್ಲಿ ಹೂಡಿಕೆ ಬೇಕಾಗಿಲ್ಲ. ಬಿಪಿಓ ಬೇಕಾದ ಉದ್ಯೋಗ ಸೃಷ್ಟಿಸುತ್ತದೆ ಎಂಬ ನೀತಿ ಖಂಡಿತ ಸರಿಯಾದದ್ದಲ್ಲ. ಬಿಪಿಓ ಸೇರಿದಂತೆ ಬರಿಯ ಐಟಿ ಸೇವಾ ಕ್ಷೇತ್ರವೇ ಭಾರತದ ಆರ್ಥಿಕ -ಸಾಮಾಜಿಕ ಬೆಳವಣಿಗೆ ಸಮಸ್ಯೆ ಬಗೆಹರಿಸಬಲ್ಲುದು ಎಂಬ ಹಳೆಯ ಮೂಢನಂಬಿಕೆಯನ್ನು ಬಿಪಿಓ ಇನ್ನೂ ಗಟ್ಟಿ ಮಾಡುತ್ತಿದೆ. ಬಿಪಿಓ ಕ್ಷೇತ್ರದ ವಿಕೃತಿಗಳು, ಸಮಸ್ಯೆಗಳ ಬಗ್ಗೆ ಎಚ್ಚರ ಮೂಡಿಸುವುದು, ಸಮಗ್ರ ಆರ್ಥಿಕ - ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದ ಅದರ ಪಾತ್ರ ವಿಶ್ಲೇಷಿಸುವುದು ಅತ್ಯಗತ್ಯ.



ಜನರ ಒಡನಾಡಿ ಆನಂದ ದೇವಾಡಿಗ ಇನ್ನಿಲ್ಲ

ಕುಂದಾಪುರ ಪುರಸಭೆಯ ಮಾಜಿ ಕೌನ್ಸಿಲರ್ ಆಗಿರುವ ಕಾಮ್ರೇಡ್ ಆನಂದ ದೇವಾಡಿಗ (53) ಅವರು ಅಲ್ಪಕಾಲದ ಅನಾರೋಗ್ಯದ ನಿಮಿತ್ತ ಜೂನ್ 17 ರಂದು ನಿಧನ ಹೊಂದಿದರು. ಆನಂದ ದೇವಾಡಿಗರವರು ಈ ಹಿಂದೆ ಸಿಪಿಐ(ಎಂ) ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದು ರಿಕ್ಷಾ ಕಾರ್ಮಿಕರ ಸಂಘಟನೆಯನ್ನು ಸ್ಥಾಪನೆ ಮಾಡಿದವರಲ್ಲಿ ಒಬ್ಬರು. ಇವರು ಕುಂದಾಪುರ ಪುರಸಭೆಯಲ್ಲಿ ಎರಡುಬಾರಿ ಸಿಪಿಐ(ಎಂ) ನಿಂದ ಆಯ್ಕೆಯಾಗಿದ್ದರು. ರೈತ, ಕಾರ್ಮಿಕರ ಹಾಗೂ ಜನಸಾಮನ್ಯರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ಸಾಮಾಜಿಕವಾಗಿ ಜನರ ಕಷ್ಟಸುಖಗಳಲ್ಲಿ ತನ್ನನ್ನು ತೊಡಗಿಸಿಕೊಂಡವರು. ಅವರ ಅಕಾಲಿಕ ನಿಧನಕ್ಕೆ ಪಕ್ಷದ ತಾಲ್ಲೂಕು ಸಮಿತಿಯು ಸಂತಾಪ ವ್ಯಕ್ತಪಡಿಸಿದೆ ಮತ್ತು ಅವರ ಕುಟುಂಬಕ್ಕೆ ಸಾಂತ್ವನ ವ್ಯಕ್ತಪಡಿಸಿದೆ.

ಮಂಗಳೂರಿನ ರೌಡಿ ಪೊಳಲಿ ಅನಂತು ಕೊಲೆಯ ನಂತರ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ 'ತಕ್ಕ ಸೇಡು' ತೀರಿಸಿಕೊಳ್ಳುವುದಾಗಿ ಸಂಘ ಪರಿವಾರ - ಭಜರಂಗಿಗಳು ಬಹಿರಂಗವಾಗಿ ಘೋಷಿಸಿದರೂ ಆಡಳಿತ, ಪೊಲೀಸ್ ವ್ಯವಸ್ಥೆ ಗಲಭೆ ತಡೆಯಲು ಏನೂ ಕ್ರಮ ಕೈಗೊಳ್ಳಲಿಲ್ಲ. ಮಾತ್ರವಲ್ಲ ಎಲ್ಲ ಬಗೆಯ ಭಜರಂಗಿ ದುಷ್ಕೃತ್ಯಗಳಿಗೆ ಆಸರೆಯಾಗಿ ನಿಂತು ಸಹಕರಿಸಿದೆ. ಅಧ್ಯಯನ ಸಮಿತಿಯ ಪರವಾಗಿ ವರದಿ ನೀಡಿದ್ದಾರೆ ಕೃಷ್ಣಪ್ಪ ಕೊಂಚಾಡಿ.



ಬೆಂಕಿ ಹಚ್ಚುತ್ತಿರುವ ಭಜರಂಗಿಗಳು


ಅಧ್ಯಯನ ಸಮಿತಿಯ ವರದಿ

'ಹೇಗೂ ಆಯಿತು. ಇವತ್ತು ಒಂದು ದಿನವಲ್ಲವೋ... ಅವರು ಗಲಾಟೆ ಮಾಡಿ ಹೋಗಲಿ' ಇದು ಪ್ರಾಣವನ್ನು ಕೈಯಲ್ಲಿ ಹಿಡಿದು ಕೊಂಡು ಭಯದ ಕರಿನೆರಳಿನಲ್ಲಿದ್ದ ಅಲ್ಪಸಂಖ್ಯಾತ ಸಮುದಾಯದ ಜನಕ್ಕೆ ರಕ್ಷಣೆ ನೀಡಿ ಶಾಂತಿಯನ್ನು ಕೊಡಬೇಕಾದ ಪೊಲೀಸರು ಹೇಳುತ್ತಿದ್ದ ಮಾತುಗಳು. ಅಷ್ಟು ಮಾತ್ರವಲ್ಲದೆ ಡೈನಮೆಟ್, ಕಲ್ಲು, ಹರಿತವಾದ ತಲವಾರುಗಳನ್ನು ಝಳಪಿಸುತ್ತಾ ಅಡ್ಡಾಡುತ್ತಿದ್ದಾಗಲೂ ಮೂಕ ಪ್ರೇಕ್ಷಕರಾಗಿ ಸಿನಿಮೀಯ ರೀತಿಯ ಘಟನೆಯನ್ನು ಸ್ವಚ್ಛಂದವಾಗಿ ಆಸ್ವಾದಿಸುತ್ತಿದ್ದ ಎಸ್.ಪಿ. ಮತ್ತು ಅವರ ಪೊಲೀಸ್ ಬಲ ಅಡ್ಡೂರಿನಲ್ಲಿ ಲಾಠಿ ಚಾರ್ಜ್ ಮಾಡಿ, ಅಶ್ರುವಾಯು ಪ್ರಯೋಗಿಸಿ ಎಂದು ವಿನಂತಿಸಿದರೂ 'ನಿಮಗೆ ರಕ್ಷಣೆ ಕೊಡುತ್ತೇನೆ ಹೋಗಿ... ಹೆದರಬೇಡಿ' ಎಂದು ಹೇಳಿ ಅಲ್ಪಸಂಖ್ಯಾತರು ವಾಸಿಸುತ್ತಿದ್ದ ಕಾಲೋನಿ ಪ್ರದೇಶದ ಪ್ರಮುಖ ದ್ವಾರದಲ್ಲಿ ತಡೆ ನಿರ್ಮಿಸಿದ ಬಂದು ಮಹಾಸಾಧನೆಯಾದರೆ ಎರಡನೆಯದು, ಕಾಲು ದಾರಿಯ ಮೂಲಕ ನೂರಿನ್ನೂರು ಜನ ಪ್ರವೇಶಿಸಿ ಹೆಂಗಳೆಯರು, ಮಕ್ಕಳನ್ನು ಬೆನ್ನಟ್ಟುತ್ತಿದ್ದಾಗ ಮುಸ್ಲಿಂ ಸಮುದಾಯದ ಯುವಕರು ರಂಗಕ್ಕೆ ಪ್ರವೇಶಿಸಿ ಉಂಟಾದ ಮುಖಾಮುಖಿ ಘರ್ಷಣೆಯಲ್ಲಿ 4 ಮಂದಿ ಭಜರಂಗದಳದ ಆಕ್ರಮಣಕಾರಿ ಯುವಕರು ತೀವ್ರ ಸ್ವರೂಪದ ಗಾಯಕ್ಕೆ ಒಳಗಾದರು. ಇದು ಮುಖ್ಯರಸ್ತೆಗೆ ಒಂದು ಎದುರು ಬದುರು ಆದಾಗ ಬಜಪೆ ಎಸ್.ಐ.ನವರು ಲಾಠಿಚಾರ್ಜ್ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿ ಆಗಬಹುದಾದ ಅಪಾಯವನ್ನು ತಡೆದರು. ಬಹುಶಃ ಈ ರೀತಿ ಮಾಡಲು ಎಸ್.ಪಿ.ಯವರು ಆಗಲೂ ಸಹ ಆದೇಶ ನೀಡಿರಲಿಲ್ಲ ಎಂದುಸ್ಥಳೀಯರು ಹೇಳುತ್ತಾರೆ.

ನಾನಂತೂ 1990 ರ ದಶಕದ ಕೋಮುಗಲಭೆ, ಉದ್ವಿಘ್ನ ಸನ್ನಿವೇಶ ಮತ್ತು ಕೋಮುವಾದಿ ಸಂಘಟನೆಗಳ ದಾಂಧಲೆಗಳನ್ನು ಗಮನಿಸಿ ದಾಖಲಿಸಿ, ಅಭಿಪ್ರಾಯ ಸಂಗ್ರಹಿಸಿ ಮಾಧ್ಯಮಕ್ಕೆ ಪ್ರತಿನಿಧಿಸಿ ನೇರ ಅನುಭವಗಳ ಸಾನಿಧ್ಯದಿಂದ ಗಮನಿಸುವಾಗ ಈ ಬಾರಿ ಜಿಲ್ಲಾ ಪೊಲೀಸ್ ಇಲಾಖೆಯೇ ನೇರವಾಗಿ ಈ ಧಾಳಿ ದಾಂಧಲೆಗಳನ್ನು ಕೆಲ ಕ್ಷಣ ಮಾತ್ರವಲ್ಲ ಸುಮಾರು ಏಳು ಎಂಟು ತಾಸುಗಳ ದೀರ್ಘ ಅವಧಿಯ ತನಕ ಹರಿಯಗೊಡಲು ಬಿಟ್ಟಿತ್ತು ಎನ್ನುವುದು ಸ್ಪಷ್ಟವಾಗುತ್ತಿದೆ. ಮಂಗಳೂರಿನ ಬಿಕರ್ಣ ಕಟ್ಟೆಯಿಂದಲೇ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರ, ಅಂಗಡಿ, ಮನೆ ಮಳಿಗೆಗಳಿಗೆ ಪೊಲೀಸರ ಎದುರಲ್ಲೇ ಧಾಳಿ, ಕಲ್ಲು ತೂರಾಟ, ಬೆನ್ನಟ್ಟುವುದು ನಡೆಯತೊಡಗಿತ್ತು. ಮಂಗಳೂರಿನಿಂದ ಎಂಟು ಕಿ.ಮಿ. ದೂರದ ವಾಮಂಜೂರಿನಲ್ಲಿ ಈ ರೀತಿಯ ಧಾಳಿಯು ಒಂದು ವ್ಯವಸ್ಥಿತ ಸ್ವರೂಪವನ್ನು ಪಡೆಯಿತು. ನೂರಾರು ಸಂಖ್ಯೆಯಲ್ಲಿ ಇಲ್ಲಿ ಮಸೀದಿಯ ಒಳಗೆ ಮಾರಕಾಯುಧಗಳಿಂದ ಪ್ರವೇಶಿಸಿದರು. ಅಲ್ಲಿದ್ದ 15 ರಷ್ಟು ಸಿಬ್ಬಂದಿಗಳಲ್ಲಿ ಪ್ರಾಣ ಉಳಿಸಿಕೊಳ್ಳಲೆಂದು 11 ಮಂದಿ ಓಡಿದರು. 4 ಮಂದಿ ಅಲ್ಲೇ ಇದ್ದು ಒಂದು ರೂಮಿನಲ್ಲಿ ಅವಿತುಕೊಂಡರು. ರೂಮಿನ ಬಾಗಿಲು ಮುರಿಯಲುತೀವ್ರ ಪ್ರಯತ್ನ ನಡೆಯಿತು. ಮುಖ್ಯ ಮಸೀದಿಯ ವ್ಯಕ್ತಿ ನಿಲ್ಲುವ ಧಾರ್ಮಿಕ ನಂಬಿಕೆಯಲ್ಲಿ ಪವಿತ್ರತೆಯನ್ನು ಹೊಂದಿರುವ 'ನಿಂಬರ್' ಎಂಬ ಮಠದ ಪೀಠವನ್ನು ಧ್ವಂಸ ಮಾಡಲು ನಡೆಸಿದ ಪ್ರಯತ್ನ ಫಲ ಅದರ ಒಂದು ಭಾಗ ಮುರಿದು ಮೂಕ ಸಾಕ್ಷಿಯಾಗಿದೆ. ಮಸೀದಿಯಲ್ಲಿ ಎಸೆದಿರುವ ಕಲ್ಲುಗಳ ಗುರುತು ಸಾಕಷ್ಟಿದೆ. ನೆರಳಿಗಾಗಿ ರೂಪಿಸಿರುವ ಸಿಮೆಂಟ್ ಶೀಟ್ ಕಲ್ಲಿನ ಎಸೆತದಿಂದ ಮುರಿದಿರುವುದನ್ನು ಕಾಣಬಹುದು. ದೊಂಬಿ - ಹಲ್ಲೆ ಮಾಡುತ್ತಿದ್ದವರಿಗೆ ಪೊಲೀಸರು ಚಿಕ್ಕಮಗುವಿಗೆ ಬುದ್ದಿವಾದ ಹೇಳುವಂತೆ ಹೇಳುತಿದ್ದರೆ ವಿನಃ ಗಂಭೀರ ಕ್ರಮ ವಹಿಸಲಿಲ್ಲ. ಒಂದು ಕಡೆಯಿಂದ ಮಸೀದಿಯ ಮೇಲೆ ನೇರವಾದ ಧಾಳಿ ನಡೆದಿದೆ. ಮಸೀದಿ ಕಿಟಕಿ ಬಾಗಿಲುಗಳನ್ನು ಮುರಿಯಲಾಗಿದೆ. ಚಿಕ್ಕಮಕ್ಕಳು, ಗ್ರಾಮಸ್ಥರು, ಮಹಿಳೆಯರು, ಯುವಕರು ಮಸೀದಿಯನ್ನು ಬಿಟ್ಟು ದೂರ ಓಡಿದರು. ಮತ್ತೆ ಅವರು ಮನೆ ಬಂದು ಸೇರಿದ್ದು ಮುರ್ನಾಲ್ಕು ಗಂಟೆಗಳ ಅನಂತರವೇ. ಇಲ್ಲಿ ಹೇಳಬೇಕಾದ ಅಂಶವೆಂದರೆ -

1. ಪ್ರಾರ್ಥನಾ ಮಂದಿರಕ್ಕೆ ಧಾಳಿಗಳು ಬಹಳಷ್ಟು ಸಲ ಈ ಮೊದಲು ರಾತ್ರಿ ವೇಳೆ ಅವಿತು, ದೂರದಿಂದ ಕಲ್ಲು ತೂರಾಟಗಳು ಮಾತ್ರ ನಡೆಯುತ್ತಿತ್ತು. ಹಗಲಲ್ಲಿ ಪೊಲೀಸರ ಸಮ್ಮುಖದಲ್ಲಿ ಪ್ರವೇಶಿಸಿ ನಡೆಸಿದ ಇತಿಹಾಸ ಕಳೆದೆರೆಡು ದಶಕಗಳ ನನ್ನ ಅನುಭವದಲ್ಲಿ ಇಲ್ಲ.

2. ಮನೆಗಳನ್ನು ಜಾಲಾಡಿದುದು. ಇದು ಕೂಡಾ ಈ ಮೊದಲು ಪೊಲೀಸರ ಸಮ್ಮುಖದಲ್ಲಿ ಹರಿತವಾದ ಆಯುಧಗಳಿಂದ ನಡೆಸುತ್ತಿರಲಿಲ್ಲ. ರಾತ್ರಿ ಅಥವಾ ವಾಹನದಲ್ಲಿ ಗುಪ್ತವಾಗಿ ಬಂದು ಕೆಲ ನಿಮಿಷಗಳಲ್ಲಿ 'ಕೆಲಸ' ಮುಗಿಸಿ ಹೋಗುತ್ತಿದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸಮಾರು ಹತ್ತಿಪ್ಪತ್ತು ನಿಮಿಷಗಳಲ್ಲಿ ಪೊಲೀಸರ ಸಮ್ಮುಖದಲ್ಲೇ ದಾಂಧಲೆ ನಡೆಯಿತು. ಅಲ್ಪಸಂಖ್ಯಾತ ಸಮುದಾಯದ ಬಹಳಷ್ಟು ಜನ ತಮ್ಮ ಪ್ರಾಣ ರಕ್ಷಣೆಗಾಗಿ ಅಡಗಿ ಕುಳಿತ ಕಾರಣ ಪ್ರಾಣ ಹಾನಿ ಗಂಭೀರ ಗಾಯದಿಂದ ತಪ್ಪಿಸಿಕೊಂಡರು.



3. ಈ ರೀತಿಯ ಧಾಳಿ ದಾಂಧಲೆಯನ್ನು ಅಲ್ಪಸಂಖ್ಯಾತರೂ ಪ್ರತಿರೋಧಿಸಲಿಲ್ಲ, ಪೊಲೀಸರು ಒಬ್ಬಿಬ್ಬರನ್ನು ಅಡ್ಡಗಟ್ಟುತ್ತಿದ್ದರೇ ವಿನಃ ಮತ್ತೇನೂ ಮಾಡಲಿಲ್ಲ, ಮೆರವಣಿಗೆಯ ಮುಂಭಾಗದಲ್ಲಿ ಇದ್ದ ಖಳನಾಯಕರನ್ನು ತಡೆಯಲಿಲ್ಲ, ಸಾರ್ವಜನಿಕರೂ ಏನೂ ಮಾಡದಾಗಿದ್ದಾರೆ ಎಂಬುಂದು ವಿಶೇಷ ಸಂಗತಿ

ಇಲ್ಲಿ ಧಾಳಿಗೆ ತುತ್ತಾದವುಗಳು ಹಮೀದ್‌ರವರ ಜ್ಯೂಸ್ ಅಂಗಡಿ, ಕೋಳಿ ಫಾರ್ಮ್, ಒಂದು ಮಿಲ್, ಒಂದು ಕಾರು, ನಾಲ್ಕು ಬೈಕ್, ಹೋಟೆಲ್ ಸಬ್‌ಕಾಥ್ಯೆನ್, ಹೋಟೆಲ್‌ಫಾಲ್, ಮದ್ರಸಾ ಮಸೀದಿಯ ಧ್ವಜವನ್ನು ಕಿತ್ತುಕೊಂಡು ಹೋಗಿದ್ದಾರೆ. ನಾಲ್ಕು ಮನೆಗಳಿಗೆ ಕಲ್ಲು ತೂರಾಟ, ಗಾಜು ಹೊಡೆಯಲಾಗಿದೆ. ಕೆಂಪು ಬನಿಯನ್ ಧರಿಸಿದ್ದ ವ್ಯಕ್ತಿಯನ್ನು ಗುರುತಿಸಿ ಒಂದುದೂರು ನೀಡಲಾಗಿದೆ. ಆಗಲೂ ಪೋಲೀಸರು ತಮ್ಮ ಬಸ್ಸಿನಲ್ಲೇ ಇದ್ದರು.

ಚೆಕ್‌ಪೋಸ್ಟ್ ಬಳಿ ವಿಧವೆ ಉಮ್ಮತ್ತೂಮ್ಮರವರ ಮನೆಯ ಮೇಲೆ ಧಾಳಿ ನಡೆದಿದೆ. ಆಗ ಶಿವಣ್ಣ ಎಂಬುವರು ಇವರದೇ ಕಾರು ತಡೆದರು. ವಾಮಂಕೂರ್ ನಲ್ಲಿ ಎಸ್‌ಟಿಡಿ ಬೂತ್‌ನಕಾಯಿನ್ ಬಾಕ್ಸ್‌ನ್ನು ಎರಡು ತುಂಡು ಮಾಡಿ ಹಣ ದೋಚಿಕೊಂಡಿ ದ್ದಾರೆ.

ಅಡ್ಡೂರಿನಲ್ಲಿ ನಡೆದ ದಾಂಧಲೆ

ಬಿಕ್ಕಿನಕಟ್ಟೆ, ಸಾಮ್ರಾಟ್ ಹಾಲ್‌ನ ಬಳಿ ಇರುವ ಮಸೀದಿಯಿಂದ ಪ್ರಾರಂಭವಾದ ಶವ ಯಾತ್ರೆಯ ಮೆರವಣಿಗೆಕಾರರ ದಾಂಧಲೆ ಗುರುಪುರ ಬಳಿ ಒಬ್ಬ ಅಲ್ಪಸಂಖ್ಯಾತ ಯುವಕನ ಪ್ರಾಣವನ್ನು ಪಡೆಯುವ ಮಟ್ಟಕ್ಕೂ ಬೆಳೆಯಿತು. ಎದುರು ಬದಿಯಿಂದ ಬರುತ್ತಿದ್ದ ಯುವಕನನ್ನು ತಡೆದು ಹೊಡೆದಾಗ ಆತ ನದಿಗೆ ಹಾರಿ ಈಜಿ ತನ್ನ ಪ್ರಾಣ ಉಳಿಸಿ ಕೊಂಡ ಎಂದು ಹೇಳಲಾಗುತ್ತಿದೆ. ಆದರೂ ಸಹ ಅಲ್ಲಿಗೆ ಮೇಲಿಂದ ಕಲ್ಲು ಎಸೆದು ಹಾಕುತ್ತಿದ್ದರು. ಆತನ ಬೈಕನ್ನು ಸಂಪೂರ್ಣ ಹಾಳು ಗೆಡವಲಾಯಿತು.

ಗುರುಪುರ ಪೇಟೆಯಲ್ಲಿ ಕಲ್ಲುತೂರಾಟ ನಡೆಯಿತು. ಅನಗತ್ಯವಾಗಿ ಕೈಕಂಬ ಪೇಟೆಗೆ ತೆರಳಿದ ಮೆರವಣಿಗೆ ಅಲ್ಲೂ ಭಯದ ವಾತಾವರಣ ನಿರ್ಮಾಣ ಮಾಡಿತು. ರೌಡಿ ಪೊಳಲಿ ಅನಂತ ಹತ್ಯೆಯಾದ ಸ್ಥಳಕ್ಕೆ ಧಾವಿಸುತ್ತಿದ್ದಂತೆ ಅಲ್ಲಿ ಜೀಪೊಂದನ್ನು ಅಡಿಮೇಲು ಮಾಡಿ ಹಾಳುಗೆಡವಲಾಗಿದೆ.

ಈ ರೀತಿ ದಾಂಧಲೆಯೊಂದಿಗೆ ಮುಂದುವರಿದ ಯಾತ್ರೆಯು ಬಹಳ ವಿಚಿತ್ರವೆಂಬಂತೆ ಕಾಂಜರ ಪಕ್ಕದ ಬುದ್ರಾ ರುಲ್ಲಾ ಮಸೀದಿಗೆ ಧಾಳಿ, ಕಲ್ಲುತೂರಾಟ ನಡೆಸಲಿಲ್ಲ. ಆದರೆ ತಕ್ಷಣವೇ ಮಾರ್ಗದ ಉದ್ದಕ್ಕೂ ದಾಂಧಲೆ ನಿರ್ವಾಣವಾಯಿತು. ಬಸ್ಸಿನ ಮೇಲ್ಭಾಗದಿಂದ ತಲವಾರು, ಸ್ಫೋಟಕಗಳನ್ನು, ಕಲ್ಲುಗಳನ್ನು ಎಸೆಯಲಾಯಿತು. ಬಾಟಲಿಯಲ್ಲಿ ಸ್ಫೋಟಕಗಳನ್ನು ಇರಿಸಿ ಮನೆಯ ಮೇಲೆ ಮತ್ತು ಇನ್ನೊಂದು ಕಡೆ ಎಸೆಯಲಾಗಿದೆ.

ದಾಂಧಲೆ ಪ್ರಾರಂಭವಾಗುತ್ತಿದ್ದಂತೆ ಲಾಠಿ ಚಾರ್ಜ್ ಮಾಡಿ ಎಂದು ಪರಿಪರಿಯಾಗಿ ವಿನಂತಿಸಿದರೂ ಅದು ಸಾಧ್ಯವಿಲ್ಲವೆಂದು ಅಧಿಕಾರಿಗಳು ಉತ್ತರಿಸುತ್ತಿದ್ದರು. ನಿಮ್ಮ ರಕ್ಷಣೆ ನಾವು ಮಾಡುತ್ತೇವೆ - ನೀವು ಹೆದರಬೇಡಿ. ನಿಮಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳುತ್ತಿದ್ದರೇ ವಿನಃ ದಾಂಧಲೆಕೋರರನ್ನು ಏನೂ ಮಾಡುತ್ತಿರಲಿಲ್ಲ. ಇಲ್ಲಿ ನಡೆದ ಶವಯಾತ್ರೆಯ ದಾಂಧಲೆ ಭೀಕರ ಸ್ವರೂಪದ್ದಾಗಿದೆ. ಸರಿಸುಮಾರು ಐದಾರು ಲಕ್ಷ ರೂಪಾಯಿ ಸ್ವತ್ತು ನಾಶವಾಗಿದೆ. ಅಟ್ಟೂರು ಬೂದು ಮಸೀದಿ ರಸ್ತೆಗೆ ಮೆರವಣಿಗೆಕಾರರು ನುಗ್ಗಬೇಕೆಂದು ಬಯಸಿದ್ದರು. ಆದರೆ ಪೊಲೀಸರು ತಡೆ ನಿರ್ಮಿಸಿದರು. ಇದರಿಂದ ಕುಪಿತಗೊಂಡು ಒಂದು ಮನೆ ಮುಂದೆ ಇದ್ದ ಇಟ್ಟಿಗೆಯ ದಾಳಿಯಿಂದಲೇ ಆಮನೆಯನ್ನು ಧ್ವಂಸಮಾಡಿದರು.

ಒಂದು ಇಕ್ಕಟ್ಟಾದ ದಾರಿಯ ಮೂಲಕ ನೂರಾರು ಮಂದಿ ಒಳ ಪ್ರವೇಶಕ್ಕೆ ಲಗ್ಗೆಯಿಟ್ಟ ಮತಾಂಧ ಯುವಕರು ಒಂದು ಮುಸ್ಲಿಂ ಮನೆಯ ಮುಂದೆ ಇದ್ದ ಎರಡು ಲಾರಿಗಳನ್ನು ಮತ್ತು ಒಂದು ಕಾರನ್ನು ಧ್ವಂಸ ಮಾಡಿದರು. ವಿಚಿತ್ರವೆಂದರೆ ಧ್ವಂಸ ಗೊಳಗಾದ ಕಾರು ಎಚ್.ಪಿ. ಚಂದ್ರಶೇಖರ

ಮುಂದಿನ ಪುಟಕ್ಕೆ

ರೌಡಿ ಪೊಳಲಿ ಅನಂತು ಶವಯಾತ್ರೆ 'ಯೋಜನಾಬದ್ಧ'ವಾಗಿ ರೂಪಿಸಿದ ದಾಂಧಲೆಯ ಬಗೆಗಿನ ಅಧ್ಯಯನ ವರದಿ

1. ಅಧ್ಯಯನ ಸಮಿತಿಯ ಸದಸ್ಯರು : 1.ಯಶವಂತ ಮರೋಳಿ, ಅಧ್ಯಕ್ಷರು, ಅಖಿಲ ಭಾರತ ವಕೀಲರ ಸಂಘ ಮತ್ತು ಮಾನವತಾ ವೇದಿಕೆ ಮಂಗಳೂರು. 2. ಯಾದವಶೆಟ್ಟಿ, ಕಾರ್ಯದರ್ಶಿ ಮಾನವತಾ ವೇದಿಕೆ, ಮಂಗಳೂರು, 3. ಕೃಷ್ಣಪ್ಪ ಕೊಂಚಾಡಿ, 4. ಕೆ.ರಾಮದಾಸ್, ಕಾರ್ಯದರ್ಶಿ ಸಮುದಾಯ ಸಾಂಸ್ಕೃತಿಕ ಸಂಘಟನೆ, ಮಂಗಳೂರು 5. ಮುನೀರ್ ಕಾಟಿಪಳ್ಳ, ಉಪಾಧ್ಯಕ್ಷರು, ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ

2. ಭೇಟಿ ನೀಡಿದ ದಿನಾಂಕ ಮತ್ತು ಸಮಯ: 12.06.2005, ಬೆಳಗ್ಗೆ 9 ರಿಂದ ಮಧ್ಯಾಹ್ನ 1.30 ರವರೆಗೆ

3. ಭೇಟಿ ನೀಡಲಾದ ಪ್ರದೇಶಗಳು : ವಾಮಂಜೂರು, ಅಡ್ಡೂರು ಪ್ರದೇಶ

ಸಮಿತಿಯ 6 ಶಿಫಾರಸ್ಸುಗಳು:

1. ಸಂಪೂರ್ಣವಾಗಿ ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿದೆ. ಇದರಿಂದ ಅಲ್ಪಸಂಖ್ಯಾತರ ಮೇಲೆ ವ್ಯವಸ್ಥಿತ ದಾಳಿಗೆ ಕಾರಣರಾದ ಜಿಲ್ಲಾ ಪೊಲೀಸ್ ಅಧಿಕಾರಿಯನ್ನು ಅಮಾನತು ಗೊಳಿಸಿ ನ್ಯಾಯಾಂಗ ತನಿಖೆ ನಡೆಸುವುದು
2. ಶವಯಾತ್ರೆಗೆ ಅವಕಾಶ ನೀಡಿದ ಅಧಿಕಾರಿಗಳು ಕೋಮು ವಾದಿಗಳೊಂದಿಗೆ ಶಾಮೀಲಾಗಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸುವುದು.
3. ವಾಮಂಜೂರಿನಿಂದ ಅಡ್ಡೂರಿಗೆ ಮೂರು ತಾಸುಗಳ ಸಮಯಾವಕಾಶವಿತ್ತು. ಮಸೀದಿಯ ಮೇಲೆ ಈ ಮೊದಲೆಂದೂ ಜಿಲ್ಲೆಯಲ್ಲಿ ಇಂತಹ ಧಾಳಿ ನಡೆದಿಲ್ಲದ್ದಾಗಿದ್ದು ತೀವ್ರ ಆಕ್ರಮಣಕಾರಿ ಸ್ವರೂಪ ತಳೆದರೂ ಹೆಚ್ಚುವರಿ ಪೊಲೀಸರನ್ನು ನಿಯುಕ್ತಿಗೊಳಿಸದಿರುವುದುರ ಬಗ್ಗೆ ತನಿಖೆ ನಡೆಸುವುದು.
4. ಕಣ್ಣೆದುರೇ ಗಲಭೆ ದಾಂಧಲೆ, ಕಾಳಗ ನಡೆದಾಗ ಕ್ರಮವಹಿಸಲು ಮುಂದಾದ ಎಸ್.ಐ. ನ್ನು ಪೊಲೀಸ್ ಮೇಲಧಿಕಾರಿಗಳು ತಡೆದದ್ದು ಯಾಕೆ ಎಂದು ವಿಚಾರಣೆ ನಡೆಯಬೇಕು.
5. ಸುಮಾರು ಐದಾರು ಲಕ್ಷ ರೂಪಾಯಿ ಹಾನಿ ಸಂಭವಿಸಿದರೂ ಕೇವಲ 80,000 ರೂಪಾಯಿ ಪರಿಹಾರ ವಿತರಿಸಿ - ಕೈ ಮುಚ್ಚಿಕುಳಿತಿರುವ ರಾಜ್ಯಸರ್ಕಾರಕ್ಕೆ ಒತ್ತಡ ತಂದು ವ್ಯಾಪಕ ಪುನರ್ ಅಂದಾಜು ನಷ್ಟ ಮಾಡಿಪರಿಹಾರ ದೊರೆಕಿಸುವುದು.
6. ಹಲ್ಲೆಕೋರರ ಮೇಲೆ ವ್ಯಾಪಕ ಕಾನೂನು ಕ್ರಮ ಕೈಗೊಳ್ಳಲು ವಿಶೇಷ ಒತ್ತಡ ರೂಪಿಸುವುದು.

ಭಟ್ಟರವರ ಮನೆಯ ಕಾರ್ಯಕ್ರಮಕ್ಕೆ ದೂರದಿಂದ ಬಂದಿದ್ದ ನೆಂಟರಿಸ್ಟರದ್ದು ಆಗಿತ್ತು. ಮುಸ್ಲಿಮ ಮನೆಯ ಮುಂಭಾಗದಲ್ಲಿ ಲಾರಿಯೊಂದಿಗೆ ಇದ್ದದ್ದರಿಂದ ಈ ಕಾರನ್ನು ಧ್ವಂಸಗೊಳಿಸಲಾಗಿದೆ. ಈ ಮನೆಯ ಎಲ್ಲಾ ಗಾಜು, ಕಂಬಗಳನ್ನು ಜಖಂ ಗೊಳಿಸಲಾಗಿದೆ. ಅಲ್ಲಿಂದ ಮನೆಯುವರು ಬೊಬ್ಬೆ ಹಾಕಿ ಓಡಿದರು. ಓರ್ವ ವ್ಯಕ್ತಿಯನ್ನು ಬೆನ್ನಟ್ಟಿದರು ವ್ಯಕ್ತಿಗಳು. ಈ ವ್ಯಕ್ತಿ ಪಂಪ್‌ಹೌಸಿನ ಗುಂಡಿಯಲ್ಲಿ ಅವಿತು ಕುಳಿತು ಜೀವ ಉಳಿಸಿಕೊಂಡದ್ದೇ ವಿಚಿತ್ರ. ಇದರಿಂದ ಕುಪಿತ ಗೊಂಡ ಈ ದಾಂಧಲೆಕೋರರು ಆ ಮನೆಯ ಬಾಗಿಲು, ಕಿಟಕಿ ಧ್ವಂಸಮಾಡಿದರು. ಈ ಸಂದರ್ಭ ದಲ್ಲಿ ಮುಸ್ಲಿಂ ಯುವಕರು ಒಂದಾಗಿ ಪ್ರತಿಭಟಿಸಿದರು ಎಂದು ಜನರು ಹೇಳುತ್ತಾರೆ. ಆ ಸಮಯದಲ್ಲಿ ತೀರಾ ಅಪರಿಚಿತರಾದ ದಾಂಧಲೆಗಾರರು ಓಡಿ ಹೋಗಲು ಗೊತ್ತಾಗದೆ 4 ಜನರಿಗೆ ಗಂಭೀರ ಸ್ವರೂಪದ ಗಾಯಗಳು ಉಂಟಾದವು. ಈ ರೀತಿ ಗಾಯಕ್ಕೆ ಒಳಗಾದವರನ್ನು ಮತ್ತು ಒಂದೂವರೆ ಗಂಟೆಯ ನಂತರ ವೈದ್ಯರೋರ್ವರ ಸಹಕಾರದಲ್ಲಿ ಕೊಂಡೊಯ್ಯಲಾಯಿತು ಎಂದು ಹೇಳಲಾಗಿದೆ.

ಇದೇ ಸಮಯದಲ್ಲಿ ಅತ್ತ ಸೇತುವೆ ಸಮೀಪದಲ್ಲಿ ಮತ್ತೆ ಮುಖಾಮುಖಿಯಾದಾಗ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ, ಲಾಠಿ ಚಾರ್ಜ್ ಮಾಡಿದರು. ಇದೇ ಸಮಯದಲ್ಲಿ (ಅದಾಯತುಲ್ಲಾ ರವರ ಮನೆಯ ಮೇಲೆ ಕಲ್ಲು, ಇಟ್ಟಿಗೆಗಳನ್ನು ಹಾಕಲಾಗಿದೆ. ಸ್ಫೋಟಕಗಳನ್ನು ಬಾಟಲಿಯಲ್ಲಿ ತುಂಬಿ ಎಸೆಯಲಾಗಿದೆ. ಕಳಸದಲ್ಲಿ ವಾಸವಾಗಿದ್ದ ಪ್ರಸ್ತುತ ಖಾಲಿ ಇರುವ ಅಬ್ಬಾಸ್ ರವರ ಮನೆಯ ಎಲ್ಲಾ ಕಿಟಕಿಗಳನ್ನು ನಾಶ ಮಾಡಿ ಹಿಂಬದಿಯಿಂದ ಬಾಗಿಲು ಮುರಿದು, ಒಳ ಪ್ರವೇಶಲು ಯತ್ನಿಸ ಲಾಗಿದೆ. ಇದನ್ನು ದರೋಡೆ ಮಾಡಲೆಂದೇ (ಆ ಮನೆಯಲ್ಲಿ ಯಾರೂ ಇಲ್ಲವೆಂದು ಗೊತ್ತಿರುವ) ಸ್ಥಳೀಯರೇ ಮಾಡಿರುತ್ತಾರೆ ಎಂಬುದು ಒಂದೇ ಬಾರಿಗೆ ಅರ್ಥವಾಗುತ್ತದೆ.

ಅಬ್ದುಲ್ ಖಾದರ್ ಎಂಬುವರ ಮನೆಯಲ್ಲಿ ಸುಮಾರು 70 ಸಾವಿರಕ್ಕೂ ಮಿಕ್ಕಿದ ವಸ್ತುಗಳನ್ನು ನಾಶ ಮಾಡಲಾಗಿದೆ. ಈ ಮನೆಯವರು ವಾಮಂಜೂರಿನಲ್ಲಿ ಗಲಾಟೆಯಾದ ಸುದ್ದಿ ಕೇಳಿ ಮನೆ ಬಿಟ್ಟು ಹೊರಟುಹೋಗಿದ್ದರು. ಅವರ ಮನೆಯ ಕಿಟಕಿ ಬಾಗಿಲು ಮುರಿಯಲಾಗಿದೆ. ಸೋಫ, ಡೈನಿಂಗ್ ಟಯರ್ಸ್, ಪ್ಲಾಸ್ಟಿಕ್ ಚಯರ್ಸ್‌ಗಳನ್ನು ಮುರಿಯಲಾಗಿದೆ. ಟಿ.ವಿ.ಸ್ಟಾಂಡ್ ಮುರಿದು ವಿ.ಸಿ.ಡಿ. ಕೊಂಡುಹೋಗಿದ್ದು, ಟಿ.ವಿ.ಯನ್ನು ಹಾಳುಗೆಡವಿದ್ದಾರೆ.

- ಕೃಷ್ಣಪ್ಪ ಕೊಂಚಾಡಿ

ಪೀಪಲ್ಸ್ ಡೆಮಾಕ್ರಸಿಗೆ 40 ವರ್ಷ

ಪುಟ 7 ರಿಂದ.....

ಸರಿಯಾಗಿ ಮೂವತ್ತು ವರ್ಷಗಳ ಹಿಂದೆ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಪಶ್ಚಿಮ ಬಂಗಾಳದಲ್ಲಿ ಈ ದಾಳಿಗಳು ತೀವ್ರಗೊಂಡವು. ಈ ವರ್ಷಗಳಲ್ಲಿ ನಡೆದ ಅರೆ ಫ್ಯಾಸಿಸ್ಟ್ ದಾಳಿಗಳಿಂದ ಸಂಗಾತಿಗಳ ಮಾರಣಹೋಮ ನಡೆಯಿತು. ಹಲವಾರು ಮಂದಿ ಸ್ಥಳಾಂತರಗೊಂಡರು. ಪಶ್ಚಿಮ ಬಂಗಾಳ ಈ ಮಾರಣಹೋಮವನ್ನು ಎದುರಿಸುತ್ತಿದ್ದಂತೆ ಭಾರತದ ರಾಜಕೀಯ ಪಕ್ಷಗಳನ್ನು ಸಹ ಆತಂಕಕ್ಕೊಳಪಡಿಸಿದವು. ಇದು ಅತಿ ಶೀಘ್ರದಲ್ಲಿಯೇ ದೇಶದ ಅರಿವಿಗೆ ಬಂತು ಈ ಸಂದರ್ಭದಲ್ಲಿ ನಮ್ಮ ಪಕ್ಷದ ವಿಶ್ಲೇಷಣೆ ಮತ್ತು ಅನುಭವಗಳನ್ನು ಯಾವುದೇ ವಿರೋಧಪಕ್ಷಗಳು ಪರಿಗಣಿಸದಿದ್ದುದು ದುರದೃಷ್ಟವಾಗಿದೆ.

ಇದರ ವಿರುದ್ಧ ಪಿ.ಡಿ.ಯು ಪ್ರಚಾರಾಂದೋಲನವನ್ನು ಕೈಗೊಂಡಿದ್ದಾಗ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಹಲವಾರು ಸಂಕಷ್ಟಗಳನ್ನು ಎದುರಿಸಿತು. ನಿಷೇಧಕ್ಕೊಳಗಾಗಿದ್ದ ಪಿಡಿಯು ಮತ್ತೆ ಮತ್ತೆ ಸಂಚಿಕೆಗಳನ್ನು ಹೊರತಂದಿತು. ಪ್ಯಾರಿಸ್‌ನಲ್ಲಿ ಕಮ್ಯೂನಿಸ್ಟರ ಮಾರಣಹೋಮದಲ್ಲಿನ ಸಂದರ್ಭದಲ್ಲಿನಂತೆ ನಿಶ್ಯಬ್ದತೆಯು ಹಲವು ವೇಳೆ ಮಾತು ಬರಹಗಳಿಗಿಂತಲೂ ಅತ್ಯಂತ ಹರಿತವಾಗಿರುತ್ತದೆ ಎಂದು ಕ್ರಾಂತಿಕಾರಿಯೊಬ್ಬರು ವ್ಯಾಖ್ಯಾನಿಸಿದ್ದರು. ಅದರಂತೆ ಯಾವುದೇ ಲೇಖನಗಳಿಲ್ಲದೆ ಖಾಲಿಯಾಗಿ ಪ್ರಸಾರವಾದ ಪಿಡಿಯು ತನ್ನ ಪ್ರತಿರೋಧವನ್ನು ಅಧಿಕಗೊಳಿಸುವುದರ ದ್ಯೋತಕವಾಗಿತ್ತು.

ಈ ಎಲ್ಲಾ ಅವಧಿಯಲ್ಲಿನ ವಿಚಾರಣೆ ಮತ್ತು ವಿವಾದಗಳನ್ನು ಪಿಡಿಯ ಘನತೆ ಮತ್ತು ಗೌರವ ಎಂದು ಪರಿಗಣಿಸಬೇಕು. ತನ್ನ ಚಂದಾದಾರರು ಮತ್ತು ದೇಶದ ಜನತೆಗೆ ನಮ್ಮ ಪಕ್ಷದ ನಿಲುವನ್ನು ನಿರಂತರವಾಗಿ ಅದು ತಿಳಿಸುತ್ತಿತ್ತು.

ಪಿಡಿಯು ಸಂಪಾದಕೀಯ ಮಂಡಳಿಯಲ್ಲಿನ ನಾಯಕತ್ವ ಸಂಪಾದಕೀಯ ಮಂಡಳಿಯವರ ತ್ಯಾಗದಿಂದಾಗಿ ಇದು ಸಾಧ್ಯವಾಗಿದೆ. ಕಾಂ॥ ಜ್ಯೋತಿ ಬಸು ಅವರ ಸ್ಥಾಪನ ಸಂಪಾದಕತ್ವದಲ್ಲಿ ಆರಂಭವಾದದು ಇಎಂಎಸ್ ನಂಬೂದರಿಪಾದ್ ಬಿ.ಟಿ.ರಣದಿವೆ, ಎಂ.ಬಸವಪುನ್ನಯ್ಯ, ಕಾಂ॥ ಸುನಿಲ್ ಮೈತ್ರ ರವರ ಸಂಪಾದಕತ್ವದಲ್ಲಿ ಮುಂದುವರೆಯಿತು. ಅಕ್ಷರ ಜೋಡಣೆಯ ಅಂದಿನ ಕಾಲದಲ್ಲಿ ಪ್ರತಿ ವಾರವು ಲೇಖನಗಳು ಮುದ್ರಣಾಲಯಕ್ಕೆ ರವಾನೆಯಾಗುತ್ತಿದ್ದವು. ಮತ್ತು ಕರಡು ಪ್ರತಿ ತಿದ್ದುವುದಕ್ಕೆ ಮತ್ತೆ ಬರುತ್ತಿದ್ದವು. ಆದರೂ ಸಮಯಕ್ಕೆ ಪತ್ರಿಕೆ ಹೊರ ಬರುತ್ತಿದ್ದುದು ಕಮ್ಯೂನಿಸ್ಟ್ ಪಕ್ಷದ ತ್ಯಾಗ ಬಲಿದಾನ, ಪ್ರವೃತ್ತಿಯ ಕುರುಹಾಗಿತ್ತು. ನಮ್ಮ ಮುದ್ರಣಾಲಯದ ವ್ಯವಸ್ಥಾಪಕರಾಗಿದ್ದ ಈ ಸಂದರ್ಭದಲ್ಲಿ ಕಾಂ॥ ಸೇನ್‌ಗುಪ್ತ ಅವರ ಪಾತ್ರವನ್ನು ಯಾರೂ ಮರೆಯುವಂತಿಲ್ಲ. ಅವರ ವಿವಿಧ ರೀತಿಯ ಕೆಲಸ ಕಾರ್ಯಗಳ ನಡುವೆಯೂ ಪ್ರತಿವಾರವೂ ಪತ್ರಿಕೆಯು ಹೊರಬರುವುದನ್ನು ಖಚಿತಪಡಿಸಿತ್ತು. ಆ ಸಮಯದಲ್ಲಿ ಕಾಂ॥ ರಾಮದಾಸ್ ಅವರು ಪಕ್ಷದ ಮುಖವಾಣಿ ಪಿಡಿಯ ಬೆನ್ನೆಲುಬಾಗಿದ್ದರು. ತುರ್ತು ಪರಿಸ್ಥಿತಿಯ ಹೀನಾಯ ಸೋಲು ಕಂಡ ನಂತರ ಪಿಡಿಯ ಕೇಂದ್ರವನ್ನೂ ದೆಹಲಿಗೆ ವರ್ಗಾಯಿಸಲಾಯಿತು.

ಜಲಂಧರ್‌ನ ಅಖಿಲ ಭಾರತ ಸಮ್ಮೇಳನದ ನಂತರ ಕಾಂ॥ ರಾಜನ್ ಅವರು ಸಂಪಾದಕೀಯ ಮಂಡಳಿಯೊಂದಿಗೆ ಸೇರ್ಪಡೆಗೊಂಡ ನಂತರ ಕಾಂ॥ ಹರ್‌ಕಿಶನ್‌ಸಿಂಗ್ ಸುರ್ಜಿತ್ ಅವರ ಸಂಪಾದಕತ್ವದಲ್ಲಿ ಲೋಕ್ ಲಹರ್ ಪತ್ರಿಕೆಯನ್ನು ಆರಂಭಿಸಲಾಯಿತು. ನಂತರ ಕಾಂ॥ ಕಿಟ್ಟಿ ಮೆನನ್ ಅವರು ಪೂರ್ಣಾವಧಿ ಕಾರ್ಯಕರ್ತರಾಗಿ ಅದನ್ನು ಬಲಿಷ್ಠಗೊಳಿಸಿದರು.

ತುರ್ತು ಪರಿಸ್ಥಿತಿಯನಂತರ ಪತ್ರಿಕೆಯು ಸಂಕೀರ್ಣ ಪರಿಸ್ಥಿತಿಯಲ್ಲಿ ಪಾತ್ರ ನಿರ್ವಹಿಸುವಂತಾಯಿತು. ಸಮ್ಮಿಶ್ರ ಸರ್ಕಾರದ ಹೊರಹೊಮ್ಮಿಕೆಯು ಏಕ ಪಕ್ಷ ಆಡಳಿತದ ಏಕ ಸ್ವಾಮ್ಯತೆಯನ್ನು ಅಂತ್ಯಗೊಳಿಸಿತು, ಅಂದರೆ ಭಾರತದ ರಾಜಕಾರಣದಲ್ಲಿನ ಹಲವಾರು ಅಶ್ಲೀಲತೆಯ ಬಗ್ಗೆ ವಿವರಣೆ, ವಿಶ್ಲೇಷಣೆ ಮತ್ತು ಚರ್ಚೆಗೊಳಪಡಿಸುವುದು ಅಗತ್ಯವಾಗಿತ್ತು. ಪಿಡಿಯು ಈ ಎಲ್ಲ ಸಂದರ್ಭಗಳಲ್ಲಿ ಚರ್ಚೆಗಳಲ್ಲಿ ಮಧ್ಯ ಪ್ರವೇಶಿಸಿತು. ಜನತಾ ಪಕ್ಷದ ಸ್ಥಾಪನೆ ಮತ್ತು ಅದರ ಕುಸಿತ, ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಮರಳಿದ್ದು, ಖಲಿಸ್ಥಾನ ಪ್ರತ್ಯೇಕಾವಾದಿಗಳಿಂದ ಅವರ ಹತ್ಯೆ, ರಾಜೀವ್ ಗಾಂಧಿಯವರುಅಧಿಕಾರ ವಹಿಸಿಕೊಂಡಿದ್ದು, ಅವರೂ ಹತ್ಯೆಯಾದ ನಂತರ ವಿ.ಪಿ.ಸಿಂಗ್ ಪ್ರಧಾನ ಮಂತ್ರಿಯಾಗಿದ್ದು ನಂತರ ಕಾಂಗ್ರೆಸ್ ಬೆಂಬಲದೊಂದಿಗೆ ಸಂಯುಕ್ತರಂಗ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು ಭಾರತದ ರಾಜಕಾರಣದಲ್ಲಾದ ಬದಲಾವಣೆಯಾಗಿದೆ. ಭಾರತದ ರಾಜಕೀಯವು ಪ್ರೌಢಾವಸ್ಥೆಯನ್ನು ತಲುಪುತ್ತಿದ್ದಂತೆ ಅದರ ಸಾರ್ವಜನಿಕ ವಾಸ್ತವತೆಯು ರಾಜಕೀಯದಲ್ಲಿ ಹೊರಸೂಸಿತು, ಸಿಪಿಎಂ ನೇತೃತ್ವದ ಎಡ ಪಕ್ಷಗಳ ಪಾತ್ರವು ಏರುಮುಖ ಪಡೆಯತೊಡಗಿತು. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿನ ಸಿಪಿಎಂ ಪಕ್ಷದ ಆಡಳಿತ ನೀತಿಗಳು ಇತರರೊಂದಿಗಿನ ವ್ಯತ್ಯಾಸವನ್ನು ತೋರ್ಪಡಿಸಿದವು. ಭಾರತದ ರಾಜಕಾರಣದಲ್ಲಿ ಎಡಪಕ್ಷಗಳ ಅನಿವಾರ್ಯತೆಯನ್ನು ಬಲಿಷ್ಠಗೊಳಿಸಿದವು.

ಕಾಂಗ್ರೆಸ್‌ನ ಏಕಪಕ್ಷೀಯ ಆಡಳಿತವು ಬಲ ಪಂಥೀಯ ಅಕ್ರಮಣಕಾರಿ ಕೋಮುವಾದಿ ಶಕ್ತಿಗಳು ದೇಶದಲ್ಲಿ ಬೆಳೆಯಲು ಅವಕಾಶವನ್ನು ನೀಡಿದ ಅವಧಿಯಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವವನ್ನೂ ರಕ್ಷಿಸುವುದು ಪ್ರಮುಖ ಗುರಿಯಾಗಿತ್ತು. ಅದಕ್ಕಿಂತಲೂ ಮುಖ್ಯವಾಗಿ ಈಗ ಜಾತ್ಯಾತೀತತೆಯನ್ನು ರಕ್ಷಿಸುವುದು ಅತ್ಯಂತ ಪ್ರಮುಖವಾಗಿದೆ. ಬಿಜೆಪಿಯು ಅಧಿಕಾರಕ್ಕೇರಿದ ನಂತರ ಭಾರತ ಗಣರಾಜ್ಯದ ಜಾತ್ಯಾತೀತ ಪ್ರಜಾಪ್ರಭುತ್ವದ ಅಡಿಪಾಯವು ಆತಂಕಕ್ಕೆ ಗುರಿಯಾಗಿದೆ. ಇದರೊಂದಿಗೆ ಬಿಜೆಪಿಯು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳನ್ನು ಅನುಷ್ಠಾನಗೊಳಿಸಿದ್ದರಿಂದ ದೇಶದ ಸಾರ್ವಭೌಮತೆಯ ಮೇಲೆ ಚೇತರಿಸಿಕೊಳ್ಳಲಾಗದಂತಹ ದಾಳಿಗಳು ನಡೆಯಿತು. ಬಿಜೆಪಿಯು ಅಧಿಕಾರಕ್ಕೆ ಬಂದ ನಂತರ ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಮತ್ತು ಕ್ರಾಂತಿಕಾರಿ ಬದಲಾವಣೆಯನ್ನು ರಕ್ಷಿಸುವುದು ಕಷ್ಟ ಸಾಧ್ಯವಾಯಿತು. ಅಂತಹ ಆತಂಕದ ಸನ್ನಿವೇಶದಲ್ಲಿ ಸಿಪಿಎಂನ ಪಾತ್ರವು 2004ರ ಮಹಾ ಚುನಾವಣೆಯಲ್ಲಿ ಎಲ್ಲರಿಗೂ ಗೋಚರವಾಯಿತು.

ಈ ಸಮರದಲ್ಲಿ ಪಿಡಿಯ ಪಾತ್ರವು ಅದರ ವಿಶ್ಲೇಷಣೆ ಮತ್ತು ವಾಸ್ತವತೆಯನ್ನು ಪ್ರತಿಬಿಂಬಿಸಿತು.

ಇಂದಿನ ಪ್ರಶ್ನೆಯೂ ಸಹ ಅತ್ಯಂತ ಸಂಕೀರ್ಣ ಪರಿಸ್ಥಿತಿಗಿಂತಲೂ ಉತ್ತಮವಾಗಿಲ್ಲ. ಕೋಮುವಾದಿ ಪಕ್ಷಗಳನ್ನು ಅಧಿಕಾರದಿಂದ ಹೊರಗಟ್ಟಿದಂತೆ ಹೊಸ ಉದಾರವಾದಿ, ಆರ್ಥಿಕ ನೀತಿಗಳಿಂದ ದೇಶದ ಸಾರ್ವಭೌಮತೆಯನ್ನು, ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸುವ ಸವಾಲು ನಮ್ಮ ಮುಂದಿದೆ. ಈ ನೀತಿಗಳು ಇನ್ನೂ ಮಾರಣಾಂತಿಕವಾಗಿ ನಮ್ಮ ಮುಂದೆ ಸವಾಲಾಗಿ ಬಂದಿವೆ.

ಕೋಮುವಾದಿ ಶಕ್ತಿಗಳು ಮತ್ತೆ ಅಧಿಕಾರಕ್ಕೆ ಬರುವುದನ್ನು ತಡೆಯುವುದರೊಂದಿಗೆ ಅದೇ ಸಂದರ್ಭದಲ್ಲಿ ಜನತೆಯ ಹಿತಾಸಕ್ತಿಯನ್ನು ರಕ್ಷಿಸಲು ಹಾಗೂ ಯುಪಿಎ ಸರ್ಕಾರವು ಜನವಿರೋಧಿ ನೀತಿಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಬಾರದು.

ಪಿಡಿಯು ತನ್ನ 40ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಈ ಸವಾಲುಗಳನ್ನೂ ಎದುರಿಸುವುದು ನಮ್ಮ ದೃಢ ಸಂಕಲ್ಪವಾಗಿದೆ. ಈ ಮಹತ್ಕಾರ್ಯಕ್ಕೆ ನಮ್ಮ ಎಲ್ಲ ಓದುಗರ ಸಹಕಾರವನ್ನು ಯಾಚಿಸುತ್ತೇವೆ.

ಬಿ.ಹೆಚ್.ಇ.ಎಲ್ ಬಂಡವಾಳ ಹಿಂತೆಗೆತದ ಕುರಿತು ಎಡಪಕ್ಷಗಳ ನಿಲುವು

ಪ್ರತಿದಿನ ಚಿನ್ನದ ಮೊಟ್ಟೆ ಇಡುವ ಕೋಳಿಯ ಹೊಟ್ಟೆಯನ್ನು ಕೊಯ್ದ ದಂಪತಿಗಳ ಕಥೆಯೊಂದನ್ನು ಕೇಳಿದ್ದೀರಲ್ಲವೇ? ಬಿಎಚ್‌ಇಎಲ್ ಸಂಸ್ಥೆಯ ಶೇರುಗಳನ್ನು ಮಾರಿ ಬಂಡವಾಳ ಹಿಂತೆಗೆಯುವ ಕೇಂದ್ರ ಸರ್ಕಾರದ ನಿರ್ಧಾರವನ್ನು ನೋಡಿದಾಗ ಇದೇ ಕಥೆ ನೆನಪಿಗೆ ಬರುತ್ತಿದೆ.

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಅತ್ಯಂತ ಮಹತ್ವ ಪಾತ್ರ ವಹಿಸುತ್ತಿರುವ 'ನವರತ್ನ'ಗಳು ಎಂದು ಕರೆಯಲಾದ ಮತ್ತು ಅತ್ಯಂತ ಲಾಭದಾಯಕವಾಗಿ ನಡೆಯುತ್ತಿರುವ ಸಾರ್ವಜನಿಕ ಉದ್ದಿಮೆಗಳಲ್ಲಿ ಒಂದಾದ ಬಿ.ಹೆಚ್.ಇ.ಎಲ್‌ನ ಶೇ.10ರಷ್ಟು ಬಂಡವಾಳವನ್ನು ಹಿಂತೆಗೆಯುವ ಕೇಂದ್ರ ಯುಪಿಎ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಎಡಪಕ್ಷಗಳು ಯುಪಿಎ ಮತ್ತು ಎಡಪಕ್ಷಗಳ ಸಮನ್ವಯ ಸಮಿತಿಯಲ್ಲಿ ಪಾಲ್ಗೊಳ್ಳದಿರುವ ತೀರ್ಮಾನ ಕೈಗೊಂಡಿವೆ.

2004 ರ ಚುನಾವಣೆಯ ನಂತರದ ಪರಿಸ್ಥಿತಿಯಲ್ಲಿ ಜನಾದೇಶವನ್ನು ಗಮನಿಸಿ ಎಡಪಕ್ಷಗಳು ಸಮಾನ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಕೇಂದ್ರ ಯುಪಿಎ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿವೆ. ಸಮಾನ ಕನಿಷ್ಠ ಕಾರ್ಯಕ್ರಮದ ಸಮರ್ಪಕ ಜಾರಿಯ ದೃಷ್ಟಿಯಿಂದ ರಚಿತವಾಗಿರುವ ಯುಪಿಎ - ಎಡಪಕ್ಷಗಳ ಸಮನ್ವಯ ಸಮಿತಿಯಲ್ಲಿಯೂ ಪಾಲ್ಗೊಳ್ಳುತ್ತಾ ಬಂದಿವೆ. ಹೆಮ್ಮೆಯ ಈ 'ನವರತ್ನ' ಕಂಪನಿಗಳು ತಮ್ಮ ಅಗತ್ಯಗಳಿಗಾಗಿ ಸಾರ್ವಜನಿಕರಿಂದ ಸಂಪನ್ಮೂಲ ಕ್ರೋಢೀಕರಿಸಿದರೂ ಸಹ ಅವು ಸರ್ಕಾರದ ಒಡೆತನದಲ್ಲೇ ಇರಬೇಕು. ಅವುಗಳನ್ನು



ಖಾಸಗೀಕರಿಸಬಾರದು ಎಂಬ ಅಂಶವು ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಸ್ಪಷ್ಟವಾಗಿದ್ದರೂ ಸಹ ಕೇಂದ್ರ ಸರ್ಕಾರ ಸತತವಾಗಿ ಈ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದತ್ತ ತುಡಿಯುತ್ತಿದೆ. ಜನತೆಯ ಮತ್ತು ಒಟ್ಟು ರಾಷ್ಟ್ರದ ಹಿತಾಸಕ್ತಿಗೆ ಮಾರಕವಾದ ಈ ನೀತಿಯನ್ನು ಎಡಪಕ್ಷಗಳು ಪ್ರತಿರೋಧಿಸುತ್ತಲೇ ಬಂದಿವೆ.

ಇದೀಗ ಕೇಂದ್ರ ಸರ್ಕಾರವು ಏಕಾಏಕಿ ಬಿಎಚ್‌ಇಎಲ್ ಸಂಸ್ಥೆಯ ಶೇ.10 ಶೇರು ವಿಕ್ರಯದ ಮೂಲಕ ಬಂಡವಾಳ ಹಿಂತೆಗೆಯಲು ತೀರ್ಮಾನಿಸಿದೆ. 2005-06ರ ಬಜೆಟ್‌ನ ಅಗತ್ಯಕ್ಕಾಗಿ ಇದರಿಂದ 10 ಸಾವಿರ ಕೋಟಿ ರೂಪಾಯಿಗಳನ್ನು ಹೊಂದಿಸಲು ಸರ್ಕಾರ ಉದ್ದೇಶಿಸಿದೆ.

ಸಮನ್ವಯ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ ಎಡಪಕ್ಷಗಳ ನಿರ್ಧಾರದ ಸಂಬಂಧ ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿಯವರಿಗೆ ಪತ್ರ ಬರೆದ ಅನಂತರ ಅವರ ವಿನಂತಿಯ ಮೇರೆಗೆ ಎಡಪಕ್ಷಗಳ ಪರವಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಪ್ರಕಾಶ್ ಕಾರಟ್, ಸಿಪಿಐ ರಾಷ್ಟ್ರೀಯ ಮಂಡಳಿ ಕಾರ್ಯದರ್ಶಿ ಕಾಂ॥ ಡಿ.ರಾಜಾರವರು ಸೋನಿಯಾ ಗಾಂಧಿಯವರೊಂದಿಗೆ ಈ ಸಂಬಂಧ ಚರ್ಚೆ ನಡೆಸಿದ್ದಾರೆ.

'ಬಂಡವಾಳ ಹಿಂತೆಗೆತದ ತೀರ್ಮಾನ ಏನೇ ಇದ್ದರೂ ಶೇ.51ರಷ್ಟು ಷೇರುಗಳು ಸರ್ಕಾರದ ಕೈಯಲ್ಲೇ ಇರುತ್ತವೆ' ಈ ಸಂಬಂಧ

'ರಾಷ್ಟ್ರೀಯ ಬಂಡವಾಳ ಹೂಡಿಕೆ ನಿಧಿ'ಯೊಂದನ್ನು ಸ್ಥಾಪಿಸಲಾಗುವುದು ಎಂಬ ಸರ್ಕಾರದ ಸಮರ್ಥನೆಗಳನ್ನು ಎಡಪಕ್ಷಗಳು ತಳ್ಳಿಹಾಕಿವೆ.

ಶೇ.51ರಷ್ಟು ಷೇರು ಸರ್ಕಾರಿ ಒಡೆತನ ಎಂದರೆ ಶೇ.49ರಷ್ಟು ಷೇರು ಖಾಸಗಿ ಪಾಲು ಎಂದೇ ಅರ್ಥ. ಈ ಶೇ.49ರ ಪಾಲಿಗೆ ಮತ್ತೆ ಶೇ.2 ಷೇರು ಸೇರಿಸಿ ಸಂಸ್ಥೆಯನ್ನು ಖಾಸಗೀಕರಿಸುವುದು ಆಗ ಸರಾಗವಾದ ಕೆಲಸವಾಗುತ್ತದೆ. ಹೀಗಾಗಿ ಈ ನೀತಿ ಖಾಸಗೀಕರಣಕ್ಕೆ ಹಸಿರು ಬಾವುಟ ತೋರಿಸಿದಂತೆ ಮತ್ತು 'ರಾಷ್ಟ್ರೀಯ ಬಂಡವಾಳ ಹೂಡಿಕೆ ನಿಧಿ'ಯನ್ನು ಸ್ಥಾಪಿಸುವುದು ಎಂದರೆ ಮತ್ತೆ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮಾಡುವ ಸರ್ಕಾರದ ನೀತಿಯನ್ನು ಬೆಂಬಲಿಸಿದಂತೆಯೇ ಆಗುತ್ತದೆ ಎಂಬುದು ಎಡಪಕ್ಷಗಳ ದೃಢವಾದ ನಿಲುವು.

ಸಮನ್ವಯ ಸಮಿತಿ ಸಭೆಗಳಲ್ಲಿ ಎಡಪಕ್ಷಗಳು ಎತ್ತುತ್ತಿರುವ ನಿರಂತರ ಜನಪರ ಪ್ರಶ್ನೆ - ಕಾಳಜಿಗಳನ್ನು ನಿರ್ಲಕ್ಷಿಸುತ್ತಾ ತನ್ನದೇ ದಾರಿಯಲ್ಲಿ ಸಾಗುತ್ತಿರುವ ಕೇಂದ್ರ ಸರ್ಕಾರ, ಪ್ರಥಮವಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಗಂಭೀರವಾಗಿ ಉಲ್ಲಂಘಿಸಿ ನಡೆಯುತ್ತಿರುವಾಗ ಎಡಪಕ್ಷಗಳು ಸಮನ್ವಯ ಸಮಿತಿಯಲ್ಲಿ ಪಾಲ್ಗೊಳ್ಳುವುದರಲ್ಲಿ ಏನು ಅರ್ಥವಿಲ್ಲ ಎಂದಿರುವ ಎಡಪಕ್ಷಗಳು, ಸೋನಿಯಾಗಾಂಧಿ ಮತ್ತಿತರ ವಿನಂತಿಯ ನಂತರವೂ ತಮ್ಮ ತೀರ್ಮಾನಕ್ಕೆ ದೃಢವಾದ ಬದ್ಧತೆ ಘೋಷಿಸಿವೆ. ಎಡಪಕ್ಷಗಳ ಕಾಳಜಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು ಎಂಬ ಸರ್ಕಾರದ ಭರವಸೆ ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಕಿರ್ಜಿಗಿಸ್ತಾನಕ್ಕೂ 'ಡಾಲರ್ ಡೆಮಾಕ್ರಸಿ' ಬಂತು



ಶರತ್ ಚಂದ್ರ

ಏನಿದು 'ಡಾಲರ್ ಡೆಮೊಕ್ರಸಿ'? ಚುನಾವಣಾ ಪೂರ್ವದಲ್ಲಿ ಯೋಜಿತವಾಗಿ ಸನ್ನಿವೇಶ ಸೃಷ್ಟಿಸಿ, ಚುನಾವಣೆಯಲ್ಲಿ ಅಥವಾ ಚುನಾವಣಾ ನಂತರ ಗಲಭೆ ಸೃಷ್ಟಿಸಿ ತಮಗೆ ಬಾಲಬಡುಕರಾಗಿರುವ ವ್ಯಕ್ತಿ-ಪಕ್ಷವನ್ನು ಸರ್ಕಾರಕ್ಕೆ ತರುವುದು. ಡಾಲರುಗಳನ್ನು ಬಳಸಿ ಹೊರಿಸಿದ ಡೊಮೊಕ್ರಸಿ'ಯ ಒಂದು ವಿಚಿತ್ರ ಪದ್ಧತಿ ಅಥವಾ ಡಾಲರ್ ಬಳಸಿ ಡೆಮೊಕ್ರಸಿಯ ನಾಟಕದಲ್ಲೇ ತಮಗೆ ಬೇಕಾದ ಸರ್ಕಾರ ಸ್ಥಾಪಿಸುವುದು. ಈ ತಂತ್ರಜ್ಞಾನವನ್ನು ಅಮೇರಿಕ ಈಗ ಪೂರ್ಣವಾಗಿ ಪಕ್ಕಾ ಮಾಡಿದೆ.

'ಡಾಲರ್ ಡೆಮೊಕ್ರಸಿ' ನಾಟಕದ ಅಂಕಗಳು

ಇದು ವಿದ್ಯಾರ್ಥಿಗಳು, ಯುವಕರ ಸಂಘಟನೆಯನ್ನು ದೊಡ್ಡ ಪ್ರಮಾಣದಲ್ಲಿ ದೇಶದ ತುಂಬಾ ವ್ಯಾಪಕವಾಗಿ ಪ್ರಾರಂಭಿಸುವ ಮೂಲಕ ಆರಂಭವಾಗುತ್ತದೆ. ಲಕ್ಷಾಂತರ ಡಾಲರುಗಳ ಹೊಳೆ ಹರಿಯುತ್ತದೆ. ಈ 'ಸಂಘಟನೆ' ಒಂದು ಕಡೆ ನೆಲೆ ಸ್ಥಾಪಿಸುತ್ತದೆ, ಇನ್ನೊಂದು ಕಡೆ ಪೂರ್ಣವಾಗಿ ಡಾಲರುಗಳ ನಿಯಂತ್ರಣದಲ್ಲಿ ಇರುತ್ತವೆ. ಆಗಾಗ ಸರ್ಕಾರದ ವಿರುದ್ಧ ಈ ಸಂಘಟನೆಗಳು ಭಾರಿ ಪ್ರಚಾರ-ಪ್ರಕ್ಷೋಭೆ ನಡೆಸುತ್ತವೆ. ಡಾಲರ್‌ಗಳಿಂದ ಒಂದು ವಿರೋಧಪಕ್ಷ ಮತ್ತು ವಿಧೇಯ ನಾಯಕನನ್ನು ಖರೀದಿಸಲಾಗುತ್ತದೆ. ಚುನಾವಣೆಯ ಹಲವು ತಿಂಗಳುಗಳ ಮೊದಲು ಪಾಶ್ಚಿಮಾತ್ಯ ಜನಮತಸಂಗ್ರಹ ಸಂಶೋಧನೆ ಸಂಸ್ಥೆಗಳು (ಇವುಗಳನ್ನು ಡಾಲರುಗಳಿಂದ ಕೊಳ್ಳಲಾಗುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ). ವಿರೋಧ ಪಕ್ಷ-ನಾಯಕ ಭಾರಿ ಬಹುಮತದಿಂದ ಗೆಲ್ಲುತ್ತಾರೆ ಎಂದು ಸಮೀಕ್ಷೆಗಳನ್ನು ಸತತವಾಗಿ ಪ್ರಕಟಿಸುತ್ತವೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಇದು ತಾರಕಕ್ಕೇರುತ್ತದೆ. ಇದು ಚುನಾವಣೆಯ ಮೇಲೆನೇ ಪ್ರಭಾವ ಬೀರುತ್ತದೆ. ಒಂದು ವೇಳೆ ಇವೆಲ್ಲ ಕೆಲಸ ಮಾಡದೆ, ಡಾಲರ್-ವಿಧೇಯ ಪಕ್ಷ/ ಅಭ್ಯರ್ಥಿ ಸೋತರೆ, ಚುನಾವಣೆ 'ಅಕ್ರಮ' ಎಂದು ಗದ್ದಲ ಎಬ್ಬಿಸುವುದು. ಇಲ್ಲೂ ಸುದ್ದಿ ಸಂಸ್ಥೆಗಳು, ಜನಮತ-ಸಂಗ್ರಹ ಸಂಸ್ಥೆಗಳು ಕೆಲಸಕ್ಕಿಳಿಯುತ್ತವೆ. ಅಕ್ರಮಗಳಿಗೆ ಒಂದೇ ಪುರಾವೆ - (ಅವರೇ ನಡೆಸಿದ) ಜನಮತ ಸಂಗ್ರಹಕ್ಕೂ, ಚುನಾವಣೆ ಫಲಿತಾಂಶಕ್ಕೂ ಇರುವ ಭಾರಿ ಅಂತರ! - ಇದ್ದರೂ ಸಾಕು! ಮೂರ್ತಿ ಗದ್ದಲ ಎಬ್ಬಿಸಿ, ಅಗತ್ಯ ಬಿದ್ದರೆ ಹಿಂಸಾಚಾರ ಮಾಡಿ, 'ಅಂತರ್ರಾಷ್ಟ್ರೀಯ' ಒತ್ತಡ ತಂದು ಅಂತೂ 'ಸರ್ಕಾರ' ಬದಲಾಯಿಸುವುದು. ಈ ತಂತ್ರ ಸರ್ಬಿಯಾದಲ್ಲಿ, ಜಾರ್ಜಿಯಾದಲ್ಲಿ, ಉಕ್ರೇನ್‌ನಲ್ಲಿ ಈಗಾಗಲೇ ಬಳಸಲಾಗಿದೆ. ಹಲವೊಮ್ಮೆ ಆಗಿನ ಸರ್ಕಾರದಲ್ಲಿ

21ನೇ ಶತಮಾನದಲ್ಲಿ ಅಮೆರಿಕ ತನಗೆ ಬೇಡವಾದ ದೇಶಗಳ ಸರ್ಕಾರಗಳನ್ನು ಬದಲಾಯಿಸುವ ತಂತ್ರಜ್ಞಾನವನ್ನು ಪಕ್ವಗೊಳಿಸಿದೆ. ಒಂದು ಕಡೆ ಅಫಘಾನಿಸ್ತಾನ, ಯುಗೋಸ್ಲಾವಿಯಾ, ಇರಾಕ್‌ನಂತೆ 'ಮಿಲಿಟರಿ-ಮನವತಾವಾದಿ(!) ಮಧ್ಯಪ್ರವೇಶ'ದಿಂದ, ಇನ್ನೊಂದು ಸರ್ಬಿಯಾ, ಜಾರ್ಜಿಯಾ, ಉಕ್ರೇನ್‌ಗಳಂತೆ 'ಡಾಲರ್ ಡೆಮೊಕ್ರಸಿ' ಬಳಸಿತು, ಈಗ ಈ ಡಾಲರ್ ಡೆಮೊಕ್ರಸಿ ಕಿರ್ಜಿಗಿಸ್ತಾನ್‌ಗೂ ಬಂದಿದೆ.


ಪೊಲೀಸ್, ಸೈನ್ಯದ ಕೆಲವು ಅಫೀಸರುಗಳು, ಸರ್ಕಾರಿ ಅಧಿಕಾರಿಗಳು ಇದರಲ್ಲಿ ಗುಪ್ತವಾಗಿ ಶಾಮೀಲಾಗುವುದು ಇದೆ.

ಕಿರ್ಜಿಗಿಸ್ತಾನಕ್ಕೂ ಬಂತು

ಇದೇ 'ಡಾಲರ್ ಡೆಮಾಕ್ರಸಿ' ಕಿರ್ಜಿಗಿಸ್ತಾನಕ್ಕೂ ಬಂದಿದೆ, ಈಗ ಕಿರ್ಜಿಗಿಸ್ತಾನಕ್ಕೆ ವಿಶೇಷ ಮಹತ್ವವಿದೆ. ಚೀನಾದ ಪಶ್ಚಿಮ ಗಡಿ ಹೊಂದಿರುವ ಮಾಜಿ - ಸೋವಿಯತ್ ದೇಶ ಇದು. ಚೀನಾ ಕಟ್ಟಿದ ಆರು - ದೇಶಗಳ ಕೂಟ ಶಾಂಘಾಯಿ ಸಹಕಾರ ಸಂಘಟನೆಯ ಸದಸ್ಯ/ ಆದರೂ ಕಿರ್ಜಿಗಿಸ್ತಾನದಲ್ಲಿ ಅಮೆರಿಕನ್ ಸೇನಾ ನೆಲೆ ಇದೆ. ಅಫಘಾನಿಸ್ತಾನ ಯುದ್ಧದಲ್ಲಿ ಹಿಂದೆ ಮತ್ತು ಈಗಲೂ ಆ ದೇಶದ ಮೇಲೆ ನಿಗಾ ಇಡಲು ಈ ನೆಲೆಗಳನ್ನು ಬಳಸಲಾಗುತ್ತಿದೆ. ಅಫಘಾನಿಸ್ತಾನದಲ್ಲಿ 'ಮಿಲಿಟರಿ - ಮಾನವತಾವಾದಿ'(!) ಕಾರ್ಯಾಚರಣೆ ನಡೆಸಲು ಅಮೆರಿಕ ಮತ್ತು ಕಿರ್ಜಿಗಿಸ್ತಾನದ ನಡುವೆ ಒಪ್ಪಂದವೂ ಇದೆ.

ಹೊಸ ಅಧ್ಯಕ್ಷರಿಗಾಗಿ ಚುನಾವಣೆ ಈ ವರ್ಷದ ನವಂಬರ್ - ಡಿಸೆಂಬರ್‌ನಲ್ಲಿ ನಡೆಯುವುದು ಇತ್ತು. ಫೆಬ್ರುವರಿ - ಮಾರ್ಚಿನಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಅಮೇರಿಕನ್ ಪರ ವಿರೋಧ ಪಕ್ಷಕ್ಕೆ ಗೆಲುವಾಗಲಿಲ್ಲ. ವಿರೋಧ ಪಕ್ಷಕ್ಕೆ ಕೇವಲ 6 ಸೀಟುಗಳು ಬಂದವು - 75 ಸೀಟುಗಳಲ್ಲಿ 'ಡಾಲರ್ ಡೆಮೊಕ್ರಸಿ' ನಾಟಕದ ಕೊನೆಯ ಅಂಕ ಆರಂಭವಾಯಿತು. ವಿರೋಧ ಪಕ್ಷ ನಡೆಸಿದ ಪ್ರದರ್ಶನ - ಗಲಭೆಗಳು ಹಿಂಸಾತ್ಮಕವಾಗಿದ್ದವು. ಅಧ್ಯಕ್ಷೀಯ ಭವನ ಸುತ್ತುವರೆದು ವಶಪಡಿಸಿಕೊಳ್ಳಲಾಯಿತು. ಅಧ್ಯಕ್ಷ ಅಕಯೇವ್ ರಶ್ಯಕ್ಕೆ ಓಡಿ ಹೋದ. ಅಲ್ಲಿಂದ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟ. ಈ ನಡುವೆ ಇಬ್ಬರು, ಅಧ್ಯಕ್ಷೀಯ ಅಭ್ಯರ್ಥಿಗಳು ತಾತ್ಕಾಲಿಕ ಸರ್ಕಾರದಲ್ಲಿ ಯಾರು ಇರಬೇಕು ಎಂಬುದರ ಬಗ್ಗೆ ಕಿತ್ತಾಡಲು ಆರಂಭಿಸಿದರು. ಒಬ್ಬ ಅಧ್ಯಕ್ಷೀಯ ಅಭ್ಯರ್ಥಿ ಬಡಿಯೆವ್ 2000ದಲ್ಲಿ ಆಯ್ಕೆಯಾದ ಎಂ.ಪಿ.ಗಳು ಮುಂದುವರೆಯಬೇಕೆಂದು ಒತ್ತಾಯಿಸುತ್ತಿದ್ದರು. ಕುಲೋವ್ (ಇನ್ನೊಬ್ಬ ಅಭ್ಯರ್ಥಿ) ಈಗ ಚುನಾಯಿತರಾದ ಎಂ.ಪಿ.ಗಳು ಇರಬೇಕು. ಆಮೇಲೆ ನಡೆದ ಮಾತುಕತೆಗಳಲ್ಲಿ ಬಡಿಯವ್ ಸ್ಪರ್ಧಿಯಾಗಿ ಈಗಿನ ಚುನಾಯಿತ ಎಂ.ಪಿ.ಗಳು ಮಂತ್ರಿಗಳಾಗುವ ಫಾರ್ಮುಲಾ ರೂಪಿಸಲಾಯಿತು. ಇದು ಯಾವ 'ಡೆಮಾಕ್ರಸಿ'?

1.2 ಕೋಟಿ ಡಾಲರು ಡೆಮೊಕ್ರಸಿ ಖರೀದಿಸಲು!



ಮಾಜಿ ಅಧ್ಯಕ್ಷ ಅಕಯೇವ್ — ಹಂಗಾಮಿ ಅಧ್ಯಕ್ಷ-ಪ್ರಧಾನಿ ಬಕಿಯೇವ್

ಈ ಎಲ್ಲಾ ಘಟನೆಗಳ ಹಿಂದೆ ಸುಮಾರು 50 ಸರ್ಕಾರದ ಸಂಘಟನೆಗಳು ಕೆಲಸ ಮಾಡಿವೆ. ಇವಕ್ಕೆ ಅಮೆರಿಕದಿಂದ ಭಾರಿ ಹಣ ಬಂದಿದೆಯಂತೆ. 1992ರಲ್ಲಿ ಅಮೆರಿಕದ ಪಾರ್ಲಿಮೆಂಟು ಮಂಜೂರು ಮಾಡಿದ 'ಫ್ರೀಡಂ ಸಪೋರ್ಟ್ ಆಕ್ಟ್'. ಇದು ಮಾಜಿ ಸೋವಿಯೆತ್ ಗಣರಾಜ್ಯಗಳು 'ಆರ್ಥಿಕ ಮತ್ತು ಡೆಮೊಕ್ರಸಿ ಬದಲಾವಣೆ'ಗಳನ್ನು ಮಾಡಲು 'ಸಹಾಯ' . 1.2 ಕೋಟಿ ಡಾಲರುಗಳನ್ನು 2004 ಒಂದೇ ವರ್ಷದಲ್ಲಿ ಖರ್ಚು ಮಾಡಲಾಯಿತು. ಇದಲ್ಲದೆ ಲಕ್ಷಾಂತರ ಡಾಲರುಗಳು ಎನ್‌ಇಡಿ ಮುಂತಾದ ಸರ್ಕಾರದ ಬೆಂಬಲದ ಮೇಲೆ ನಿಂತಿರುವ ಸಂಸ್ಥೆಗಳಲ್ಲಿಯೂ ಬಂತು. ಕಿರ್ಜಿಗಿಸ್ತಾನದಲ್ಲಿ 'ನೇಶನಲ್ ಡೆಮೊಕ್ರಸಿ ಇನ್ಸ್‌ಟಿಟ್ಯೂಟ್' ಎಂಬ ಹೆಸರಲ್ಲಿ ಹಲವು ಕೇಂದ್ರಗಳನ್ನು ಸ್ಥಾಪಿಸಲಾಯಿತು. ಇದು ಕಾರ್ಯಕರ್ತರು - ನಾಗರಿಕರಿಗೆ ಸಭೆ ನಡೆಸಲು, ತರಬೇತಿ ಪಡೆಯಲು, ಅಮೇರಿಕದಲ್ಲಿ ಪ್ರಚಾರ ಸಾಹಿತ್ಯ ಪ್ರಚಾರ ವಹಿಸಲು, ಟಿ.ವಿ. ಕಾರ್ಯಕ್ರಮ, ನೆಟ್‌ಸೈಟ್ ತಯಾರಿಸಲು ಬಳಸಲಾಯಿತು. ಅಮೆರಿಕನ್ ವಿಶ್ವವಿದ್ಯಾಲಯ ಸಹ ತೆರೆಯಲಾಯಿತು. ಇದರ ಯೋಜನೆಗಳ ಅಂಗವಾಗಿ ವಿದ್ಯಾರ್ಥಿಗಳನ್ನು, ಕಾರ್ಯಕರ್ತರನ್ನು ಅಮೆರಿಕಕ್ಕೆ ತರಬೇತಿಗೆ ಕಳಿಸಲಾಯಿತು. ಹೊಸ ಪ್ರಧಾನಿ ಬಕಿಯೇವ್ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರಂತೆ? ಇಂತಹ ಸಂಘಟನೆಗಳೇ, ಕಿರ್ಜಿಗಿಸ್ತಾನ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಗದ್ದಲ ಎಬ್ಬಿಸಿದ್ದು'.

ಚುನಾವಣೆಗಳ ಮೊದಲು ಒಂದು ಪತ್ರಿಕೆ (ಇದಕ್ಕೆ ಡೆಮಾಕ್ರಸಿ ಡಾಲರುಗಳ ಹಿಂದಿದ್ದವು ಎಂದು ಬೇರೆ ಹೇಳಬೇಕಾಗಿಲ್ಲ) ಅಧ್ಯಕ್ಷ ಅಕಯೆತ್ 'ಭ್ರಷ್ಟ' 'ಸರ್ವಾಧಿಕಾರಿ' ಎಂದೆಲ್ಲ ಭಾರಿ ಪ್ರಚಾರ ನಡೆಸಿತು. 'ಸರ್ವಾದಿಕಾರಿಗಳನ್ನು ಸೋಲಿಸುವುದು ಹೇಗೆ?' ಎಂಬ ಲೇಖನಮಾಲೆ ಪ್ರಕಟಿಸಿತು. ಇವೆಲ್ಲ ಸಾಕಷ್ಟು ಮುಕ್ತ ರಾಜಕೀಯ ಹಸ್ತಕ್ಷೇಪದ ಜತೆ, ಅಮೇರಿಕನ್ ರಾಯಭಾರಿ ಇನ್ನೂ ಮುಕ್ತವಾಗಿ ಹೇಳಿಕೆ ನೀಡಿದ (ಈಗ ಪ್ರಧಾನಿ ಆಗಿರುವ ? ಬಕಿಯೆವ್ ಅಮೆರಿಕಕ್ಕೆ ಇಷ್ಟವಾದ ಅಭ್ಯರ್ಥಿ ಎಂದು ಬಹಿರಂಗವಾಗಿ ಹೇಳಿದ. ಬಡಿಯೆನ್ ಈಗ ತಾತ್ಕಾಲಿಕ ಅಧ್ಯಕ್ಷ.

ಈ 'ಡಾಲರ್ ಡೆಮೊಕ್ರಸಿ'ಯನ್ನು ಇನ್ನಷ್ಟು ಮಾಜಿ ಸೋವಿಯೆತ್ ಗಣರಾಜ್ಯಗಳಲ್ಲಿ ತರುವ ಯೋಜನೆ ಅಮೆರಿಕಕ್ಕೆ ಇದೆ. ಕೊನೆಯಲ್ಲಿ ಇದನ್ನು ರಶ್ಯದ ಮೇಲೂ ಪ್ರಯೋಗಿಸಲಾಗುತ್ತದೆ. ಅದಕ್ಕೆ ಇವೆಲ್ಲ ರಿಹರ್ಸಲ್ ಸಹ. ○

ದರಗಳ ಏರಿಕೆ ವಿರುದ್ಧ ವ್ಯಾಪಕ ಪ್ರತಿಭಟನೆ

ಪುಟ 4 ರಿಂದ

ದರ ಏರಿಕೆಯನ್ನೂ ವಿರೋಧಿಸಿ ಪ್ರತಿಭಟಿಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾ ಕಾರರನ್ನು ಉದ್ದೇಶಿಸಿ ಸಿಪಿಎಂ ಪಕ್ಷದ ಸ್ಥಳೀಯ ಸಮಿತಿ ಕಾರ್ಯದರ್ಶಿ ಡಿ.ಎಸ್.ಶರಣಬಸವ ಮಾತನಾಡಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡುವ ಕ್ರಮವನ್ನು ಖಂಡಿಸಿದರು. ಇದೇ ನೆಪವಾಗಿಟ್ಟುಕೊಂಡು ಕರ್ನಾಟಕ ರಾಜ್ಯ ಸರಕಾರ ಬಸ್ ಪ್ರಯಾಣ ದರವನ್ನು ಹೆಚ್ಚಳ ಮಾಡಿರುವುದು, ಕೇಂದ್ರ ಸರಕಾರದ ಮೇಲೆ ಹೊರೆ ಹಾಕಿ ರಾಜ್ಯ ಸರಕಾರ ತಪ್ಪಿಸಿಕೊಳ್ಳುವ ಬದಲು ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿನ ಸೋರುವಿಕೆಯನ್ನು ತಡೆಗಟ್ಟುವಲ್ಲಿ ಮುಂದಾಗಬೇಕೆಂದರು.



ಪ್ರತಿಭಟನೆಯ ನೇತೃತ್ವವನ್ನು ಸಿಪಿಐಎಂ ಪಕ್ಷದ ಮುಖಂಡರಾದ ವೈ.ಈರಣ್ಣ, ಖಾಜುಹುಸೇನ್, ಕೆ.ಜಿ.ವೀರೇಶ್, ಅರುಣಕುಮಾರ್, ಎಂ.ಸಿ.ಶಿವಕುಮಾರ್, ಲಕ್ಷ್ಮಣ, ಪಂಪಣ್ಣ, ಕೆ.ಮಲ್ಲೇಶಪ್ಪ, ಮಹಾದೇವ ವಹಿಸಿದ್ದರು. ಪ್ರತಿಭಟನೆಯಲ್ಲಿ ವೆಂಕಟೇಶ್ ನಾಯಕ್, ಸವಾರಪ್ಪ, ತಿರುಮಲೇಶ, ಉಮೇಶ, ಪ್ರಭು, ಕೆ.ರವಿಕುಮಾರ್ ಯಾದವ್, ಹಾಜಿ, ಜಾವೀದ್, ರಾಜೇಂದ್ರ, ಎಸ್,ಎನ್. ಪೀರ್ ದೌಲತ್, ಬಾಬಾ, ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಭಾಗವಹಿಸಿದ್ದರು.

ಬಿಜಾಪುರದಲ್ಲಿ ಮೆರವಣಿಗೆ

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ, ಬಸ್ ದರ ಏರಿಕೆ ಹಾಗೂ ಸಾರ್ವಜನಿಕ ಸಂಸ್ಥೆಗಳ ಷೇರು ಖಾಸಗಿಯವರಿಗೆ ಮಾರುವುದನ್ನು ವಿರೋಧಿಸಿ ಸಿಪಿಐ ಹಾಗೂ ಸಿಪಿಐ(ಎಂ) ಪಕ್ಷಗಳು ನಗರದಲ್ಲಿ ಜೂನ್ 28ರಂದು ಪ್ರತಿಭಟನಾ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿ ಮುಖಾಂತರ ರಾಷ್ಟ್ರಪತಿಗಳಿಗೂ ಹಾಗೂ ರಾಜ್ಯಪಾಲರಿಗೂ ಮನವಿ ಪತ್ರ ಅರ್ಪಿಸಲಾಯಿತು. ಮೆರವಣಿಗೆಯುದ್ದಕ್ಕೂ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ, ಬಸ್ ದರ ಏರಿಕೆ ವಿರುದ್ಧ, ಸಾರ್ವಜನಿಕ ಸಂಸ್ಥೆಗಳ ಶೇರುಗಳನ್ನು ಖಾಸಗಿಯವರಿಗೆ ಮಾರುವುದರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ನಂತರ ಜಿಲ್ಲಾಧಿಕಾರಿ ಕಛೇರಿ ಮುಂದೆ ನಡೆದ ಬಹಿರಂಗ ಸಭೆಯಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರ ಮಾತನಾಡಿ ರಾಜ್ಯದ ಸಮ್ಮಿಶ್ರ ಸರ್ಕಾರವು ಬಸ್ ದರ ಏರಿಕೆಯನ್ನು ಮಾಡಿ ಸಾರ್ವಜನಿಕರಿಗೆ ಇನ್ನಷ್ಟು ಬೆಲೆ ಏರಿಕೆಯ ಬಿಸಿ ಮುಟ್ಟಿಸಿದೆ ಎಂದು ಟೀಕಿಸಿದರು. ಇದನ್ನು ಕೂಡಲೇ ಹಿಂದಕ್ಕೆ ಪಡೆಯಬೇಕೆಂದು ಹಾಗೂ ಶಾಲಾ ಮಕ್ಕಳಿಗೆ ಆಗಿರುವ ಪಠ್ಯಪುಸ್ತಕಗಳ ಕೊರತೆಯನ್ನು ಕೂಡಲೇ ಸರಿಪಡಿಸಬೇಕೆಂದು ಆಗ್ರಹಿಸಿದರು.

ಈ ಕಾರ್ಯಕ್ರಮದಲ್ಲಿ ಸಿಪಿಐನ ಜಿಲ್ಲಾ ಕಾರ್ಯದರ್ಶಿ ಅಶೋಕ ಚಂಚಲಕರ, ಪ್ರಕಾಶ ಹಿಟ್ನಳ್ಳಿ, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಭೀಮಶಿ ಕಲಾದಗಿ, ತಾಲೂಕಾ ಅಧ್ಯಕ್ಷರಾದ ಪರುತಯ್ಯ ಹಿರೇಮಠ, ನಬೀಸಾ ಡವಳಗಿ, ರಾಮಣ್ಣ ಶಿರಾಗೋಳ, ಡಿ.ವೈ.ಎಫ್.ಐ.ನ ಮುಖಂಡರಾದ ಬಸಲಿಂಗಪ್ಪ ಕಪಾಲಿ, ರಾಜಶೇಖರ ಕಳಗೊಂಡ, ಲಿಂಗರಾಜ ಬಿದರಕುಂದಿ, ಕಾರ್ಮಿಕರ ಮುಖಂಡರಾದ ವಿ.ಎಂ.ಸೊನ್ನದ, ಜನವಾದಿ ಮಹಿಳಾ ಸಂಘಟನೆ ಜಿಲ್ಲಾಧ್ಯಕ್ಷರಾದ ಲಕ್ಷ್ಮಿ ಮೈಲಾರಿ, ಜಯಾ ಪವಾರ, ಜೈನುಬ್ಬಿ ಬದಾಮಿ, ಶಕೀಲಾ ಜಮಾದಾರ, ಸೋನಾಬಾಯಿ ಬ್ಯಾಳಿ, ಸಾವಿತ್ರಿ ಸಾಳುಂಕೆ, ಸಂತೆ ವ್ಯಾಪಾರಸ್ಥರ ಸಂಘದ ಸಿದ್ದಪ್ಪ ಧಾರವಾಳ ಮುಂತಾದ ಮುಖಂಡರು ಪಾಲ್ಗೊಂಡಿದ್ದರು. ●



ಬೆಂಗಳೂರು ಮಹಾನಗರದ - ನಗರ ಪಾಲಿಕೆಯು ಕಾಂ. ಸೂರಿ ಮತ್ತು ಅವರ ಕೊಡುಗೆಗಳನ್ನು ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ ಉತ್ತಮ ಕ್ರಮವೊಂದನ್ನು ಕೈಗೊಂಡಿದೆ. ಕಾಂ. ಸೂರಿಯವರು ಬಹುಕಾಲ ವಾಸವಾಗಿದ್ದ, ಈಗಲೂ ಕಾಂ. ಸೂರಿಯವರ ಕುಟುಂಬ ವಾಸವಿರುವ ಜಯನಗರ 9ನೇ ಬ್ಲಾಕ್‌ನ 38ನೇ ಅಡ್ಡರಸ್ತೆಯ ಮನೆಯ ಬಳಿ ಇರುವ 'ಈಸ್ಟ್ ಎಂಡ್' ಮುಖ್ಯರಸ್ತೆಗೆ ಕಾರ್ಮಿಕರ ಕಣ್ಮಣಿ 'ಕಾಮ್ರೇಡ್ ಸೂರ್ಯನಾರಾಯಣ ರಾವ್ ರಸ್ತೆ' ಎಂದು ಹೆಸರಿಸಲಾಗಿದೆ.

'ಕಾಮ್ರೇಡ್ ಸೂರ್ಯನಾರಾಯಣ ರಾವ್ ರಸ್ತೆ'

ನಾಮಕರಣ ಸಮಾರಂಭ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನೇತಾರರು, ಕರ್ನಾಟಕ ರಾಜ್ಯ ಕಾರ್ಮಿಕ ಚಳುವಳಿಯ ಧ್ರುವತಾರೆ, 'ಕಾಂ. ಸೂರಿ' ಎಂದೇ ಖ್ಯಾತರಾದ ಕಾಮ್ರೇಡ್ ಸ್ವಾಮಿರಾವ್ ಸೂರ್ಯನಾರಾಯಣ ರಾವ್ ಅವರು ನಮ್ಮನ್ನಗಲಿ ಜುಲೈ 1, 2005 ಕ್ಕೆ ಮೂರು ವರ್ಷಗಳು ತುಂಬಿವೆ. ಕಮ್ಯುನಿಸ್ಟ್-ಕಾರ್ಮಿಕ ಚಳುವಳಿಯ ಈ ಹಿರಿಯ ಚೇತನ ತಮ್ಮ ಜೀವನದುದ್ದಕ್ಕೂ ತೊಡಗಿಸಿಕೊಂಡ, ಅರ್ಪಿಸಿಕೊಂಡ ಚಳುವಳಿಯ ಒಂದು ಪ್ರಮುಖ ಕೇಂದ್ರವಾದ ಬೆಂಗಳೂರು ಮಹಾನಗರದ - ನಗರ ಪಾಲಿಕೆಯು ಕಾಂ. ಸೂರಿ ಮತ್ತು ಅವರ ಕೊಡುಗೆಗಳನ್ನು ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ ಉತ್ತಮ ಕ್ರಮವೊಂದನ್ನು ಕೈಗೊಂಡಿದೆ.

ಕಾಂ. ಸೂರಿಯವರು ಬಹುಕಾಲ ವಾಸವಾಗಿದ್ದ, ಈಗಲೂ ಕಾಂ. ಸೂರಿಯವರ ಕುಟುಂಬ ವಾಸವಿರುವ ಜಯನಗರ 9ನೇ ಬ್ಲಾಕ್‌ನ 38ನೇ ಅಡ್ಡರಸ್ತೆಯ ಮನೆಯ ಬಳಿ ಇರುವ 'ಈಸ್ಟ್ ಎಂಡ್' ಮುಖ್ಯರಸ್ತೆಗೆ ಕಾರ್ಮಿಕರ ಕಣ್ಮಣಿ 'ಕಾಮ್ರೇಡ್ ಸೂರ್ಯನಾರಾಯಣ ರಾವ್ ರಸ್ತೆ' ಎಂದು ಹೆಸರಿಸಲಾಗಿದೆ. ಜುಲೈ 1, 2005 ರಂದು ಇದೇ ಈ ನಾಮಕರಣ ಸಮಾರಂಭವನ್ನು ಬೆಂಗಳೂರು ಮಹಾನಗರ ಪಾಲಿಕೆಯು ಕಾಂ. ಸೂರಿಯವರ ಮನೆಯ ಮುಂಭಾಗದಲ್ಲಿ ಸಂಘಟಿಸಿತ್ತು.

ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರು, ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರೂ ಆದ ಶ್ರೀ ರಾಮಲಿಂಗಾರೆಡ್ಡಿಯವರು ರಸ್ತೆ ನಾಮಫಲಕವನ್ನು ಅನಾವರಣ ಮಾಡಿದರು. ಹಾಗೂ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಸಿಐಟಿಯು ರಾಜ್ಯಪ್ರಧಾನ ಕಾರ್ಯದರ್ಶಿಗಳೂ ಆದ ಕಾಂ. ವಿ.ಜೆ.ಕೆ.ನಾಯರ್, ಕಾಂ. ಸೂರಿಯವರ ಪತ್ನಿ ಶ್ರೀಮತಿ ಯಶೋಧಾ ಸೂರ್ಯನಾರಾಯಣ ರಾವ್, ನಾಮಕರಣಗೊಂಡ ಮುಖ್ಯರಸ್ತೆಯು ವ್ಯಾಪಿಸಿಕೊಂಡಿರುವ ಮಹಾನಗರ ಪಾಲಿಕೆಯ ಮೂರು ವಾರ್ಡುಗಳ ಚುನಾಯಿತ ಸದಸ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸೂರಿಯವರ ಬಹುಕಾಲದ ಒಡನಾಡಿ ಕಾಂ. ವಿ.ಜೆ.ಕೆ.ನಾಯರ್‌ರವರು, ಕಾಂ. ಸೂರ್ಯನಾರಾಯಣ ರಾವ್ ನಮ್ಮನ್ನಗಲಿ ಮೂರು ವರ್ಷಗಳಾಗಿವೆ. ಈ ನಡುವಿನ ಅವಧಿಯಲ್ಲಿ ಅವರ ನಾಯಕತ್ವ ಮತ್ತು ಮಾಗದರ್ಶನದ ಅಗತ್ಯತೆ ನಮಗೆ ಆಗಾಗ್ಗೆ ಮನದಟ್ಟಾಗುತ್ತಲೇ ಇದೆ. ಕಾಂ. ಸೂರಿಯವರು ತೀರಿಕೊಂಡ ಮೇಲೂ ಅವರ ವರ್ಚಸ್ಸು ಬೆಳೆಯುತ್ತಲೇ ಹೋಗುತ್ತಿದೆ.

ಕೈಗಾರಿಕಾ ರಂಗ ಹಿಂದೆ ಇದ್ದಂತೆ ಈಗ ಇಲ್ಲ. ಹಲವಾರು ಗಿರಣಿಗಳು, ಕಾರ್ಖಾನೆಗಳು ಮುಚ್ಚಿವೆ. ಹೊಸ ಹೊಸ ಕಾರ್ಖಾನೆಗಳು ಬಂದು ಹೊಸ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇಂತಹ ಸನ್ನಿವೇಶದಲ್ಲಿ ಕಾಂ. ಸೂರಿಯವರ ಮಾರ್ಗದರ್ಶನ ಅಗತ್ಯವಾಗಿತ್ತು. ಸೂರಿಯವರು ನಮ್ಮೊಂದಿಗಿಲ್ಲದಿದ್ದರೂ ಸಹ ಅವರು ಹಾಕಿಕೊಟ್ಟ ಮಾರ್ಗ ನಮ್ಮ ಮುಂದಿದೆ. ಆ ಮಾರ್ಗದಲ್ಲಿ ನಾವು ಮುಂದೆ ಹೋಗಬೇಕಿದೆ. ಸೂರಿಯವರು ಜನರ ಮನಸ್ಸನ್ನು ಬಲ್ಲ ನಾಯಕರಾಗಿದ್ದರು. ಜನರಿಗೆ ಏನು ಬೇಕೋ ಅದನ್ನೇ ಅವರು ನೀಡಿದರು. ಅವರು ಕಾರ್ಮಿಕರು-ಜನರು ರೂಪಿಸಿದ ಮುಖಂಡರಾಗಿದ್ದರು ಎಂದರು.



ಇದೇ ಸಂದರ್ಭದಲ್ಲಿ ಕಾಂ. ಜಿ.ಎನ್.ನಾಗರಾಜ್‌ರವರು ಕಾಂ. ಸೂರಿಯವರ ಜೀವನ ಮತ್ತು ಕೊಡುಗೆಯ ಕುರಿತು ವಿವರಿಸಿದರು.

ಕಾಂ. ಸೂರಿಯವರ ಚಿಂತನೆ ಆಲೋಚನೆಗಳನ್ನು ಅವರ ಅಪಾರ ತ್ಯಾಗ ಮತ್ತು ಹೋರಾಟಗಳಿಂದ ಕೂಡಿದ ಜೀವನವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅದನ್ನು ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಬಳಸಿಕೊಳ್ಳುವುದು - ಅಳವಡಿಸಿಕೊಳ್ಳುವುದು ಹೀಗೆ ನಮ್ಮ ಮುಂದೆ ಎರಡು ಬಗೆಯ ಕರ್ತವ್ಯಗಳಿವೆ ಎಂದು ಅವರು ಹೇಳಿದರು.

ಕಾಂ. ಸೂರಿಯವರು ತಾವು ವಿದ್ಯಾರ್ಥಿಯಾಗಿದ್ದಾಗಲೇ ಬ್ರಿಟೀಷರ ಪ್ರಭುತ್ವದ ವಿರುದ್ಧ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಜವಾಬ್ದಾರಿ ಸರ್ಕಾರವಿಲ್ಲದ ಸ್ಥಿತಿಯಲ್ಲಿ ಬಡ ವಿದ್ಯಾರ್ಥಿ ಸಮುದಾಯದ ಶಿಕ್ಷಣಕ್ಕೆ ಆಸರೆಯಾಗಿ ಬೆಂಗಳೂರು ನಗರದಲ್ಲಿ 40 ರ ದಶಕದಲ್ಲಿಯೇ ಬಡ ವಿದ್ಯಾರ್ಥಿಗಳಿಗಾಗಿ 'ವಿದ್ಯಾರ್ಥಿ ನಿಲಯ' ಸ್ಥಾಪಿಸಿ ಸಹವರ್ತಿಗಳೊಂದಿಗೆ ಸೇರಿ ನಿರ್ವಹಿಸುತ್ತಿದ್ದರು. ಪುಟ್ಬಾಲ್ ಮ್ಯಾಚ್-ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿ ಸಂಘಟಿಸಿ ಅದರಿಂದ ಬರುವ ಹಣವನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ನೀಡಲಾಗುತ್ತಿತ್ತು.



ನಾಡಿನ ಖ್ಯಾತ ಸಾಹಿತಿ ನಿರಂಜನ, ಹಿರಿಯ ಕಾರ್ಮಿಕ ಮುಂದಾಳು ಎಂ.ಎಸ್.ಕೃಷ್ಣನ್ ಮುಂತಾದವರು ಕಾಂ. ಸೂರಿಯವರೊಂದಿಗೆ ಅಂದಿನ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (AISF) ನಲ್ಲಿ ಸಕ್ರಿಯರಾಗಿದ್ದ ಮುಖಂಡರಾಗಿದ್ದರು.

ಇಂದು ಶಿಕ್ಷಣದಲ್ಲಿ ಎರಡು ವಿಭಾಗದಂತಾಗಿದೆ. ಹಣವುಳ್ಳವರಿಗೆ - ಶ್ರೀಮಂತರಿಗೆ ಉದ್ಯೋಗವಕಾಶವನ್ನು ಒದಗಿಸುವಂತಹ ಶಿಕ್ಷಣ ಒಂದು ಕಡೆ ಇದೆ. ಉತ್ತಮ ಉದ್ಯೋಗವಕಾಶ ದಕ್ಕದ ಶಿಕ್ಷಣ ಮಾತ್ರವೇ ಕಾರ್ಮಿಕರು ಮತ್ತು ಬಡವರ ಮಕ್ಕಳಿಗೆ ಎಂಬಂತಾಗಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ಬೆಂಗಳೂರಿನ ಕಾರ್ಮಿಕ ವರ್ಗ ಕಾಂ. ಸೂರಿಯವರನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು. ಇಂದು ವಿದ್ಯಾರ್ಥಿ ಚಳುವಳಿಯಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದ ರೈತರ ಮಕ್ಕಳೇ ಹೆಚ್ಚಾಗಿದ್ದಾರೆ. ಬೆಂಗಳೂರು ನಗರದ ಕಾರ್ಮಿಕರು ತಮ್ಮ ಮಕ್ಕಳನ್ನು ವಿದ್ಯಾರ್ಥಿ ಚಳುವಳಿಗೆ ಕಳಿಸಿ ಚಳುವಳಿಗೆ ಇನ್ನಷ್ಟು ಬಲ ತುಂಬಿದರೆ ಶಿಕ್ಷಣ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸುವುದು ಸಾಧ್ಯ. ಹೀಗೆ ಚಳುವಳಿಗೆ ಬಂದ ವಿದ್ಯಾರ್ಥಿಗಳು ಶಿಕ್ಷಣ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸುವುದು ಮಾತ್ರವಲ್ಲದೇ ತಮಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ ಎಂದರು.

ಕಾಂ. ಸೂರಿಯವರು ಅವಿಭಜಿತ ಕಮ್ಯುನಿಸ್ಟ್ ಪಕ್ಷ ಸಿಪಿಐ ನ ಮುಖಂಡರಾಗಿದ್ದರು. ಸ್ವಾತಂತ್ರ್ಯ ಬಂದ ಮೇಲೆ ನೆಹರೂ ಸರ್ಕಾರವೂ ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧ ಹೇರಿತು. ಈ ಸನ್ನಿವೇಶದಲ್ಲಿ ಕಾಂ. ಸೂರಿ ಮತ್ತು ಅವರ ಪೀಳಿಗೆಯ ಸಂಗಾತಿಗಳು ಕಾರ್ಮಿಕರನ್ನು ಸಂಘಟಿಸಿ ಹೋರಾಟ ರೂಪಿಸಲು ಹಾಗೂ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಲು ಪಟ್ಟಿರುವ ಶ್ರಮ-ಮಾಡಿದ ಅಪಾರ ತ್ಯಾಗಗಳನ್ನು ಈಗ ನಾವು ಅನುಭವಿಸುವುದಿರಲಿ ಅದನ್ನು ಅರ್ಥ ಮಾಡಿಕೊಳ್ಳುವುದು ಸಹ ಕಷ್ಟ. ಊಟ-ತಿಂಡಿಗಳಿಲ್ಲದೆ, ಕೈಯಲ್ಲಿ ಹಣವಿಲ್ಲದೆ ಭೂಗತರಾದ ಸ್ಥಿತಿಯಲ್ಲಿ ಕಾರ್ಮಿಕರನ್ನು, ರೈಲ್ವೆ ಕಾರ್ಮಿಕರನ್ನು ಸಂಘಟಿಸುವ ಸಲುವಾಗಿ ಪೊಲೀಸರ ಕಣ್ಣು ತಪ್ಪಿಸಿ ಹತ್ತಾರು ಮೈಲುಗಟ್ಟಲೆ ರೈಲ್ವೆ ಹಳಿಯ ಮೇಲೆ ನಡೆದೇ ಸಾಗಿ ಕಾರ್ಮಿಕರನ್ನು ಸಂಘಟಿಸಿ ಹೋರಾಟದ ಕಿಡಿ ಎಬ್ಬಿಸಿದ ರೋಚಕ ಕತೆ......

ಇಂತಹದ್ದೇ ಮತ್ತೊಂದು ಕಠಿಣ ಪ್ರಯಾಣದ ಪರಿಸ್ಥಿತಿಯಲ್ಲಿ ದೀರ್ಘ ಉಪವಾಸ-ವನವಾಸದಲ್ಲಿ ಶ್ರೀರಂಗಪಟ್ಟಣದ ಪ್ರದೇಶವೊಂದರಲ್ಲಿ ಸ್ಮಶಾನದಲ್ಲಿ ದೇಹವೊಂದರ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಬಿಟ್ಟುಹೋಗಿದ್ದ ಒಡೆದ ಮಡಕೆ-ಅಕ್ಕಿ ಉಪಯೋಗಿಸಿ ಅನ್ನ ಮಾಡಿಕೊಂಡು, ಸಮೀಪದ ಬಂಡೆಯೊಂದನ್ನು ತೊಳೆದು ಅದರ ಮೇಲೆ ಬರಿಯ ಅನ್ನವನ್ನು ತಿಂದು ಜೀವ ಉಳಿಸಿಕೊಂಡ ಕತೆ... ಹೀಗೆ ಕಾಂ.ಸೂರಿಯವರ ಬದುಕಿನ ಪುಟಗಳಲ್ಲಿ ತುಂಬಿಕೊಂಡಿರುವ ಹೃದಯಸ್ಪರ್ಶಿ ಘಟನೆಗಳ ಬಗ್ಗೆ ಕಾಂ. ಜಿ.ಎನ್.ನಾಗರಾಜ್ ರವರು ಹೇಳಿದಾಗ ಅಲ್ಲಿ ನೆರೆದಿದ್ದ ಪಕ್ಷದ ಮುಖಂಡರು - ಕಾರ್ಯಕರ್ತರು ಕಾಂ. ಸೂರಿಯವರ ಕುಟುಂಬ ವರ್ಗದವರು ಹಲವರು ಗದ್ಗದಿತರಾದರು. ಕೆಲವರ ಕಣ್ಣುಗಳಿಂದ ಹನಿಗಳು ಉದುರಿದವು.

'ಚರಿತ್ರೆಯನ್ನು ಅರ್ಥಮಾಡಿಕೊಳ್ಳಲಾಗದವರು ಭವಿಷ್ಯವನ್ನು ಕಟ್ಟುವುದು ಸಾಧ್ಯವಿಲ್ಲ. ಕಾಮ್ರೇಡ್ ಸೂರಿಯವರ ಬದುಕಿನ ಪಾಠವನ್ನು ನಾವು ವರ್ತಮಾನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಹಾಗೂ ಭವಿಷ್ಯವನ್ನು ರೂಪಿಸಲು ಬಳಸಿಕೊಳ್ಳಬೇಕು' ಎಂದೂ ಕಾಮ್ರೇಡ್ ಜಿ.ಎನ್.ನಾಗರಾಜ್ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಚಿವರು ಮಾತನಾಡಿ ಕಾಂ. ಸೂರ್ಯನಾರಾಯಣ ರಾವ್‌ರವರು ನಮ್ಮ ಕರ್ನಾಟಕ ರಾಜ್ಯದ ಒಬ್ಬ ಅಗ್ರಗಣ್ಯ ಕಾರ್ಮಿಕ ಮುಖಂಡರು. ಗೌರವಾನ್ವಿತ ಹೋರಾಟಗಾರರು. ಅವರ ಮನೆ ಇರುವ ಅಡ್ಡರಸ್ತೆ ಬದಲಿಗೆ ಪಕ್ಕದ ಜಯನಗರ ಮುಖ್ಯರಸ್ತೆಗೆ ಅವರ ಹೆಸರನ್ನು ನಾನು ಸಂತೋಷದಿಂದಸೂಚಿಸಿದೆ. ಕಾರಣಾಂತರಗಳಿಂದ ತೀರ್ಮಾನದ ಜಾರಿ ತಡವಾಯಿತು.

ಇದೇ ಪ್ರದೇಶದ ಉದ್ಯಾನವನಕ್ಕೆ ಕಾಂ. ಸೂರ್ಯನಾರಾಯಣ ರಾವ್ ರವರ ಹೆಸರಿಡಬೇಕು. ಮಹಾನಗರ ಪಾಲಿಕೆ ಈ ಬಗ್ಗೆ ತಡ ಮಾಡಬಾರದು. ಕಾಂ. ಸೂರಿಯವರ ಸ್ಮರಣೆಗಾಗಿ ಕಾಂ. ಸೂರಿ ಭವನಕ್ಕೆ ನಿವೇಶನವನ್ನು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀಡಲು ನಾನೂ ಶಿಫಾರಸ್ಸು ಮಾಡುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದರೆ ಆ ವಿಚಾರದಲ್ಲಿಯೂ ಸಹಾಯ ಮಾಡುತ್ತೇನೆ. ಭವನ ನಿರ್ಮಾಣಕ್ಕೆ ಹಣದ ಸಹಾಯವನ್ನೂ ಮಾಡುತ್ತೇನೆ ಎಂದು ಅವರು ತಿಳಿಸಿದರು.

ಮಹಾನಗರ ಪಾಲಿಕೆ ಸದಸ್ಯ ಬಿ.ಸೋಮಶೇಖರ್ ಸ್ವಾಗತಿಸಿದರು. ಮತ್ತೊಬ್ಬ ಸದಸ್ಯರಾದ ಎನ್.ನಾಗರಾಜ್ ವಂದಿಸಿದರು. ಮತ್ತೊಬ್ಬ ಸದಸ್ಯ ಕೆ.ಎಸ್.ಸಮೀವುಲ್ಲಾ ವೇದಿಕೆಯಲ್ಲಿದ್ದರು. ಖ್ಯಾತ ಕಲಾವಿದರು - ಮೈಕೊ ಕಾರ್ಮಿಕರೂ ಆದ ಮೈಕೊ ಚಂದ್ರುರವರು ಕಾರ್ಯಕ್ರಮ ನಿರೂಪಿಸಿದರು.

ಮೈಕೊ ಕಾರ್ಮಿಕ ಸಂಗಾತಿಗಳು ರಸ್ತೆ ನಾಮಫಲಕದ ಬಳಿ ನಿಲ್ಲಿಸಿದ್ದ ಆಳೆತ್ತರದ ಕಾಂ. ಸೂರಿಯವರ ಕಟೌಟ್ ಸಂಗಾತಿಗಳ ಹಾಗೂ ಜನರ ಗಮನ ಸೆಳೆಯಿತು. ಮೈಕೊ ಸೇರಿದಂತೆ ವಿವಿಧ ಕಾರ್ಖಾನೆಗಳ ಕಾರ್ಮಿಕ ಮುಖಂಡರು, ಕಾರ್ಮಿಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಕಾಂ. ಸೂರಿಯವರ ಕುಟುಂಬದ ಸದಸ್ಯರು, ಬಂಧುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾಂ. ಎಚ್.ಎನ್. ಗೋಪಾಲಗೌಡರು ಕೆ.ಆರ್.ಪುರಂ ಪ್ರದೇಶದಲ್ಲಿ ಕಾಂ. ಸೂರಿಯವರ ಭವನಕ್ಕೆಂದು ಸಂಗ್ರಹಿಸಲಾದ ಹತ್ತು ಸಾವಿರ ರೂಪಾಯಿಗಳನ್ನು ಟ್ರಸ್ಟ್‌ಗೆ ನೀಡಿದರು.

ಆರ್.ರಾಮಕೃಷ್ಣ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್

ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,

ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee, Editor : S.Y.GURUSHANTH